# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ

# VIJAYANAGARA SRI KRISHNADEVARAYA UNIVERSITY, BALLARI

# 2021 ವಾರ್ಷಿಕ ಸಾಲಿನ ಸಿಂಡಿಕೇಟ್ ಸಭೆಯ ನಡಾವಳಿ

# 2021 Annual Year Syndicate Meeting Proceedings


**ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ**
**ಜ್ಞಾನಸಾಗರ ಆವರಣ, ವಿನಾಯಕನಗರ, ಕಂಟೋನ್ಮೆಂಟ್, ಬಳ್ಳಾರಿ. – 583105**

Vijayanagara Sri Krishnadevaraya University,
Jnana Sagara Campus, Vinayaka Nagar, Cantonment, Ballari - 583105

**ಕುಲಸಚಿವರ ಕಛೇರಿ–08392–242709; ಮೊ : 9449956781**
**Email:** registrarps@vskub.ac.in

**Registrar's Office**: 08392-242709: **Mobile**: 94499 56781
**Email**: registrarps@vskub.ac.in

**ಪರಿವಿಡಿ**

Table of Contents


| ಕ್ರ.ಸಂ | ಸಿಂಡಿಕೇಟ್ ಸಭೆಯ ದಿನಾಂಕ | ಪುಟ ಸಂಖ್ಯೆ |
|---|---|---|
| 01.01 | 22.01.2021 | 01–02 |
| 01.02 | 05.02.2021 | 03–16 |
| 01.03 | 16.03.2021 | 17–20 |
| 01.04 | 30.03.2021 | 21–28 |
| 01.05 | 03.05.2021 | 29–30 |
| 01.06 | 12.05.2021 | 31–37 |
| 01.07 | 08.07.2021 | 38–43 |
| 01.08 | 12.08.2021 | 44–47 |
| 01.09 | 01.09.2021 | 48–49 |
| 01.10 | 22.09.2021 | 50–69 |
| 01.11 | 01.10.2021 | 70–77 |
| 01.12 | 12.10.2021 | 78–81 |

# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

## "ಜ್ಞಾನ ಸಾಗರ" ಆವರಣ, ಬಳ್ಳಾರಿ – 583 105

ಕುಲಸಚಿವರು

ಸಂಖ್ಯೆ: ವಿಶ್ರೀಕೃವಿಬ/ಸಿಂಡಿಕೇಟ್ ಸಭೆ–ನಡಾವಳಿ/2020–21/೩೩೧೪ ದಿನಾಂಕ: 09.01.2021

ಗೆ,
ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ದಿನಾಂಕ 22.01.2021 ರಂದು ಮಧ್ಯಾಹ್ನ 12.30 ಗಂಟೆಗೆ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ. 01.02.2021.

* * *

ದಿನಾಂಕ: 22.01.2021 ರಂದು ಮಧ್ಯಾಹ್ನ 12.30 ಗಂಟೆಗೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ: ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು(ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ಯಲಬುರ್ಗಾ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
"ಜ್ಞಾನ ಸಾಗರ" ಆವರಣ, ಬಳ್ಳಾರಿ – 583 105
ಕುಲಸಚಿವರು

# ದಿನಾಂಕ 22.01.2021 ರಂದು ಮಧ್ಯಾಹ್ನ 12.30 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿ

**ಐಟಂ ನಂ. 01:**

**ವಿಷಯ:** 2020–21ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಮತ್ತು ಶಿಕ್ಷಣ ಮಹಾವಿದ್ಯಾಲಯಗಳ ಸಂಯೋಜನ ವರದಿ ಸಲ್ಲಿಸುವ ಕುರಿತು.

*****

2020–21ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಮತ್ತು ಶಿಕ್ಷಣ ಮಹಾವಿದ್ಯಾಲಯಗಳ Consolidated Score and Recommendation report ನ್ನು ವಿಶೇಷ ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಸ್ನಾತಕ/ಸ್ನಾತಕೋತ್ತರ ಮತ್ತು ಶಿಕ್ಷಣ ಮಹಾವಿದ್ಯಾಲಯಗಳ 2020–21ನೇ ಸಾಲಿನ ಸ್ಥಳೀಯ ಪರಿವೀಕ್ಷಣಾ ಸಮಿತಿಯ ವರದಿಗಳನ್ನು ಪರಿಶೀಲಿಸಿ ಹೊಸ ಕಾಲೇಜುಗಳಿಗೆ ಅನುಮತಿ, ಹೆಚ್ಚುವರಿ ಕೋರ್ಸ್, ಹೆಚ್ಚುವರಿ ಕಾಂಬಿನೇಷನ್‌ಗಳಿಗೆ ಸ್ಥಳೀಯ ಪರಿವೀಕ್ಷಣಾ ಸಮಿತಿ ನೀಡಿದ ಶಿಫಾರಸ್ಸುಗಳನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು ಹಾಗೂ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲು ತೀರ್ಮಾನಿಸಿತು.

ಮುಂದುವರೆದು, ಸ್ನಾತಕ/ಸ್ನಾತಕೋತ್ತರ ಮತ್ತು ಶಿಕ್ಷಣ ಮಹಾವಿದ್ಯಾಲಯಗಳ 2020–21ನೇ ಸಾಲಿನ ಸ್ಥಳೀಯ ಪರಿವೀಕ್ಷಣಾ ಸಮಿತಿಯ ವರದಿಗಳನ್ನು ಪರಿಶೀಲಿಸಿ ನವೀಕರಣ, ಮುಂದುವರಿಕೆ, ಸಂಯೋಜನೆ ವಿಸ್ತರಣೆ ಹಾಗೂ ಇತರೆ ಸಂಯೋಜನೆಗಳಿಗೆ ಸಂಬಂಧಿಸಿದಂತೆ ಸ್ಥಳೀಯ ಪರಿವೀಕ್ಷಣಾ ಸಮಿತಿ ನೀಡಿದ ಶಿಫಾರಸ್ಸುಗಳನ್ನು ಸಭೆಯು ಅನುಮೋದಿಸಿತು.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
"ಜ್ಞಾನ ಸಾಗರ" ಆವರಣ, ಬಳ್ಳಾರಿ – 583 105
ಕುಲಸಚಿವರು

ಸಂಖ್ಯೆ: ವಿಶ್ರೀಕೃವಿಬ/ಸಿಂಡಿಕೇಟ್ ಸಭೆ–ನಡಾವಳಿ/2020–21/**2301** ದಿನಾಂಕ: 22.02.2021

ಗೆ,
ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ದಿನಾಂಕ 05.02.2021 ರಂದು ಬೆಳಿಗ್ಗೆ 11.00 ಗಂಟೆಗೆ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ. 16.02.2021

* * *

ದಿನಾಂಕ 05.02.2021 ರಂದು ಬೆಳಿಗ್ಗೆ 11.00 ಗಂಟೆಗೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ: ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು(ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ,ಕೊಪ್ಪಳ/ಯಲಬುರ್ಗಾ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 05.02.2021 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ

**➲ ಐಟಂ ನಂ. 01:**

ದಿನಾಂಕ. 20.10.2020 ರಂದು ಮಧ್ಯಾಹ್ನ 12.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮದ ವರದಿಯನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

**ತೀರ್ಮಾನ**

ದಿನಾಂಕ. 20.10.2020 ರಂದು ಮಧ್ಯಾಹ್ನ 12.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮದ ವರದಿಯನ್ನು ದೃಢೀಕರಿಸಿ ಅನುಮೋದಿಸಲಾಯಿತು.

**➲ ಐಟಂ ನಂ. 02:**

ವಿಷಯ: ಡಾ.ಜಿತೇಂದ್ರ ಕುಮಾರ್ ಸಿಂಗ್, ಸಹಾಯಕ ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಇವರಿಗೆ ನೀಡಿದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

ಉಲ್ಲೇಖ: 1. ಸದರಿಯವರ ಮನವಿ ಪತ್ರ ದಿನಾಂಕ: 06.11.2020.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 17.11.2020.

*****

ಡಾ. ಜಿತೇಂದ್ರ ಕುಮಾರ್ ಸಿಂಗ್, ಸಹಾಯಕ ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಇವರಿಗೆ Rajiv Gandhi Institute of Petroleum Technology, Amethi, Uttar Pradesh ನಲ್ಲಿ ಸಹ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು ವಿಶ್ವವಿದ್ಯಾಲಯದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ಕಾರಣ ಸದರಿಯವರಿಗೆ ನೀಡಿದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ**

Rajiv Gandhi Institute of Petroleum Technology, Amethi, Uttar Pradesh ನಲ್ಲಿ ಸಹ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿರುವುದನ್ನು ಸಭೆಯು ಅನುಸಮರ್ಥಿಸಿತು.

**➲ ಐಟಂ ನಂ. 03:**

**ವಿಷಯ:** ವಿಶ್ವವಿದ್ಯಾಲಯದ ಗಣಿತಶಾಸ್ತ್ರ ಅಧ್ಯಯನ ವಿಭಾಗಕ್ಕೆ ಮುಖ್ಯಸ್ಥರನ್ನು ನೇಮಿಸಿರುವ ಕುರಿತು.

**ಉಲ್ಲೇಖ:** 1. ಈ ಕಛೇರಿ ಅಧಿಸೂಚನೆ ಸಂಖ್ಯೆ: ವಿಶ್ರೀಕೃವಿಬ/ಡಿಪಿಎಆರ್–ಬೋಧಕ/ಮುನೇ/2020–21/1719ದಿನಾಂಕ: 03.12.2020.
2. ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ: 02.12.2020.

*****

ವಿಶ್ವವಿದ್ಯಾಲಯದ ಗಣಿತಶಾಸ್ತ್ರ ಅಧ್ಯಯನ ವಿಭಾಗ ಅಧ್ಯಕ್ಷರಾಗಿದ್ದ ಪ್ರೊ. ವಿ.ಲೋಕೇಶ್, ಪ್ರಾಧ್ಯಾಪಕರು ಇವರ ಅವಧಿಯು ದಿನಾಂಕ: 02.12.2020ಕ್ಕೆ ಮುಕ್ತಾಯವಾದ ಹಿನ್ನೆಲೆಯಲ್ಲಿ ವಿಭಾಗದ ಮುಖ್ಯಸ್ಥರಾಗಿ ವಿಶ್ವವಿದ್ಯಾಲಯ ಪರಿನಿಯಮಾವಳಿ ಸಂಖ್ಯೆ: 07ರ ಉಪ ನಿಯಮ 02 (iii) (a) ರನ್ವಯ ಪ್ರೊ. ಕೆ.ವಿ. ಪ್ರಸಾದ್. ಪ್ರಾಧ್ಯಾಪಕರು, ಇವರನ್ನು ದಿನಾಂಕ: 03.12.2020 ರಿಂದ ಅನ್ವಯಿಸಿ 02 ವರ್ಷಗಳ ಅವಧಿಗೆ ವಿಭಾಗದ ಮುಖ್ಯಸ್ಥರಾಗಿ ನೇಮಿಸಿರುವುದನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಪ್ರೊ. ಕೆ.ವಿ. ಪ್ರಸಾದ್. ಪ್ರಾಧ್ಯಾಪಕರು, ಇವರನ್ನು ದಿನಾಂಕ: 03.12.2020 ರಿಂದ ಅನ್ವಯಿಸಿ 02 ವರ್ಷಗಳ ಅವಧಿಗೆ ವಿಭಾಗದ ಮುಖ್ಯಸ್ಥರೆಂದು ನೇಮಿಸಿದ್ದನ್ನು ಸಭೆಯು ಅನುಸಮರ್ಥಿಸಿತು.

**➲ ಐಟಂ ನಂ. 04:**

ವಿಷಯ: ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರಗಳಿಗೆ ನಿರ್ದೇಶಕರ ನೇಮಕಾತಿಯನ್ನು ಮಾಡಿದ್ದು, ಸಿಂಡಿಕೇಟ್ ಸಭೆಯ ಅನುಸಮರ್ಥನೆ ಕುರಿತು.

ಉಲ್ಲೇಖ:1. ಕಛೇರಿ ಆದೇಶ ಸಂಖ್ಯೆ: ವಿಶ್ರೀಕೃವಿಬ/ಕುಆಕಾ/ಸ್ನಾಕೇ-ನಿರ್ದೇಶಕರ ನೇಮಕಾತಿ/2020-21/1661 ದಿನಾಂಕ 30.11.2020

2. ಕಛೇರಿ ಆದೇಶ ಸಂಖ್ಯೆ: ವಿಶ್ರೀಕೃವಿಬ/ಕುಆಕಾ/ಸ್ನಾಕೇ-ನಿರ್ದೇಶಕರ ನೇಮಕಾತಿ/2020-21/1662 ದಿನಾಂಕ 30.11.2020

*****

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರಗಳಿಗೆ ನಿರ್ದೇಶಕರನ್ನು ನೇಮಕಾತಿ ಆದೇಶವನ್ನು ಮಾಡಲಾಗಿದೆ. ಸದರಿ ಆದೇಶವು ಮುಂದಿನ ಆದೇಶದವರೆಗೂ ಜಾರಿಯಲ್ಲಿದ್ದು, ತಿದ್ದುಪಡಿಗೆ ಒಳಪಟ್ಟಿರುತ್ತದೆ.

| ಕ್ರ.ಸಂ | ಸ್ನಾತಕೋತ್ತರ ಕೇಂದ್ರ | ಪ್ರಸ್ತುತ ನೇಮಕಾತಿ ಮಾಡಲಾದ ನಿರ್ದೇಶಕರ ಹೆಸರು | ಅನ್ವಯಿಸುವ ದಿನಾಂಕ |
|---|---|---|---|
| 01. | ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ, | ಡಾ. ಬಿ ರವಿ, ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ | 01.12.2020 |
| 02. | ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ | ಡಾ. ಮನೋಜ್ ಡೊಳ್ಳಿ, ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ | 01.12.2020 |

ಮುಂದುವರೆದು, ಸದರಿ ನೇಮಕಾತಿ ಆದೇಶವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರಗಳಿಗೆ ನಿರ್ದೇಶಕರನ್ನು ನೇಮಿಸಿದ ಆದೇಶವನ್ನು ಸಭೆಯು ಅನುಸಮರ್ಥಿಸಿತು.

**➲ ಐಟಂ ನಂ. 05:**

ವಿಷಯ: ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರ ಜ್ಯೇಷ್ಠತಾ ಪಟ್ಟಿಯ ಕುರಿತು.

ಉಲ್ಲೇಖ: 1. ಈ ಕಛೇರಿ ಅಧಿಸೂಚನೆ ಸಂಖ್ಯೆ: ವಿಶ್ರೀಕೃವಿಬ/ಡಿಪಿಎಆರ್-ಬೋಧಕ/2020-21/1390 ದಿನಾಂಕ: 23.10.2020.

2. ಸಹಾಯಕ ಪ್ರಾಧ್ಯಾಪಕರ ಜ್ಯೇಷ್ಠತಾ ಸಮಿತಿಯ ವರದಿ ದಿ.28.10.2020.

*****

ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರ ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸಲು ರಚಿಸಿದ ಸಮಿತಿಯು ಕಾರ್ಯ ಪ್ರವೃತ್ತಗೊಂಡು ಉಲ್ಲೇಖ-01 ರಂತೆ ದಿನಾಂಕ 23/10/2020 ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರ ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸಲು ಸಭೆಯನ್ನು ಆಯೋಜಿಸಲಾಗಿದೆ.

ಸದರಿ ಸಮಿತಿಯು ಸರ್ಕಾರದ ನಿಯಮಗಳಂತೆ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರ ಕರಡು ಜ್ಯೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿದೆ. ಸದರಿ ಅಂತಿಮ ಜ್ಯೇಷ್ಠತಾ ಪಟ್ಟಿಯ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೊದನೆಗಾಗಿ ಮಂಡಿಸಿದೆ.

**ತೀರ್ಮಾನ**

ಸಹಾಯಕ ಪ್ರಾಧ್ಯಾಪಕರ ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸಲು ರಚಿಸಿದ ಸಮಿತಿಯು ಸಲ್ಲಿಸಿದ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರ ಕರಡು ಅಂತಿಮ ಜ್ಯೇಷ್ಠತಾ ಪಟ್ಟಿಯ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.

**➲ ಐಟಂ ನಂ. 06:**

ವಿಷಯ: ವಿಶ್ವವಿದ್ಯಾಲಯದ ರೇಟಿಂಗ್ ಕಾರ್ಯವನ್ನು ನಿರ್ವಹಿಸಿದ ವೆಚ್ಚ ರೂ.2.00 ಲಕ್ಷವನ್ನು ಪಾವತಿಸುವ ಕುರಿತು.

ಉಲ್ಲೇಖ: Accounts Officer, ಕ.ರಾ.ಉ.ಶಿ. ಪರಿಷತ್, ಬೆಂಗಳೂರು ಇವರ ಪತ್ರ ಸಂಖ್ಯೆ: KSHEC/Rating of Universities/2017-18/ 1765, ದಿನಾಂಕ: 16.12.2020.

****

Accounts Officer, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರು ವಿಶ್ವವಿದ್ಯಾಲಯದ 2016–17ನೇ ಸಾಲಿನ ರೇಟಿಂಗ್ ಕಾರ್ಯವನ್ನು ನಿರ್ವಹಿಸಿದ ವೆಚ್ಚ ರೂ. 2.00 ಲಕ್ಷ (ರೂಪಾಯಿ ಎರಡು ಲಕ್ಷ ಮಾತ್ರ) ವನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರಿಗೆ ಪಾವತಿಸುವಂತೆ ಸೂಚಿಸಿದ್ದು, ಈ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ ರೇಟಿಂಗ್ ಕಾರ್ಯವನ್ನು ನಿರ್ವಹಿಸಿದ ವೆಚ್ಚ ರೂ. 2.00 ಲಕ್ಷವನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರಿಗೆ ಪಾವತಿಸಲು ಸಭೆಯು ಅನುಮೋದಿಸಿತು.

**➲ ಐಟಂ ನಂ. 07:**

ವಿಷಯ: ಹೊರಗುತ್ತಿಗೆ ನೌಕರರಾದ ವಾಹನ ಚಾಲಕರಿಗೆ ದಿನಭತ್ಯೆಯನ್ನು ಮಂಜೂರಿಸುವ ಕುರಿತು.

***

ಹೊರಗುತ್ತಿಗೆ ಅಡಿಯಲ್ಲಿ ವಿಶ್ವವಿದ್ಯಾಲಯದ ವಾಹನಗಳಿಗೆ ಚಾಲಕರಾಗಿ ಕಾರ್ಯನಿರ್ವಹಿಸುತ್ತಿರುವ ವಾಹನ ಚಾಲಕರಿಗೆ ಕೆಲಸದ ನಿಮಿತ್ತ ವಿಶ್ವವಿದ್ಯಾಲಯದಿಂದ ಬಾಹ್ಯ ಸ್ಥಳಗಳಿಗೆ ತೆರಳಿದ ಸಮಯದಲ್ಲಿ ಸದರಿ ಚಾಲಕರಿಗೆ ದಿನಭತ್ಯೆಯನ್ನು ಮಂಜೂರಿಸಲು ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಹೊರಗುತ್ತಿಗೆ ವಾಹನ ಚಾಲಕರಿಗೆ ಕೆಲಸದ ನಿಮಿತ್ತ ವಿಶ್ವವಿದ್ಯಾಲಯದ ಬಾಹ್ಯ ಸ್ಥಳಗಳಿಗೆ ತೆರಳಿದ ಸಮಯದಲ್ಲಿ ಸದರಿ ಚಾಲಕರಿಗೆ ದಿನಭತ್ಯೆಯನ್ನು ಮಂಜೂರಿಸಲು ಸಭೆಯು ಅನುಮೋದಿಸಿದೆ.

**➲ ಐಟಂ ನಂ. 08:**

ವಿಷಯ: ಶ್ರೀ. ಸಂತೋಷ ಕುಮಾರ್ ಸಿ. ಸಹಾಯಕ ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಇವರಿಗೆ ನೀಡಿದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

ಉಲ್ಲೇಖ: 1. ಸದರಿಯವರ ಮನವಿ ಪತ್ರ ದಿನಾಂಕ: 07.12.2020.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 17.12.2020.

*****

ಶ್ರೀ. ಸಂತೋಷ ಕುಮಾರ್ ಸಿ, ಸಹಾಯಕ ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಇವರಿಗೆ ತುಮಕೂರು ವಿಶ್ವವಿದ್ಯಾಲಯ, ತುಮಕೂರು ಇತಿಹಾಸ ಮತ್ತು ಪುರಾತತ್ವ ವಿಭಾಗದಲ್ಲಿ ಅರೆಕಾಲಿಕವಾಗಿ ಪಿಹೆಚ್.ಡಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ವಿಶ್ವವಿದ್ಯಾಲಯದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ಕಾರಣ ಸದರಿಯವರಿಗೆ ನೀಡಿದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

### ತೀರ್ಮಾನ

ತುಮಕೂರು ವಿಶ್ವವಿದ್ಯಾಲಯ, ತುಮಕೂರು ಇತಿಹಾಸ ಮತ್ತು ಪುರಾತತ್ವ ವಿಭಾಗದಲ್ಲಿ ಅರೆಕಾಲಿಕವಾಗಿ ಪಿಹೆಚ್.ಡಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿರುವುದನ್ನು ಸಭೆಯು ಅನುಸಮರ್ಥಿಸಿತು.

**➲ ಐಟಂ ನಂ. 09:**

ವಿಷಯ: ಡಾ. ಬಸವರಾಜ ಹಟ್ಟಿ, ಸಹಾಯಕ ಪ್ರಾಧ್ಯಾಪಕರು, ಅನ್ವಯಿಕ ಭೂ ವಿಜ್ಞಾನ ಅಧ್ಯಯನ ವಿಭಾಗ ಇವರನ್ನು ಹುದ್ದೆ ಸಮೇತ ಮೈಸೂರು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮಾಡುವ ಕುರಿತು.

ಉಲ್ಲೇಖ: 1. ಶ್ರೀ. ಎಂ.ಪಿ ಕುಮಾರಸ್ವಾಮಿ, ಶಾಸಕರ, ಪತ್ರ ದಿನಾಂಕ 10.10.2019.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಪತ್ರ ಸಂಖ್ಯೆ: ಇಡಿ 58 ಯುಆರ್‌ಇ 2019 ದಿ. 29.12.2020.

****

ಉಲ್ಲೇಖ-01 ರಂತೆ ಶ್ರೀ. ಎಂ.ಪಿ ಕುಮಾರಸ್ವಾಮಿ, ಶಾಸಕರು, ಮೂಡಿಗೆರೆ ವಿಧಾನಸಭಾ ಕ್ಷೇತ್ರ ಇವರ ಮೂಲಕ ಡಾ. ಬಸವರಾಜ ಹಟ್ಟಿ, ಸಹಾಯಕ ಪ್ರಾಧ್ಯಾಪಕರು, ಅನ್ವಯಿಕ ಭೂ ವಿಜ್ಞಾನ ಅಧ್ಯಯನ ವಿಭಾಗ ವಿಶ್ರೀಕೃ ವಿಶ್ವವಿದ್ಯಾಲಯ ಇವರು ಮೈಸೂರು ವಿಶ್ವವಿದ್ಯಾಲಯಕ್ಕೆ ಅಂತರ ವಿಶ್ವವಿದ್ಯಾಲಯ ವರ್ಗಾವಣೆಯನ್ನು ಕೋರಿರುತ್ತಾರೆ. ಈ ಸಂಬಂಧ ಮೈಸೂರು ವಿಶ್ವವಿದ್ಯಾಲಯಕ್ಕೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮಾಹಿತಿ ಕೋರಿದ ಹಿನ್ನೆಲೆಯಲ್ಲಿ ಸದರಿ ವಿಶ್ವವಿದ್ಯಾಲಯ ಹುದ್ದೆಯ ಸಮೇತ ವರ್ಗಾವಣೆಯಾಗಿ ಬರುವುದಾದಲ್ಲಿ ಅವಕಾಶ ನೀಡಲು ಒಪ್ಪಿದೆ.

ಉಲ್ಲೇಖ-02 ರನ್ವಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹುದ್ದೆ ಸಮೇತ ಮೈಸೂರು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮಾಡುವ ಕುರಿತು ನಿಯಮಾನುಸಾರ ಪರಿಶೀಲಿಸಿ, ತಮ್ಮ ಸ್ಪಷ್ಟ ಅಭಿಪ್ರಾಯ ನೀಡುವಂತೆ ಕೋರಲು ನಿರ್ದೇಶಿಸಿದ್ದು, ಈ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

### ತೀರ್ಮಾನ

ಡಾ. ಬಸವರಾಜ ಹಟ್ಟಿ, ಸಹಾಯಕ ಪ್ರಾಧ್ಯಾಪಕರು, ಅನ್ವಯಿಕ ಭೂ ವಿಜ್ಞಾನ ಅಧ್ಯಯನ ವಿಭಾಗ ವಿಶ್ರೀಕೃ ವಿಶ್ವವಿದ್ಯಾಲಯ ಇವರನ್ನು ಹುದ್ದೆ ಸಮೇತ ಮೈಸೂರು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮಾಡುವ ಕುರಿತು ಸಭೆಯು ನಿಯಮಗಳನ್ನು ಪರಿಶೀಲಿಸಿ, ಸದರಿಯವರನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ಹುದ್ದೆ ರಹಿತವಾಗಿ ವರ್ಗಾವಣೆಯನ್ನು ಮಾಡಲು ಸಭೆಯಲ್ಲಿ ಒಮ್ಮತ ತೀರ್ಮಾನವನ್ನು ಕೈಕೊಳ್ಳಲಾಯಿತು.

**➲ ಐಟಂ ನಂ. 10:**

ವಿಷಯ: ಷಾ ಭವರ್‌ಲಾಲ್ ಶಿಕ್ಷಣ ಮತ್ತು ನ್ಯಾಷನಲ್ ಶಿಕ್ಷಣ ಮಹಾವಿದ್ಯಾಲಯಗಳು, ಹೊಸಪೇಟೆ ಈ ಕಾಲೇಜುಗಳಿಗೆ ವಿಧಿಸಿರುವ ದಂಡದಿಂದ ವಿನಾಯಿತಿ ನೀಡುವ ಕುರಿತು.

ಉಲ್ಲೇಖ: ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಪತ್ರ ಸಂಖ್ಯೆ: ಇಡಿ 17 ಯುಆರ್‌ಇ 2020 ದಿನಾಂಕ. 19.12.2020.

****

2018-19ನೇ ಸಾಲಿನ ಬಿ.ಇಡಿ ಪದವಿಯ 2ನೇ ಮತ್ತು 4ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳಿಗೆ ಮಿತಿ ಮೀರಿ ಆಂತರಿಕ ಅಂಕಗಳನ್ನು ನೀಡಿರುವ ಕುರಿತು ಹಾಗೂ ಪರೀಕ್ಷೆಗೆ ಗೈರು ಹಾಜರಾದ ವಿದ್ಯಾರ್ಥಿಗಳಿಗೂ ಅಂಕಗಳನ್ನು ನೀಡಿರುವ ಕುರಿತು ಪ್ರಾಂಶುಪಾಲರುಗಳು ಷಾ ಭವರ್ ಲಾಲ್ ಶಿಕ್ಷಣ ಮಹಾವಿದ್ಯಾಲಯ ಮತ್ತು ನ್ಯಾಷನಲ್ ಶಿಕ್ಷಣ ಮಹಾವಿದ್ಯಾಲಯ, ಹೊಸಪೇಟೆ, ಬಳ್ಳಾರಿ ಜಿಲ್ಲೆ ಇವರು ವಿಶ್ವವಿದ್ಯಾಲಯ ವಿಧಿಸಿರುವ ದಂಡದಿಂದ ವಿನಾಯಿತಿ ನೀಡುವಂತೆ ಕೋರಿದ ಹಿನ್ನೆಲೆಯಲ್ಲಿ ಉಲ್ಲೇಖಿತ ಪತ್ರದ ಮೂಲಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ನಿಯಮಾನುಸಾರ ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ತಿಳಿಸಿರುತ್ತಾರೆ. ಆದ ಕಾರಣ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ತೀರ್ಮಾನಕ್ಕಾಗಿ ಮಂಡಿಸಿದೆ.

## ತೀರ್ಮಾನ

ಸದರಿ ವಿಷಯದ ಕುರಿತು ಕೂಲಂಕುಷವಾಗಿ ಚರ್ಚಿಸಿ, ಷಾ ಭವರ್ ಲಾಲ್ ಶಿಕ್ಷಣ ಮಹಾವಿದ್ಯಾಲಯ, ನ್ಯಾಷನಲ್ ಶಿಕ್ಷಣ ಮಹಾವಿದ್ಯಾಲಯ, ಹೊಸಪೇಟೆ, ಮತ್ತು ಶ್ರೀಮತಿ ಲಕ್ಷ್ಮಿ ನಾನಾವಟೆ ಶಿಕ್ಷಣ ಮಹಾವಿದ್ಯಾಲಯ, ಸಂಡೂರು ಬಳ್ಳಾರಿ ಜಿಲ್ಲೆ ಇವರಿಗೆ ದಂಡದಿಂದ ಪೂರ್ಣ ವಿನಾಯಿತಿ ನೀಡದಿರಲು ಸಭೆಯು ತೀರ್ಮಾನಿಸಿತು.

ಮುಂದುವರೆದು, ಸದರಿ ವಿಷಯದ ಕುರಿತಾಗಿ ಈಗಾಗಲೇ ವಿಶ್ವವಿದ್ಯಾಲಯದಿಂದ ದಿನಾಂಕ 12.01.2021 ರಂದು ಜರುಗಿದ ಸತ್ಯ ಶೋಧನಾ ಸಮಿತಿ ಸಭೆಯಲ್ಲಿ ಈ ಕೆಳಗಿನಂತೆ ದಂಡ ಪರಿಷ್ಕರಣೆ ಮಾಡಲಾಗಿದೆ.

| ಕ್ರಸಂ | ಮಹಾವಿದ್ಯಾಲಯದ ಹೆಸರು | ಪ್ರಸ್ತುತ ವಿಧಿಸಿದ ದಂಡದ ಮೊತ್ತ | ಮಾರ್ಪಾಡು ಮಾಡಿದ ದಂಡದ ಮೊತ್ತ |
|---|---|---|---|
| 01 | ನ್ಯಾಷನಲ್ ಶಿಕ್ಷಣ ಮಹಾವಿದ್ಯಾಲಯ, ಹೊಸಪೇಟೆ. | ರೂ. 5,00,000/- | ರೂ. 2,00,000/- |
| 02 | ಷಾ ಭವರ್ ಲಾಲ್ ಶಿಕ್ಷಣ ಮಹಾವಿದ್ಯಾಲಯ, ಹೊಸಪೇಟೆ | ರೂ. 2,00,000/- | ರೂ. 1,00,000/- |
| 03 | ಶ್ರೀಮತಿ ಲಕ್ಷ್ಮಿ ನಾನಾವಟೆ ಶಿಕ್ಷಣ ಮಹಾವಿದ್ಯಾಲಯ, ಸಂಡೂರು | ರೂ. 1,00,000/- | ರೂ. 50,000/- |

ಮೂರು ಶಿಕ್ಷಣ ಮಹಾವಿದ್ಯಾಲಯಗಳಿಗೆ ಪರಿಷ್ಕೃತ ದಂಡ ಪಾವತಿಸುವಂತೆ ಪತ್ರ ಬರೆಯಲು ಹಾಗೂ ಈ ವಿಷಯದಲ್ಲಿ ಇನ್ನುಮುಂದೆ ಯಾವುದೇ ಪತ್ರ ವ್ಯವಹಾರಗಳಿಗೆ ಅವಕಾಶ ಇರುವುದಿಲ್ಲವೆಂದು ತಿಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಮುಂದುವರೆದು, ಸದರಿ ವಿಷಯವನ್ನು ಸರ್ಕಾರಕ್ಕೆ ಬರೆಯುವ ಪ್ರತ್ಯುತ್ತರದಲ್ಲಿ ನಮೂದಿಸಲು ನಿರ್ಧರಿಸಲಾಗಿದೆ.

**➲ ಐಟಂ ನಂ. 11:**

ವಿಷಯ: ಹತ್ತು ಸರ್ಕಾರಿ ಶಾಲೆಗಳನ್ನು ವಿಶ್ವವಿದ್ಯಾಲಯವು ದತ್ತು ತೆಗೆದುಕೊಳ್ಳುವ ಕುರಿತು.

ಉಲ್ಲೇಖ: ಪ್ರೊ. ಎಂ.ಆರ್ ದೊರೆಸ್ವಾಮಿ, ಇವರ ಪತ್ರ ಸಂಖ್ಯೆ: ಶಿಸುಸ-15/ವಿ.ವಿ.ಸ. ಶಾ. ಅಭಿ.ಬಗ್ಗೆ/2020-21 ದಿ. 14.12.2020.

*****

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಸರ್ಕಾರಿ ಶಾಲೆಗಳನ್ನು ದತ್ತು ಪಡೆದಿರುವ ಸಂಬಂಧ "ದತ್ತು ಸ್ವೀಕಾರ' ಪತ್ರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಪಡೆಯಲಾಗಿದ್ದು, ಈಗ ವಿಶ್ವವಿದ್ಯಾಲಯ ಮಟ್ಟದಲ್ಲಿ ಕಾರ್ಯಕ್ರಮ ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆಯನ್ನು ಹಮ್ಮಿಕೊಳ್ಳಬೇಕಾಗಿದೆ. ಈ ಕುರಿತು ಉಲ್ಲೇಖಿತ ಪತ್ರದ ಮೂಲಕ ವಿವರವಾದ ಕಾರ್ಯಸೂಚನೆಗಳನ್ನು ಕಳುಹಿಸಿದ್ದು, ವಿಶ್ವವಿದ್ಯಾಲಯ ಮಟ್ಟದಲ್ಲಿ ಸಿದ್ಧತೆಯನ್ನು ಕೈಗೊಳ್ಳಬೇಕಿದೆ. ಆದ ಕಾರಣ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಮಾಹಿತಿಗಾಗಿ ಹಾಗೂ ಸಿದ್ಧತೆ ಕುರಿತ ನಿರ್ದೇಶನಕ್ಕಾಗಿ ಸಲ್ಲಿಸಿದೆ.

## ತೀರ್ಮಾನ

ಹತ್ತು ಸರ್ಕಾರಿ ಶಾಲೆಗಳನ್ನು ವಿಶ್ವವಿದ್ಯಾಲಯವು "ದತ್ತು ಸ್ವೀಕಾರ' ಮಾಡುವ ಸಲುವಾಗಿ ಮಾನ್ಯ ಸಿಂಡಿಕೇಟ್ ಸದಸ್ಯರುಗಳು ತಮ್ಮ ಆಯ್ಕೆಯ ಸರ್ಕಾರಿ ಶಾಲೆಗಳ ಪಟ್ಟಿಯನ್ನು ಆದಷ್ಟು ಬೇಗನೆ ಸೂಚಿಸಲು ನಿರ್ಧರಿಸಲಾಯಿತು. ಮುಂದುವರೆದು, ಪ್ರೊ. ಎಂ.ಆರ್ ದೊರೆಸ್ವಾಮಿ, ಇವರ ಪತ್ರದಲ್ಲಿನ ವಿವರವಾದ ಕಾರ್ಯಸೂಚನೆಗಳಂತೆ ವಿಶ್ವವಿದ್ಯಾಲಯ ಮಟ್ಟದಲ್ಲಿ ದತ್ತು ಸ್ವೀಕಾರ ಅನುಷ್ಠಾನಗೊಳಿಸುವ ಅಂತಿಮ ನಿರ್ಧಾರವನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಕೈಗೊಳ್ಳಲು ನಿರ್ಧರಿಸಲಾಗಿದೆ.

**➲ ಐಟಂ ನಂ. 12:**

ವಿಷಯ: ಬಿ.ಇಡಿ ಮಹಾವಿದ್ಯಾಲಯಗಳ ಕಾರ್ಯನಿರ್ವಹಣಾ ಪರಿಶೀಲನೆ ವರದಿಯ ಕುರಿತು.

***

ಬಿ.ಇಡಿ ಮಹಾವಿದ್ಯಾಲಯಗಳ ಶೈಕ್ಷಣಿಕ ಚಟುವಟಿಕೆಗಳ ಕಾರ್ಯನಿರ್ವಹಣೆ ಕುರಿತು NCTE ಮತ್ತು ವಿಶ್ವವಿದ್ಯಾಲಯದ ಪರಿನಿಯಮಾವಳಿಗಳ ಅನುಸಾರ ಪರಿಶೀಲಿಸಿ ಸಮಗ್ರ ವರದಿಯನ್ನು ಸಲ್ಲಿಸಲು ಸಮಿತಿಗಳನ್ನು ರಚಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಸಮಿತಿಗಳು ಈ ಕೆಳಕಂಡ ದಿನಾಂಕಗಳಂದು ಭೇಟಿ ನೀಡಿ NCTE ಮತ್ತು ವಿಶ್ವವಿದ್ಯಾಲಯದ ಪರಿನಿಯಮಾವಳಿಗಳ ಅನುಸಾರ ಪರಿಶೀಲಿಸಿ ಸದರಿ ಸಮಿತಿಗಳ ಅಧ್ಯಕ್ಷರುಗಳು ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ತೀರ್ಮಾನಕ್ಕಾಗಿ ಸಲ್ಲಿಸಿದೆ.

| ಕ್ರಸಂ | ಬಿ.ಇಡಿ ಮಹಾವಿದ್ಯಾಲಯದ ಹೆಸರು | ಭೇಟಿ ನೀಡಿದ ದಿನಾಂಕ |
|---|---|---|
| 1. | ಶ್ರೀ. ಗವಿಸಿದ್ದೇಶ್ವರ ಶಿಕ್ಷಣ ಮಹಾವಿದ್ಯಾಲಯ, ಕೊಪ್ಪಳ | 29.10.2020 |
| 2. | ರಾಜೀವ್ ಗಾಂಧಿ ಶಿಕ್ಷಣ ಮಹಾವಿದ್ಯಾಲಯ, ಕೊಪ್ಪಳ | 29.10.2020 |
| 3. | ಫೀನಿಕ್ಸ್ ಶಿಕ್ಷಣ ಮಹಾವಿದ್ಯಾಲಯ, ಕೊಪ್ಪಳ | 29.10.2020 |
| | | |
| 1. | ಎಸ್.ಎ. ನಿಂಗೋಜಿರಾವ್ ಶಿಕ್ಷಣ ಮಹಾವಿದ್ಯಾಲಯ, ಯಲಬುರ್ಗಾ | 02.11.2020 |
| 2. | ಶ್ರೀ. ವಿಜಯಚಂದ್ರಶೇಖರ ಶಿಕ್ಷಣ ಮಹಾವಿದ್ಯಾಲಯ, ಕುಷ್ಟಗಿ | 02.11.2020 |
| | | |
| 1. | ಸೋನಿಯಾ ಗಾಂಧಿ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ | 03.11.2020 |
| 2. | ಶ್ರೀ. ಶರಬೇಶ್ವರ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ | 03.11.2020 |
| 3. | ಶ್ರೀಮತಿ. ಲಕ್ಷ್ಮೀ ನಾನಾವಟೆ ಬಿ.ಇಡಿ. ಕಾಲೇಜ್, ಸಂಡೂರು | 12.11.2020 |
| | | |
| 1. | ಶ್ರೀ. ಲಕ್ಷ್ಮೀ ವೆಂಕಟೇಶ್ವರ ಶಿಕ್ಷಣ ಮಹಾವಿದ್ಯಾಲಯ, ಕೂಡ್ಲಿಗಿ | 06.11.2020 |
| 2. | ಜ್ಞಾನಮಂಟಪ ಶಿಕ್ಷಣ ಮಹಾವಿದ್ಯಾಲಯ, ಕೂಡ್ಲಿಗಿ | 06.11.2020 |
| 3. | ಜ್ಞಾನಭಾರತಿ ಶಿಕ್ಷಣ ಮಹಾವಿದ್ಯಾಲಯ, ಕೂಡ್ಲಿಗಿ | 06.11.2020 |
| | | |
| 1. | ಕೊಟ್ಟೂರು ಸ್ವಾಮಿ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ | 07.11.2020 |
| 2. | ಶ್ರೀ. ಸತ್ಯಂ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ | 07.11.2020 |
| 3. | ರಾಯಲ್ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ. | 07.11.2020 |

**ತೀರ್ಮಾನ**

ಬಿ.ಇಡಿ ಮಹಾವಿದ್ಯಾಲಯಗಳ ಶೈಕ್ಷಣಿಕ ಚಟುವಟಿಕೆಗಳ ಕಾರ್ಯನಿರ್ವಹಣೆ ಕುರಿತು NCTE ಮತ್ತು ವಿಶ್ವವಿದ್ಯಾಲಯದ ಪರಿನಿಯಮಾವಳಿಗಳ ಅನುಸಾರ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯು ಕೂಲಂಕುಷವಾಗಿ ಪರಿಶೀಲಿಸಿ ಅನುಮೋದಿಸಿದೆ. ಸದರಿ ವರದಿಯಲ್ಲಿ ಪಟ್ಟಿ ಮಾಡಿದ ಬಿ.ಇಡಿ ಮಹಾವಿದ್ಯಾಲಯಗಳ ಕುರಿತ ನ್ಯೂನ್ಯತೆಗಳನ್ನು ನಿರ್ದಿಷ್ಟ ಅವಧಿಯಲ್ಲಿ ಸರಿಪಡಿಸಿಕೊಳ್ಳಲು ತಿಳಿಸಲು ಮತ್ತು ಈಗಾಗಲೇ ಭೇಟಿ ನೀಡಿದ ಸದರಿ ಸಮಿತಿಗಳು ಪುನಃ ಭೇಟಿ ನೀಡಿ ಪ್ರಗತಿಯನ್ನು ಮರು ಪರಿಶೀಲಿಸಲು ತೀರ್ಮಾನಿಸಲಾಯಿತು.

ಮುಂದುವರೆದು, ಫೆಬ್ರವರಿ ತಿಂಗಳಿನಲ್ಲಿ ಬಿ.ಇಡಿ 2 ಮತ್ತು 4ನೇ ಸೆಮಿಸ್ಟರ್ ಪರೀಕ್ಷೆಗಳು ಜರುಗಲಿರುವ ಹಿನ್ನೆಲೆಯಲ್ಲಿ ಬಿ.ಇಡಿ ಪರೀಕ್ಷಾ ಕೊಠಡಿಗಳಲ್ಲಿ ಸಿಸಿಟಿವಿಗಳನ್ನು ಅವಳವಡಿಸಿಕೊಂಡು, ಅವುಗಳ ಫುಟೇಜ್‌ಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಂತೆ ಮಹಾವಿದ್ಯಾಲಯಗಳಿಗೆ ನಿರ್ದೇಶನ ನೀಡಲು ಸಭೆಯಲ್ಲಿ ನಿರ್ಧರಿಸಲಾಯಿತು.

➲ ಐಟಂ ನಂ. 13:

ವಿಷಯ: ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರಗಳ ಅಭಿವೃದ್ಧಿ ಕುರಿತ ಪರಿಶೀಲನಾ ಸಮಿತಿಗಳ ವರದಿಯ ಕುರಿತು.

ಉಲ್ಲೇಖ: 1. ಕಛೇರಿ ಅಧಿಸೂಚನೆ: ಸಮ ಸಂಖ್ಯೆ 1811/1, 1811/2 ಮತ್ತು 1811/3 ದಿನಾಂಕ. 18.12.2020.

2. ಸ್ನಾತಕೋತ್ತರ ಕೇಂದ್ರಗಳ ಅಭಿವೃದ್ಧಿ ಕುರಿತ ಪರಿಶೀಲನಾ ಸಮಿತಿ ವರದಿ ದಿನಾಂಕ. 26.12.2020, 01.01.2021 ಮತ್ತು 24.12.2020.

****

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಸ್ನಾತಕೋತ್ತರ ಕೇಂದ್ರಗಳ ಅಭಿವೃದ್ಧಿ ಕುರಿತ ಪರಿಶೀಲನೆಗೆ ಸಂಬಂಧಪಟ್ಟಂತೆ ಉಲ್ಲೇಖ-01 ರಂತೆ ಪ್ರತಿ ಸ್ನಾತಕೋತ್ತರ ಕೇಂದ್ರಕ್ಕೆ ಪ್ರತ್ಯೇಕ ಉಪಸಮಿತಿಯನ್ನು ರಚಿಸಿ ಅಭಿವೃದ್ಧಿ ಕುರಿತ ಯೋಜನೆಗಳು, ಶೈಕ್ಷಣಿಕ ಚಟುವಟಿಕೆಗಳು ಮತ್ತು ಸಂಶೋಧನ ಚಟುವಟಿಕೆಗಳ ಕುರಿತ ವರದಿಯನ್ನು ಸಲ್ಲಿಸುವಂತೆ ಕೋರಲಾಗಿತ್ತು. ಉಲ್ಲೇಖ-02ರಂತೆ ಸದರಿ ಉಪಸಮಿತಿಗಳು ಸ್ನಾತಕೋತ್ತರ ಕೇಂದ್ರಗಳ ಅಭಿವೃದ್ಧಿ ಕುರಿತು

ಪರಿಶೀಲನೆ ನಡೆಸಿ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರಗಳ ಅಭಿವೃದ್ಧಿ ಕುರಿತ ಪರಿಶೀಲನಾ ಸಮಿತಿಗಳು ಸಲ್ಲಿಸಿದ ವರದಿಗಳನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು. ಮುಂದುವರೆದು, ಸದರಿ ಸ್ನಾತಕೋತ್ತರ ಕೇಂದ್ರಗಳಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿರುವ ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಯಿತು. ಇತರೆ ಅಭಿವೃದ್ಧಿ ಕಾರ್ಯಗಳನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲು ನಿರ್ಧರಿಸಲಾಯಿತು.

**➲ ಐಟಂ ನಂ. 14:**

ವಿಷಯ: ಸಹಾಯಕ ಪ್ರಾಧ್ಯಾಪಕರುಗಳ ಪರೀಕ್ಷಾ ಅವಧಿ ಮುಕ್ತಾಯದ ಘೋಷಣೆ ಕುರಿತು.

****

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಸೆಪ್ಟಂಬರ್/ಅಕ್ಟೋಬರ್ – 2018 ರಲ್ಲಿ ಸಹಾಯಕ ಪ್ರಾಧ್ಯಾಪಕರುಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲಾಗಿದ್ದು, ಈ ಕೆಳಕಂಡ ಪ್ರಾಧ್ಯಾಪಕರುಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಎರಡು ವರ್ಷಗಳ ಸೇವಾ ಅವಧಿಯನ್ನು ಪೂರ್ತಿಗೊಳಿಸಿರುತ್ತಾರೆ. ಕರ್ನಾಟಕ ಸಿವಿಲ್ ಸೇವೆಗಳ (ಪ್ರೊಬೇಷನ್) ನಿಯಮಗಳು, 1977 ರನ್ವಯ ಸಹಾಯಕ ಪ್ರಾಧ್ಯಾಪಕರುಗಳ ಪರೀಕ್ಷಾ ಅವಧಿ ಮುಕ್ತಾಯವಾಗಿದೆ ಎಂದು ಘೋಷಿಸಬೇಕಾಗಿರುತ್ತದೆ.

| ಕ್ರ.ಸಂ. | ಅಧ್ಯಾಪಕರ ಹೆಸರು | ವಿಭಾಗ | ವರ್ಗ | ವರದಿ ದಿನಾಂಕ | ಪರೀಕ್ಷಾ ಅವಧಿ ಮುಕ್ತಾಯದ ದಿನಾಂಕ | ವೈಯಕ್ತಿಕ ಮೌಲ್ಯಮಾಪನ ವರದಿ/ಷರಾ |
|---|---|---|---|---|---|---|
| 1) | ಶ್ರೀ. ಬಸವರಾಜ | ವಾಣಿಜ್ಯಶಾಸ್ತ್ರ | ಪ.ಜಾ | 15.09.2018 | 14.09.2020 | ತೃಪ್ತಿಕರವಾಗಿದೆ |
| 2) | ಡಾ. ಜ್ಯೋತಿಲಿಂಗ ವಿ. | ವಾಣಿಜ್ಯಶಾಸ್ತ್ರ | ಪ.ಪಂ | 10.09.2018 | 09.09.2020 | ತೃಪ್ತಿಕರವಾಗಿದೆ |
| 3) | ಡಾ. ನೀಲೂಫರ್ | ಗಣಿತಶಾಸ್ತ್ರ | ಸಾಮಾನ್ಯ | 10.09.2018 | 09.09.2020 | ತೃಪ್ತಿಕರವಾಗಿದೆ |
| 4) | ಶ್ರೀಮತಿ. ಸರಸ್ವತಿ | ಗಣಿತಶಾಸ್ತ್ರ | ಸಾಮಾನ್ಯ | 11.09.2018 | 10.09.2020 | ತೃಪ್ತಿಕರವಾಗಿದೆ |
| 5) | ಡಾ. ಅಶ್ವಿನ್‌ಕುಮಾರ್ | ಗಣಿತಶಾಸ್ತ್ರ | ಪ.ಜಾ | 08.09.2018 | 07.09.2020 | ತೃಪ್ತಿಕರವಾಗಿದೆ |
| 6)* | ಡಾ. ಅನಿತ | ಗಣಿತಶಾಸ್ತ್ರ | ಪ.ಪಂ | 01.10.2018 | 05.05.2021 | (ಸದರಿಯವರು 218 ದಿನಗಳ ವೇತನ ರಹಿತ ರಜೆ ಪಡೆದಿರುವ ಪ್ರಯುಕ್ತ ದಿನಾಂಕ: 30.09.2020ರ ಬದಲಾಗಿ 05.05.2021ಕ್ಕೆ ಪರೀಕ್ಷಾ ಅವಧಿಯನ್ನುಮುಂದೂಡಲಾಗಿದೆ) |
| 7) | ಡಾ. ಬಸವರಾಜ ಹಟ್ಟಿ | ಅನ್ವಯಿಕ ಭೂ ವಿಜ್ಞಾನ | ಸಾಮಾನ್ಯ | 10.09.2018 | 09.09.2020 | ತೃಪ್ತಿಕರವಾಗಿದೆ |
| 8) | ಶ್ರೀಮತಿ. ಎಂ. ಸಿದ್ದೇಶ್ವರಿ | ಸಸ್ಯಶಾಸ್ತ್ರ | ಸಾಮಾನ್ಯ | 11.09.2018 | 10.09.2020 | ತೃಪ್ತಿಕರವಾಗಿದೆ |
| 9) | ಡಾ. ಕವಿತಾ ಸಾಗರ್ | ಸಸ್ಯಶಾಸ್ತ್ರ | ಪ.ಜಾ | 10.09.2018 | 09.09.2020 | ತೃಪ್ತಿಕರವಾಗಿದೆ |
| 10) | ಡಾ. ಸಾಧು ಸೂರ್ಯಕಾಂತ್ ಶಾಂತಪ್ಪ | ರಸಾಯನಶಾಸ್ತ್ರ | ಪ.ಜಾ | 10.09.2018 | 09.09.2020 | ತೃಪ್ತಿಕರವಾಗಿದೆ |
| 11) | ಡಾ. ಪಾಂಡುರಂಗ ಆರ್. | ಅರ್ಥಶಾಸ್ತ್ರ | ಸಾಮಾನ್ಯ | 10.09.2018 | 09.09.2020 | ತೃಪ್ತಿಕರವಾಗಿದೆ |
| 12) | ಡಾ. ವೀರ ಪ್ರಸಾದ್ ಎಂ. | ರಾಜ್ಯಶಾಸ್ತ್ರ | ಸಾಮಾನ್ಯ | 11.09.2018 | 10.09.2020 | ತೃಪ್ತಿಕರವಾಗಿದೆ |
| 13) | ಡಾ. ಕೊಟ್ರೇಶ್ ಎಂ.ಜಿ. | ಭೌತಶಾಸ್ತ್ರ | ಸಾಮಾನ್ಯ | 11.09.2018 | 10.09.2020 | ತೃಪ್ತಿಕರವಾಗಿದೆ |
| 14) | ಡಾ. ಅವಿನಾಶ್ ಪಾಂಡುರಂಗ | ಭೌತಶಾಸ್ತ್ರ | ಪ.ಜಾ | 17.09.2018 | 16.09.2020 | ತೃಪ್ತಿಕರವಾಗಿದೆ |
| 15) | ಡಾ. ನಾಗಭೂಷಣ ವಿ.ಸಿ. | ಪ್ರಾಣಿಶಾಸ್ತ್ರ | ಸಾಮಾನ್ಯ | 29.09.2018 | 28.09.2020 | ತೃಪ್ತಿಕರವಾಗಿದೆ |
| 16) | ಕು. ಸ್ನೇಹಾ ಸುಮಾ ಹೆಗ್ಡೆ | ಪ್ರಾಣಿಶಾಸ್ತ್ರ | ಪ.ಜಾ | 26.09.2018 | 25.09.2020 | ತೃಪ್ತಿಕರವಾಗಿದೆ |
| 17) | ಡಾ. ಚಾಂದ್ ಬಾಷ ಎಂ. | ಇಂಗ್ಲೀಷ್ | ಸಾಮಾನ್ಯ | 19.09.2018 | 18.09.2020 | ತೃಪ್ತಿಕರವಾಗಿದೆ |
| 18) | ಶ್ರೀ. ವಿ. ಜಡೆಪ್ಪ | ಇಂಗ್ಲೀಷ್ | ಪ.ಜಾ | 26.09.2018 | 25.09.2020 | ತೃಪ್ತಿಕರವಾಗಿದೆ |
| 19) | ಶ್ರೀಮತಿ. ವಾತ್ಸಲ್ಯ ಆರ್. | ಇಂಗ್ಲೀಷ್ | ಪ.ಪಂ | 19.09.2018 | 18.09.2020 | ತೃಪ್ತಿಕರವಾಗಿದೆ |
| 20) | ಶ್ರೀ. ಸಂತೋಷ್ ಕುಮಾರ್ ಸಿ. | ಇತಿಹಾಸ ಮತ್ತು ಪುರಾತತ್ವ | ಸಾಮಾನ್ಯ | 10.10.2018 | 09.10.2020 | ತೃಪ್ತಿಕರವಾಗಿದೆ |
| 21) | ಡಾ. ಸಂಜಯ್ ಗಾಂಧಿ | ಸಮಾಜಶಾಸ್ತ್ರ | ಸಾಮಾನ್ಯ | 15.10.2018 | 14.10.2020 | ತೃಪ್ತಿಕರವಾಗಿದೆ |
| 22) | ಡಾ. ಶ್ರೀದೇವಿ ಆಲೂರ್ | ಮಹಿಳಾ ಅಧ್ಯಯನ | ಸಾಮಾನ್ಯ | 05.10.2018 | 04.10.2020 | ತೃಪ್ತಿಕರವಾಗಿದೆ |

| | | | | | | |
|---|---|---|---|---|---|---|
| 23) | ಶ್ರೀ. ಶ್ರೀ ಕೃಷ್ಣ ಭಾರದ್ವಾಜ್ ಹೆಚ್. | ಕಾನೂನು | ಸಾಮಾನ್ಯ | 04.10.2018 | 03.10.2020 | ತೃಪ್ತಿಕರವಾಗಿದೆ |
| 24) | ಶ್ರೀ. ರಾಮ ದಾಸ್ ಡಿ. | ಕಾನೂನು | ಪ.ಜಾ | 06.10.2018 | 05.10.2020 | ತೃಪ್ತಿಕರವಾಗಿದೆ |
| 25) | ಡಾ. ಕೃಷ್ಣವೇಣಿ ಆರ್. | ಸೂಕ್ಷ್ಮಜೀವಶಾಸ್ತ್ರ | ಸಾಮಾನ್ಯ | 04.10.2018 | 03.10.2020 | ತೃಪ್ತಿಕರವಾಗಿದೆ |
| 26) | ಡಾ. ಆಶಾಜ್ಯೋತಿ ಸಿ. | ಜೈವಿಕ ತಂತ್ರಜ್ಞಾನ | ಸಾಮಾನ್ಯ | 04.10.2018 | 03.10.2020 | ತೃಪ್ತಿಕರವಾಗಿದೆ |
| 27) | ಕು. ಚೈತ್ರಾ ಡಿ. | ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ | ಸಾಮಾನ್ಯ | 03.10.2018 | 02.10.2020 | ತೃಪ್ತಿಕರವಾಗಿದೆ |

ಮೇಲ್ಕಂಡ ಸಹಾಯಕ ಪ್ರಾಧ್ಯಾಪಕರುಗಳ ಪರೀಕ್ಷತಾ ಅವಧಿ ಮುಕ್ತಾಯದ ಮಾಹಿತಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಸಹಾಯಕ ಪ್ರಾಧ್ಯಾಪಕರುಗಳ ಪರೀಕ್ಷತಾ ಅವಧಿ ಮುಕ್ತಾಯದ ಘೋಷಣೆ ಕುರಿತಾಗಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ತೀರ್ಮಾನಿಸಲಾಯಿತು.

➲ **ಐಟಂ ನಂ. 15:**

ವಿಷಯ: ಮೆ: ಜೆಮಿನಿ ಗ್ರಾಫಿಕ್ಸ್ ಪ್ರೈವೇಟ್ ಲಿಮಿಟೆಡ್ ಇವರಿಂದ 2020-21ನೆ ಶೈಕ್ಷಣಿಕ ಸಾಲಿನ ಪ್ರಥಮ ಮತ್ತು ದ್ವಿತೀಯ ವರ್ಷದ ಆಂತರಿಕ ಮೌಲ್ಯಮಾಪನಕ್ಕೆ (Internal Assesment) ಉತ್ತರ (Answer) ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲು ಅನುಮತಿ ನೀಡುವ ಕುರಿತು.

ಉಲ್ಲೇಖ: 1. ಟೆಂಡರ್ ಪ್ರಕಟಣೆ ಸಂಖ್ಯೆ: VSKUB/EXAM/ANSWER BOOKLETS/ 2020-21/01, Date 24.04.2020.
2. ಪರೀಕ್ಷಾ ವಿಭಾಗದ ಕಛೇರಿ ಸರಬರಾಜು ಆದೇಶ ಸಂಖ್ಯೆ: ವಿಶ್ರೀಕೃವಿಬ/ಪರೀಕ್ಷಾ/ ಉಪಮು/2020-21/390 ದಿನಾಂಕ 17.07.2020.

******

2020-21ನೇ ಸಾಲಿಗೆ ಲಿಖಿತ ಪರೀಕ್ಷೆ ಉತ್ತರ ಪತ್ರಿಕೆಗಳ ಮುದ್ರಣಕ್ಕೆ ಸಂಬಂಧಿಸಿದಂತೆ ಉಲ್ಲೇಖ-2 ಪ್ರಕಾರ ಇ-ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಅತಿ ಕಡಿಮೆ ಬೆಲೆ ಸೂಚಿಸಿರುವ ಗುತ್ತಿಗೆದಾರರಾದ ಮೆ: ಜೆಮಿನಿ ಗ್ರಾಫಿಕ್ಸ್ ಪ್ರೈವೇಟ್ ಲಿಮಿಟೆಡ್, ಬೀದರ್ ಇವರಿಗೆ ಉತ್ತರ ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲು ಪರೀಕ್ಷಾ ವಿಭಾಗದಿಂದ ಕಛೇರಿ ಸರಬರಾಜು ಆದೇಶ ಸಂಖ್ಯೆ: ವಿಶ್ರೀಕೃವಿಬ/ಪರೀಕ್ಷಾ/ ಉಪಮು/2020-21/390 ದಿನಾಂಕ 17.07.2020 ರನ್ವಯ ಒಂದು ವರ್ಷದವರೆಗೆ ಉತ್ತರ ಪತ್ರಿಕೆ ಮುದ್ರಣ ಮಾಡಿ ಸರಬರಾಜು ಮಾಡಲು ಕಛೇರಿ ಆದೇಶ ನೀಡಲಾಗಿತ್ತು.

ಸದ್ಯ 2020-21ನೆ ಶೈಕ್ಷಣಿಕ ಸಾಲಿನ ಪ್ರಥಮ ಮತ್ತು ದ್ವಿತೀಯ ವರ್ಷದ ಆಂತರಿಕ ಮೌಲ್ಯಮಾಪನಕ್ಕೆ (Internal Assesment) ಪುಸ್ತಕಗಳನ್ನು ಆಡಳಿತ ವಿಭಾಗದಿಂದ ಮುದ್ರಿಸಬೇಕಾಗಿರುತ್ತದೆ. ಆದರೆ ಪುಸ್ತಕ ಮುದ್ರಣ ಟೆಂಡರ್ ಜಾಹಿರಾತು ವೆಚ್ಚ ಮತ್ತು ಟೆಂಡರ್ ಕರೆಯಲು ಸಮಯದ ಅಭಾವವಿರುವ ಕಾರಣ ಪರೀಕ್ಷಾ ವಿಭಾಗದಿಂದ ನೀಡಿದ ಆದೇಶದನ್ವಯ ಒಟ್ಟು ಅಂದಾಜು 50,000 ಪುಸ್ತಕಗಳನ್ನು ಸಿಂಡಿಕೇಟ್ ಸಭೆಯ ಅನುಮೋದಿತ ದರದಲ್ಲಿ ಮುದ್ರಿಸಲು ಆದೇಶ ನೀಡುವ ವಿಷಯದ ಕುರಿತು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಆಂತರಿಕ ಮೌಲ್ಯಮಾಪನ ಪ್ರಕ್ರಿಯೆಯನ್ನು ಶಿಸ್ತುಬದ್ಧವಾಗಿ ನಡೆಸಲು ಹಾಗೂ ಆಂತರಿಕ ಪರೀಕ್ಷೆಯ ದಾಖಲಾತಿಗಳನ್ನು ಏಕರೂಪದಲ್ಲಿ ತರುವ ಕ್ರಮ ಅಗತ್ಯವೆಂದು ಸಿಂಡಿಕೇಟ್ ಸಭೆಯು ತೀರ್ಮಾನಿಸಿರುತ್ತದೆ. ಮುಂದುವರೆದು, 1,00,000 (ಒಂದು ಲಕ್ಷ) ಆಂತರಿಕ ಮೌಲ್ಯಮಾಪನ (Internal Assesment) ಪುಸ್ತಕಗಳ ಮುದ್ರಣ ಕಾರ್ಯಕ್ಕಾಗಿ ಕೆಟಿಪಿಪಿ ನಿಯಮಾನುಸಾರ ಟೆಂಡರ್ ಪ್ರಕ್ರಿಯೆಯನ್ನು ಕೂಡಲೇ ಪ್ರಾರಂಭಿಸಲು ಸಭೆಯು ಅನುಮೋದಿಸಿದೆ.

**➲ ಐಟಂ ನಂ. 16:**

ವಿಷಯ: ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಯ ವರ್ಗಾವಣೆ ಬಗ್ಗೆ ಮಾರ್ಗಸೂಚಿಗಳನ್ನು ನಿರ್ಧರಿಸುವ ಕುರಿತು.

***

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಯ ವರ್ಗಾವಣೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ನಿರ್ಧರಿಸಲು ಸದರಿ ವಿಷಯವನ್ನು ಸಿಂಡಿಕೇಟ್ ಸಭೆಗೆ ಸಲ್ಲಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಯ ವರ್ಗಾವಣೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ರೂಪಿಸಲು ವಿಶ್ವವಿದ್ಯಾಲಯ ಮಟ್ಟದ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಹಾಗೂ ಒರ್ವ ಬಾಹ್ಯ ತಜ್ಞ ಸದಸ್ಯರನ್ನೊಳಗೊಂಡ ಉಪಸಮಿತಿ ರಚನೆ ಮಾಡಲು ತೀರ್ಮಾನಿಸಲಾಯಿತು. ಸದರಿ ಸಮಿತಿಯು ವಿಶ್ವವಿದ್ಯಾಲಯಕ್ಕೆ ಸೂಕ್ತವಾದ ಬೋಧಕ ಸಿಬ್ಬಂದಿಯ ವರ್ಗಾವಣೆ ಮಾರ್ಗಸೂಚಿಗಳನ್ನ ಸಿದ್ಧಪಡಿಸಿ ವರದಿ ಸಲ್ಲಿಸುವವರೆಗೆ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ಸಭೆಯು ಸೂಚಿಸಿತು.

**➲ ಐಟಂ ನಂ. 17:**

ವಿಷಯ: 25ನೇ ವರ್ಷದ ಹೆಚ್ಚುವರಿ ವೇತನ ಬಡ್ತಿಯನ್ನು ನೀಡಲು ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾವನೆಯನ್ನು ಮಂಡಿಸುವ ಕುರಿತು.

ಉಲ್ಲೇಖ: 1 ಸದರಿಯವರ ಮನವಿ ಪತ್ರಗಳು.

2. ಸರ್ಕಾರ ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012 (VIII) ದಿನಾಂಕ: 14.06.2012

***

ಈ ಕೆಳಕಂಡ ಬೋಧಕೇತರ ಸಿಬ್ಬಂದಿಗಳಿಗೆ ವಿಶ್ವವಿದ್ಯಾಲಯದಿಂದ 25 ವರ್ಷದ ಹೆಚ್ಚುವರಿ ವೇತನ ಬಡ್ತಿಯನ್ನು ನೀಡುವಂತೆ ಉಲ್ಲೇಖ-01 ರಂತೆ ಮನವಿ ಪತ್ರಗಳನ್ನು ಸಲ್ಲಿಸಿದ್ದಾರೆ.

| ಕ್ರಸ | ಹೆಸರು | ಉದ್ಯೋಗ | ಆವರಣ | ಕೆಲಸಕ್ಕೆ ಸೇರಿದ ದಿನಾಂಕ | 25 ವರ್ಷ ಪೂರ್ಣಗೊಳಿಸಿದ ದಿನಾಂಕ | ಮನವಿ ಪತ್ರ ದಿನಾಂಕ |
|---|---|---|---|---|---|---|
| 01 | ಶ್ರೀ.ಕೋಟಿ ಬಸವರಾಜ. | ಉದ್ಯಾನ ಕೆಲಸಗಾರರು | ಮುಖ್ಯ ಆವರಣ | 31.10.1995 | 30.10.2020 | 15.12.2020 |
| 02 | ಶ್ರೀ.ಕೆ. ಪಾಪಯ್ಯ | ಕ್ರೀಡಾ ಸಹಾಯಕರು | ಸ್ನಾ.ಕೇ ನಂದಿಹಳ್ಳಿ | 30.10.1995 | 29.10.2020 | 10.11.2020 |
| 03 | ಶ್ರೀ.ಮಾರೆಪ್ಪ ಪಾಲಯ್ಯ. | ಉದ್ಯಾನ ಕೆಲಸಗಾರರು | ಮುಖ್ಯ ಆವರಣ | 28.10.1995 | 27.10.2020 | 17.11.2020 |
| 04 | ಶ್ರೀ.ಪೋಳ್ ದತ್ತಪ್ಪ. | ಉದ್ಯಾನ ಕೆಲಸಗಾರರು | ಸ್ನಾ.ಕೇ. ನಂದಿಹಳ್ಳಿ | 30.10.2020 | 29.10.2020 | 05.11.2020 |
| 05 | ಶ್ರೀ.ಗೋನಾಳ್ ಸಕ್ರಪ್ಪ. | ಉದ್ಯಾನ ಕೆಲಸಗಾರರು | ಸ್ನಾ.ಕೇ ನಂದಿಹಳ್ಳಿ | 28.10.1995 | 27.10.2020 | 05.11.2020 |
| 06 | ಶ್ರೀ.ಬಿ ಹನುಮಂತಪ್ಪ. | ಉದ್ಯಾನ ಕೆಲಸಗಾರರು | ಸ್ನಾ.ಕೇ ನಂದಿಹಳ್ಳಿ | 30.10.1995 | 29.10.2020 | 05.11.2020 |
| 07 | ಶ್ರೀ. ಬಂಡ್ರೆಪ್ಪ ಸತ್ಯಪ್ಪ | ಜವಾನ | ಮುಖ್ಯ ಆವರಣ | 02.11.1995 | 01.11.2020 | 22.01.2021 |
| 08 | ಶ್ರೀ. ಸತ್ಯನಾರಾಯಣ ಡಿ ಎನ್ | ವೈರ್‌ಮೆನ್ | ಸ್ನಾ.ಕೇ ನಂದಿಹಳ್ಳಿ | 22.01.1996 | 21.01.2021 | 27.01.2021 |

ಉಲ್ಲೇಖ-02 ರ ಸರ್ಕಾರದ ಆದೇಶದ ಪ್ರಕಾರ ರಾಜ್ಯ ವೇತನ ಶ್ರೇಣಿಗಳಲ್ಲಿನ ಮೊದಲ 15 ಶ್ರೇಣಿಗಳಲ್ಲಿರುವ ಯಾವುದೇ ಒಂದು ಒಂದೇ ಹುದ್ದೆಯಲ್ಲಿ 25 ವರ್ಷಗಳ ಕಾಲ ಒಂದೂ ಪದೋನ್ನತಿ ಪಡೆಯದೆ ಮುಂದುವರಿದಿರುವ ಅಥವಾ ಮುಂದುವರಿಯುವ ಸರ್ಕಾರಿ ನೌಕರನಿಗೆ ಹುದ್ದೆಗೆ ನಿಗದಿಪಡಿಸಲಾದ ವೇತನ ಶ್ರೇಣಿಯಲ್ಲಿ, ಅಥವಾ ಅವನು ಹೊಂದಿರುವ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಅಥವಾ ಹಿರಿಯ ವೇತನ ಶ್ರೇಣಿಯಲ್ಲಿ, ಆಯಾ ಪ್ರಕರಣಕ್ಕನ್ವಯ, 2ನೇ ಹೆಚ್ಚುವರಿ ವೇತನ ಬಡ್ತಿಯನ್ನು ದಿನಾಂಕ 1ನೇ ಏಪ್ರಿಲ್ 2012 ರಿಂದ ಜಾರಿಗೆ ಬರುವಂತೆ ಅಥವಾ 25 ವರ್ಷಗಳ ಸೇವೆ ಪೂರ್ಣಗೊಳಿಸಿದ ದಿನಾಂಕದಿಂದ, ಇದರಲ್ಲಿ ಯಾವುದು ನಂತರವೋ, ಆ ದಿನಾಂಕದಿಂದ ಮಂಜೂರು ಮಾಡಲು ತಿಳಿಸಿದೆ.

ಸದರಿ ಆದೇಶವು ಇವರಿಗೆ ಅನ್ವಯವಾಗತಕ್ಕದ್ದಲ್ಲ:

1. ಈಗಾಗಲೇ ಕನಿಷ್ಠ ಒಂದು ಪದೋನ್ನತಿ ಪಡೆದಿರುವ ಸರ್ಕಾರಿ ನೌಕರರಿಗೆ.

2. ಕಾರ್ಯಭೃತ ಸಿಬ್ಬಂದಿ ವರ್ಗಕ್ಕೆ ಸೇರಿದವರಿಗೆ.
3. ಸಾದಿಲ್ವಾರು ನಿಧಿಯಿಂದ ಸಂಬಳ ನೀಡಲಾಗುತ್ತಿರುವವರಿಗೆ.
4. ಸ್ಥಳೀಯ ಅಭ್ಯರ್ಥಿಗಳಾಗಿ ನೇಮಕಾತಿಗೊಂಡವರಿಗೆ.
5. ಸಂಚಿತ ವೇತನ ಅಥವಾ ಅರೆಕಾಲಿಕ ಆಧಾರದ ಮೇರೆಗೆ ನೇಮಕಾತಿಗೊಂಡವರಿಗೆ.
6. ಸ್ವ ಇಚ್ಛೆಯಿಂದ ತಮ್ಮ ಪದೋನ್ನತಿಯನ್ನು ಬಿಟ್ಟುಕೊಟ್ಟ ಸರ್ಕಾರಿ ನೌಕರರಿಗೆ.
7. ಸರ್ಕಾರವು. ತನ್ನ ಆದೇಶದ ಮುಖಾಂತರ, ಈ ಆದೇಶಗಳ ಕಾರ್ಯಚರಣೆಯಿಂದ ನಿರ್ದಿಷ್ಟವಾಗಿ ಹೊರತುಪಡಿಸಬಹುದಾದ ಯಾವುದೇ ಇತರ ವರ್ಗ ಅಥವಾ ಪ್ರವರ್ಗದ ವ್ಯಕ್ತಿಗಳಿಗೆ.

ಸದರಿಯವರಿಗೆ 25 ವರ್ಷದ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಈ ಕುರಿತು ಸಭೆಯಲ್ಲಿ ಪರಿಶೀಸಲಾಗಿ ಸರ್ಕಾರದ ಆದೇಶದ ಪ್ರಕಾರ ರಾಜ್ಯ ವೇತನ ಶ್ರೇಣಿಗಳಲ್ಲಿನ ಮೊದಲ 15 ಶ್ರೇಣಿಗಳಲ್ಲಿರುವ ಯಾವುದೇ ಒಂದು ಒಂದೇ ಹುದ್ದೆಯಲ್ಲಿ 25 ವರ್ಷಗಳ ಕಾಲ ಒಂದೂ ಪದೋನ್ನತಿ ಪಡೆಯದೆ ಮುಂದುವರಿದಿರುವ ಅಥವಾ ಮುಂದುವರಿಯುವ ಸರ್ಕಾರಿ ನೌಕರನಿಗೆ ಹುದ್ದೆಗೆ ನಿಗದಿಪಡಿಸಲಾದ ವೇತನ ಶ್ರೇಣಿಯಲ್ಲಿ, ಅಥವಾ ಅವನು ಹೊಂದಿರುವ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಅಥವಾ ಹಿರಿಯ ವೇತನ ಶ್ರೇಣಿಯಲ್ಲಿ. ಆಯಾ ಪ್ರಕರಣಕ್ಕನ್ವಯ. 2ನೇ ಹೆಚ್ಚುವರಿ ವೇತನ ಬಡ್ತಿಯನ್ನು ದಿನಾಂಕ 1ನೇ ಏಪ್ರಿಲ್ 2012 ರಿಂದ ಜಾರಿಗೆ ಬರುವಂತೆ ಅಥವಾ 25 ವರ್ಷಗಳ ಸೇವೆ ಪೂರ್ಣಗೊಳಿಸಿದ ದಿನಾಂಕದಿಂದ, ಇದರಲ್ಲಿ ಯಾವುದು ನಂತರವೋ, ಆ ದಿನಾಂಕದಿಂದ ಸದರಿ ಎಂಟು ಬೋಧಕೇತರ ಸಿಬ್ಬಂದಿಗಳಿಗೆ 25ನೇ ವರ್ಷದ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಲು ಅನುಮೋದಿಸಿದೆ.

➲ **ಐಟಂ ನಂ. 18:**

ವಿಷಯ: ಖರೀದಿ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

ಉಲ್ಲೇಖ: ದಿನಾಂಕ 11.01.2021 ರಂದು ಜರುಗಿದ ಖರೀದಿ ಸಮಿತಿ ಸಭೆ

*****

ವಿಶ್ವವಿದ್ಯಾಲಯದ ಮುಖ್ಯ ಆವರಣ ಮತ್ತು ಎಲ್ಲಾ ಸ್ನಾತಕೋತ್ತರ ಕೇಂದ್ರಗಳ ವಿವಿಧ ವಿಭಾಗ/ಘಟಕಗಳಿಗೆ ಅಗತ್ಯತೆಯ ಅನುಸಾರವಾಗಿ ವಿವಿಧ ಉಪಕರಣ ಮತ್ತು ಸಾಮಗ್ರಿಗಳನ್ನು ಖರೀದಿಸಬೇಕಾದ ಕಾರಣ. ಸದರಿ ಖರೀದಿಯ ವಿವರಗಳನ್ನು ಹಾಗೂ ಪ್ರಕ್ರಿಯೆಯನ್ನು ದಿನಾಂಕ 11.01.2021 ರಂದು ಜರುಗಿದ ಖರೀದಿ ಸಮಿತಿ ಸಭೆಯಲ್ಲಿ ಮಂಡಿಸಿದೆ.

ಖರೀದಿ ಸಮಿತಿ ಸಭೆಯು ಎಲ್ಲಾ ಕಾರ್ಯಸೂಚಿಗಳನ್ನು ಪರಿಶೀಲಿಸಿ ತೀರ್ಮಾನಿಸಿದ ನಡಾವಳಿಯನ್ನು ಸಲ್ಲಿಸಲಾಗಿದ್ದು, ಈ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ದಿನಾಂಕ 11.01.2021 ರಂದು ಜರುಗಿದ ಖರೀದಿ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ದೃಢೀಕರಿಸಿ ಅನುಮೋದಿಸಿತು.

ಮುಂದುವರೆದು, ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರ ವಸತಿ ಗೃಹಗಳಲ್ಲಿ ಅವಶ್ಯವಿರುವ ಅಲ್ಮೆರಾಗಳನ್ನು ಖರೀದಿಸಲು ಮತ್ತು ವಿಶ್ವವಿದ್ಯಾಲಯಕ್ಕೆ ಅವಶ್ಯವಿರುವ ಜೆರಾಕ್ಸ್ ಯಂತ್ರಗಳನ್ನು ಬಾಡಿಗೆ ಮತ್ತು ನಿರ್ವಹಣೆ ಆಧಾರದ ಮೇಲೆ ಪಡೆಯಲು ಸಭೆಯು ಸೂಚಿಸಿದೆ.

ವಿಶ್ವವಿದ್ಯಾಲಯಕ್ಕೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹೊಸದಾಗಿ ನಿರ್ಮಿಸಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಸ್ನಾತಕೋತ್ತರ ವಸತಿನಿಲಯಗಳಿಗೆ ಅವಶ್ಯವಿರುವ ಸಾಮಗ್ರಿಗಳನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲ ನಿಧಿಯಿಂದ ಖರೀದಿ ಮಾಡಿ, ಸದರಿ ಮೊತ್ತವನ್ನು SCP/TSP ಅನುದಾನ ಅಡಿಯಲ್ಲಿ ಮರು ಹೊಂದಾಣಿಕೆ ಮಾಡಿಕೊಳ್ಳುವ ಸಂಬಂಧ ಸರ್ಕಾರದ ಅನುಮೋದನೆ ಪಡೆದು ಮರು ಹೊಂದಾಣಿಕೆ ಮಾಡಿಕೊಳ್ಳಲು ಸಭೆಯು ಸೂಚಿಸಿದೆ.

➲ ಐಟಂ ನಂ. 19:

ವಿಷಯ: ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

***

ದಿನಾಂಕ 12.01.2021 ರಂದು ಕಟ್ಟಡ ಸಲಹಾ ಸಮಿತಿ ಸಭೆಯು ಜರುಗಿದ್ದು, ಈ ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ದಿನಾಂಕ 12.01.2021 ರಂದು ಜರುಗಿದ ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ದೃಢೀಕರಿಸಿ ಅನುಮೋದಿಸಿತು.

➲ ಐಟಂ ನಂ. 20:

ವಿಷಯ: ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ವಿವಿಧ ಕೆಲಸಗಳ ನಿಮಿತ್ತ ಅಗತ್ಯವಾದ ವಾಹನಗಳನ್ನು ಬಾಡಿಗೆ ಆಧಾರದಲ್ಲಿ ಒದಗಿಸುವ ಕೆಲಸದ ಅಂದಾಜು ಪಟ್ಟಿಯನ್ನು ಅನುಮೋದಿಸಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲು ಅನುಮತಿಸುವ ಕುರಿತು.

****

ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗ, ಕಾಲೇಜು ಅಭಿವೃದ್ಧಿ ಮಂಡಳಿ ಮತ್ತು ಆಡಳಿತ ವಿಭಾಗದ ವಿವಿಧ ಕೆಲಸಗಳಿಗೆ ಅಗತ್ಯವಾದ ವಾಹನಗಳನ್ನು ಬಾಡಿಗೆ ಆಧಾರದಲ್ಲಿ ಒದಗಿಸುವ ಕೆಲಸವನ್ನು ಕೂಡಲೆ ಕೈಗೊಳ್ಳಬೇಕಾಗಿದ್ದು, ಸದರಿ ಕೆಲಸದ ವಾರ್ಷಿಕ ಅಂದಾಜು ಮೊತ್ತ ರೂ. 35.00 ಲಕ್ಷಗಳಾಗಲಿದೆ. ಅಲ್ಲದೆ ಸದರಿ ಕೆಲಸಕ್ಕೆ ತುರ್ತಾಗಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಬೇಕಾಗಿದೆ.

ಕಾರಣ ಮೇಲಿನ ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳಿಗೆ ಅಗತ್ಯವಾದ ವಾಹನಗಳನ್ನು ಬಾಡಿಗೆ ಆಧಾರದಲ್ಲಿ ಒದಗಿಸಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕೆಟಿಪಿಪಿ (KTPP) ನಿಯಾಮಾವಳಿಯನ್ವಯ ಟೆಂಡರ್ ಕರೆಯುವ ಸಂಬಂಧ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ವಿವಿಧ ಕೆಲಸಗಳ ನಿಮಿತ್ತ ಅಗತ್ಯವಾದ ವಾಹನಗಳನ್ನು ಬಾಡಿಗೆ ಆಧಾರದಲ್ಲಿ ಒದಗಿಸುವ ಕೆಲಸದ ಅಂದಾಜು ಪಟ್ಟಿಯನ್ನು ಅನುಮೋದಿಸಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲು ಸಭೆಯು ಅನುಮೋದಿಸಿದೆ.

ಮುಂದುವರೆದು, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಸುಗಮ ಸಂಚಾರದ ಅನುಕೂಲಕ್ಕಾಗಿ ನಗರದಿಂದ ವಿಶ್ವವಿದ್ಯಾಲಯದ ಆವರಣಕ್ಕೆ ಪ್ರತಿ ದಿನ ಬೆಳಿಗ್ಗೆ ಮತ್ತು ಸಾಯಂಕಾಲ ವಿಶ್ವವಿದ್ಯಾಲಯದ ಬಸ್ ಸಂಚಾರ ಪ್ರಾರಂಭಿಸಲು ಸಭೆಯು ತೀರ್ಮಾನಿಸಿದೆ, ಈ ಕುರಿತ ಬಸ್ ವ್ಯವಸ್ಥೆಗಾಗಿ ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿಯಲ್ಲಿನ ಬಸ್ ಸದುಪಯೋಗದ ಬಗ್ಗೆ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಿಂದ ಮಾಹಿತಿ ಪಡೆದು ಅವಶ್ಯವಿದ್ದಲ್ಲಿ ಕೇಂದ್ರ ಸ್ಥಾನಕ್ಕೆ ಹೊಸ ಬಸ್ ಖರೀದಿಸಲು ಒಮ್ಮತದ ತೀರ್ಮಾನಕ್ಕೆ ಬರಲಾಯಿತು.

## ಟೇಬಲ್ ಅಜೆಂಡಾ

➲ ಐಟಂ ನಂ. 01:

ವಿಷಯ: ದಿನಾಂಕ. 12.01.2021 ರಂದು ಜರುಗಿದ ಎಂ.ಪಿ.ಸಿ ಸಭೆಯ ನಡಾವಳಿಯ ಕುರಿತು.

***

ಸೆಪ್ಟಂಬರ್/ಅಕ್ಟೋಬರ್-2020ರ ಸ್ನಾತಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ದಿನಾಂಕ: 12.01.2021 ರಂದು ಪರೀಕ್ಷಾ ವಿಭಾಗದಲ್ಲಿ ಎಂ.ಪಿ.ಸಿ (ಅಕ್ರಮವೆಸಗಿದ ವಿದ್ಯಾರ್ಥಿಗಳ ವಿಚಾರಣಾ ಸಮಿತಿ) ಸಭೆಯನ್ನು ಆಯೋಜಿಸಲಾಗಿದ್ದು, ಸದರಿ ಸಭೆಗೆ ಒಟ್ಟು 19 ವಿದ್ಯಾರ್ಥಿಗಳ ಪೈಕಿ 14 ವಿದ್ಯಾರ್ಥಿಗಳು ಹಾಜರಾಗಿರುತ್ತಾರೆ. ಈ ವಿದ್ಯಾರ್ಥಿಗಳ ವಿವಿಧ ರೀತಿಯ ಅಕ್ರಮ ಪ್ರಕರಣಗಳನ್ನು ಸಭೆಯು ಆಲಿಸಿ ದಂಡ ಮತ್ತು ಶಿಕ್ಷೆಯನ್ನೊಳಗೊಂಡ ಸಭೆಯ ನಡಾವಳಿಗಳನ್ನು ಸಾಮಾನ್ಯ ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## ತೀರ್ಮಾನ

ದಿನಾಂಕ. 12.01.2021 ರಂದು ಜರುಗಿದ ಎಂ.ಪಿ.ಸಿ ಸಭೆಯ ನಡಾವಳಿಯನ್ನು ಸಭೆಯು ಕೂಲಂಕುಷವಾಗಿ ಪರಿಶೀಲಿಸಿ ಅನುಮೋದಿಸಿದೆ.

➲ **ಐಟಂ ನಂ. 02:**

ವಿಷಯ : ಪ್ರಶ್ನೆ ಪತ್ರಿಕೆಗಳ ಮುದ್ರಣದ ಒಪ್ಪಂದದ ಪ್ರಕ್ರಿಯೆ ಪ್ರಾರಂಭಿಸಲು ಹಾಗೂ ಕಳೆದ ಸಾಲಿನಲ್ಲಿ ಪ್ರಶ್ನೆ ಪತ್ರಿಕೆ ಸರಬರಾಜು ಮಾಡಿದ ಮುದ್ರಕರ ತಾತ್ಕಾಲಿಕ ಸೇವೆ ಪಡೆಯಲು ಆಡಳಿತಾತ್ಮಕ ಅನುಮೋದನೆ ಕುರಿತು.

*****

ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದ ಪ್ರಶ್ನೆಪತ್ರಿಕೆ ಮುದ್ರಿಸಿಕೊಡಲು ಈ ಹಿಂದೆ ಇದ್ದ ಒಪ್ಪಂದವು ಮುಕ್ತಾಯಗೊಂಡಿರುತ್ತದೆ. ಆದಕಾರಣ ಪ್ರಶ್ನೆಪತ್ರಿಕೆ ಮುದ್ರಣ ಕುರಿತ ಗೌಪ್ಯ ಕಾರ್ಯಕ್ಕೆ ಪುನಃ ಚಾಲನೆ ನೀಡಲು ಅನುಮೋದನೆಗಾಗಿ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿದೆ.

ಪ್ರಸ್ತುತ ಫೆಬ್ರವರಿ ತಿಂಗಳಿನಲ್ಲಿ ಬಿ.ಇಡಿ 2 ಮತ್ತು 4ನೇ ಸೆಮಿಸ್ಟರ್ ಪರೀಕ್ಷೆಗಳು ನಡೆಯುವುದರಿಂದ ಪ್ರಶ್ನೆಪತ್ರಿಕೆ ಮುದ್ರಣಕ್ಕೆ ಸಮಯದ ಅಭಾವ ಇರುತ್ತದೆ. ಮುದ್ರಕರೊಂದಿಗೆ ಹೊಸ ಒಡಂಬಡಿಕೆ ಆಗುವವರೆಗೂ ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸಿಕೊಡಲು, ಈ ಹಿಂದೆ ಜಾರಿಯಲ್ಲಿದ್ದ ಫರ್ಮ್‌ನ ಜೊತೆ ಒಡಂಬಡಿಕೆಯ ದರಗಳನ್ನೇ ಅನ್ವಯಿಸಿ ಆದೇಶ ನೀಡಲು ಆಡಳಿತಾತ್ಮಕ ಅನುಮೋದನೆ ಕುರಿತಾಗಿ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಗೆ ಸಲ್ಲಿಸಿದೆ.

## ತೀರ್ಮಾನ

ಪ್ರಶ್ನೆಪತ್ರಿಕೆ ಮುದ್ರಣ ಕುರಿತ ಗೌಪ್ಯ ಕಾರ್ಯಕ್ಕೆ ಸಂಬಂಧಿಸಿದಂತೆ ಸಭೆಯು ಸೂಕ್ತ ಮುದ್ರಕರೊಂದಿಗೆ ಒಪ್ಪಂದ ಮಾಡಿಕೊಳ್ಳಲು ಅನುಮೋದಿಸಿ, ಪ್ರಸ್ತುತ ಫೆಬ್ರವರಿ ತಿಂಗಳಿನಲ್ಲಿ ಬಿ.ಇಡಿ 2 ಮತ್ತು 4ನೇ ಸೆಮಿಸ್ಟರ್ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಮುದ್ರಣಕ್ಕೆ ಸಮಯದ ಅಭಾವ ಇರುವ ಹಿನ್ನೆಲೆಯಲ್ಲಿ ಈ ಹಿಂದೆ ಸದರಿ ಕಾರ್ಯಕ್ಕಾಗಿ 2019-20ನೇ ಸಾಲಿನಲ್ಲಿ ವಿಶ್ವವಿದ್ಯಾಲಯದೊಂದಿಗೆ ಜಾರಿಯಲ್ಲಿದ್ದ ಫರ್ಮ್‌ನ ಜೊತೆ ಈ ಹಿಂದಿನ ದರಗಳನ್ನು ಅನ್ವಯಿಸಿ ಮುದ್ರಿಸಿಕೊಳ್ಳಲು ಸಭೆಯು ಆಡಳಿತಾತ್ಮಕ ಅನುಮೋದನೆ ನೀಡಲು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

➲ **ಐಟಂ ನಂ. 03:**

ವಿಷಯ: ಪ.ಜಾ-ಪ.ಪಂ ವಿದ್ಯಾರ್ಥಿ/ವಿದ್ಯಾರ್ಥಿನಿಯರ ವಸತಿ ನಿಲಯ ಮತ್ತು ಸಾಮಾನ್ಯ ವಿದ್ಯಾರ್ಥಿನಿಯರ ವಸತಿ ನಿಲಯಗಳಿಗೆ ಮೆಸ್ ಟೆಂಡರ್ ಅವಧಿಯನ್ನು ವಿಸ್ತರಿಸುವ ಕುರಿತು.

**ಉಲ್ಲೇಖ:** 1. ಕಛೇರಿ ಆದೇಶ ಸಂಖ್ಯೆ:ವಿಶ್ರೀಕೃಬ/ಆಡಳಿತ/ಮೆಸ್‌ಟೆಂಡರ್‌ಪ್ರಕ್ರಿಯೆ/ಬಾವ/2019-20/1714/A. ದಿ. 17.03.2020.

2. ಕಛೇರಿ ಆದೇಶ ಸಂಖ್ಯೆ:ವಿಶ್ರೀಕೃಬ/ಆಡಳಿತ/ಮೆಸ್‌ಟೆಂಡರ್‌ಪ್ರಕ್ರಿಯೆ/ಬಾವ/2019-20/1712/A ದಿ. 17.03.2020.

3. ಮೆಸ್ ಟೆಂಡರ್‌ದಾರರ ಮನವಿ ಪತ್ರ ದಿನಾಂಕ 18.01.2021.

*****

ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿರುವ ಪ.ಜಾ-ಪ.ಪಂ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯ ಮತ್ತು ಸಾಮಾನ್ಯ ವಿದ್ಯಾರ್ಥಿನಿಯರ ವಸತಿ ನಿಲಯಗಳಿಗೆ ಉಲ್ಲೇಖ-1 ಮತ್ತು 2 ರನ್ವಯ ಜನಪರ ಸೇವಾ ಸಂಸ್ಥೆಗೆ ದಿನಾಂಕ:01-02-2020 ರಿಂದ 31-01-2021 ರವರೆಗೆ ಟೆಂಡರ್ ಅವಧಿಯನ್ನು ನಿಗದಿಪಡಿಸಲಾಗಿತ್ತು. ಆದರೆ ಕೊರೊನಾ ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ವಿಶ್ವವಿದ್ಯಾಲಯದ ಎಲ್ಲಾ ವಸತಿ ನಿಲಯಗಳನ್ನು ನಡೆಸಲಾರದ ಕಾರಣ ಮೆಸ್ ಗುತ್ತಿಗೆದಾರರು ಸಮಸ್ಯೆಗಳಿಗೆ ಒಳಗಾಗಿದ್ದೇವೆಂದು ಮತ್ತು ಮೆಸ್ ಟೆಂಡರ್ ಅವಧಿಯನ್ನು ವಿಸ್ತರಣೆ ಮಾಡುವಂತೆ ಕೋರಿ ಪತ್ರವನ್ನು ನೀಡಿದ್ದಾರೆ. ಸದರಿಯವರ ಮನವಿ ಪತ್ರ ಮತ್ತು ವಿಶ್ವವಿದ್ಯಾಲಯವು ನೀಡಿರುವ ಕರಾರು ಪತ್ರವನ್ನು ಪರಿಶೀಲಿಸಿ ಈ ಗುತ್ತಿಗೆದಾರರ ಮೆಸ್ ಟೆಂಡರ್ ಅವಧಿಯನ್ನು ವಿಸ್ತರಿಸಲು ಸಿಂಡಿಕೇಟ್ ಸಭೆಯ ತೀರ್ಮಾನ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

## ತೀರ್ಮಾನ

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿ, ಟೆಂಡರ್ ಪ್ರಕ್ರಿಯೆ ಮುಗಿದು ಆದೇಶ ಹೊರಡಿಸುವವರೆಗೆ ಅಲ್ಪಾವಧಿಗೆ ತಾತ್ಕಾಲಿಕವಾಗಿ ಸದ್ಯದ ಜನಪರ ಸೇವಾ ಸಂಸ್ಥೆಯ ಮೆಸ್ ಗುತ್ತಿಗೆದಾರರ ಅವಧಿಯ ವಿಸ್ತರಣೆಗೆ ಸಭೆಯು ಒಪ್ಪಿ ಅನುಮೋದಿಸಿದೆ.

➲ ಐಟಂ ನಂ. 04:

ವಿಷಯ: ಇಂಗ್ಲೀಷ್ ಅಧ್ಯಯನ ವಿಭಾಗಕ್ಕೆ ಮುಖ್ಯಸ್ಥರನ್ನು ನೇಮಿಸಿರುವ ಕುರಿತು.
ಉಲ್ಲೇಖ: 1. ಈ ಕಛೇರಿ ಅಧಿಸೂಚನೆ ಸಂಖ್ಯೆ: ವಿಶ್ರೀಕೃವಿಬ/ಆಡಳಿತ/ಮುನೇ/2019–20/961 ದಿನಾಂಕ: 16.07.2019

2. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000 ನಿಯಮ 40(1)(p) ಹಾಗೂ ವಿಶ್ವವಿದ್ಯಾಲಯದ ಪರಿನಿಯಮಾವಳಿ ಸಂಖ್ಯೆ: 07 ನಿಯಮ 02 (iii)
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 01.02.2021

*****

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000 ನಿಯಮ 40(1)(p) ಹಾಗೂ ವಿಶ್ವವಿದ್ಯಾಲಯದ ಪರಿನಿಯಮಾವಳಿ ಸಂಖ್ಯೆ: 07 ನಿಯಮ 02 (iii) ರನ್ವಯ ದಿನಾಂಕ: 01.02.2021 ರಿಂದ ಅನ್ವಯಿಸಿ ಡಾ. ರಾಬರ್ಟ್ ಜೋಸ್, ಪ್ರಾಧ್ಯಾಪಕರು, ಇಂಗ್ಲೀಷ್ ಅಧ್ಯಯನ ವಿಭಾಗ ಇವರನ್ನು ಮುಂದಿನ 02 ವರ್ಷಗಳ ಅವಧಿಗೆ ವಿಭಾಗದ ಮುಖ್ಯಸ್ಥರಾಗಿ ನೇಮಿಸಿರುವುದನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಡಾ. ರಾಬರ್ಟ್ ಜೋಸ್, ಪ್ರಾಧ್ಯಾಪಕರು, ಇಂಗ್ಲೀಷ್ ಅಧ್ಯಯನ ವಿಭಾಗ ಇವರನ್ನು ಮುಂದಿನ 02 ವರ್ಷಗಳ ಅವಧಿಗೆ ವಿಭಾಗದ ಮುಖ್ಯಸ್ಥರೆಂದು ನೇಮಿಸಿದ್ದನ್ನು ಸಭೆಯು ಅನುಸಮರ್ಥಿಸಿತು.

➲ ಐಟಂ ನಂ. 05:

ವಿಷಯ: ಯುಯುಸಿಎಂಎಸ್–ರಾಜ್ಯ ಯೋಜನಾ ನಿರ್ವಹಣಾ ಘಟಕದ ಪದನಿಮಿತ್ತ ಯೋಜನಾ ನಿರ್ವಾಹಕರನ್ನು ನಿಯೋಜಿಸುವ ಬಗ್ಗೆ.
ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ: ರಾಯೋನಿಘ/03/2021, ಬೆಂಗಳೂರು, ದಿ 29.01.2021

*****

ಉನ್ನತ ಶಿಕ್ಷಣ ಇಲಾಖೆಯಡಿಯ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳು ಮತ್ತು ಅವುಗಳ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳಲ್ಲಿ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ವ್ಯವಸ್ಥೆಯನ್ನು (UUCMS) ಅನುಷ್ಠಾನಗೊಳಿಸಲು ಡಾ. ನಿರಂಜನ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ಇವರನ್ನು ಯೋಜನಾ ನಿರ್ವಾಹಕರನ್ನಾಗಿ ಅನ್ಯ ಕಾರ್ಯ ನಿಮಿತ್ತ ನಿಯೋಜಿಸಲಾಗಿದ್ದು, ಸದರಿಯವರು (UUCMS) ರಾಜ್ಯ ಯೋಜನಾ ನಿರ್ವಹಣಾ ಘಟಕ, ರಾಜ್ಯ ಉನ್ನತ ಶಿಕ್ಷಣ ಪರಿಷತ್ ಇಲ್ಲಿ ವರದಿ ಮಾಡಿಕೊಂಡು, ಮುಂದಿನ ಆದೇಶದ ವರೆಗೆ ಕರ್ತವ್ಯ ನಿರ್ವಹಿಸಲು ನಿರ್ದೇಶಿಸಿದ್ದಾರೆ.

ಕಾರಣ ಕೆಸಿಎಸ್ಆರ್ ನಿಯಾಮಾವಳಿಗಳನ್ವಯ ಅನ್ಯ ಕಾರ್ಯ ನಿಮಿತ್ತ ನಿಯೋಜನೆ ಮೇರೆಗೆ ಬಿಡುಗಡೆ ಮಾಡಲು ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ತೀರ್ಮಾನ ಮತ್ತು ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ಡಾ. ನಿರಂಜನ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ಇವರನ್ನು ಯೋಜನಾ ನಿರ್ವಾಹಕರನ್ನಾಗಿ ರಾಜ್ಯ ನಿರ್ವಹಣಾ ಘಟಕ, ರಾಜ್ಯ ಉನ್ನತ ಶಿಕ್ಷಣ ಪರಿಷತ್ ಇಲ್ಲಿ ಅನ್ಯ ಕಾರ್ಯ ನಿಮಿತ್ತ ನಿಯೋಜಿಸಲಾಗಿದ್ದು, ಸದರಿಯವರು ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಸಾಕಷ್ಟು ಕಾರ್ಯಭಾರ ಹೊಂದಿರುವ ಹಿನ್ನೆಲೆಯಲ್ಲಿ ಡಾ. ನಿರಂಜನರವರ ಸೇವೆಯನ್ನು ವಿಶ್ವವಿದ್ಯಾಲಯದಲ್ಲಿ ಉಳಿಸಿಕೊಳ್ಳಲು ನಿರ್ಧಾರ ಕೈಗೊಳ್ಳಲಾಯಿತು.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

| | | |
|---|---|---|
| | ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ<br>"ಜ್ಞಾನ ಸಾಗರ" ಆವರಣ, ಬಳ್ಳಾರಿ – 583 105 | |
| ಕುಲಸಚಿವರು | | |

ಸಂಖ್ಯೆ: ವಿಶ್ರೀಕೃವಿಬ/ಸಿಂಡಿಕೇಟ್ ಸಭೆ–ನಡಾವಳಿ/2020–21/ ೩೩೩೭ ದಿನಾಂಕ: 29.03.2021

ಗೆ,
ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ದಿನಾಂಕ 16.03.2021 ರಂದು ಬೆಳಿಗ್ಗೆ 11.00 ಗಂಟೆಗೆ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಜರುಗಲಿರುವ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ. 16.03.2021

* * *

ದಿನಾಂಕ 16.03.2021 ರಂದು ಬೆಳಿಗ್ಗೆ 11.00 ಗಂಟೆಗೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ: ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು(ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ.ಕೊಪ್ಪಳ/ಯಲಬುರ್ಗಾ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

**ದಿನಾಂಕ 16.03.2021 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿ**

**ಐಟಂ ನಂ. 01:**

**ವಿಷಯ:** ಖಾಸಗಿ ಶಿಕ್ಷಣ ಮಹಾವಿದ್ಯಾಲಯಗಳ ಪ್ರವೇಶಾತಿ ಮಾನದಂಡಗಳ ಕುರಿತು.

*****

ವಿಜಯನಗರ ಶ್ರಿ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಅಧೀನದಲ್ಲಿನ ಬಿ.ಇಡಿ(ಶಿಕ್ಷಣ) ಮಹಾವಿದ್ಯಾಲಯಗಳಲ್ಲಿನ ಆಡಳಿತ ಮಂಡಳಿ ವ್ಯಾಪ್ತಿಯ ಅಡಿಯಲ್ಲಿನ ಸೀಟುಗಳ ಪ್ರವೇಶಾತಿಗಾಗಿ ಇರುವ ಮಾನದಂಡಗಳ ಕುರಿತು ಸಿಂಡಿಕೇಟ್ ಸಭೆಯ ಚರ್ಚೆ, ಪರಿಶೀಲನೆ ಮತ್ತು ತೀರ್ಮಾನಕ್ಕಾಗಿ ಮಂಡಿಸಿದೆ.

**ತೀರ್ಮಾನ**

ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಕಡ್ಡಾಯ ಹಾಜರಾತಿ ಕುರಿತು ವಿಸ್ತøತವಾಗಿ ಚರ್ಚೆ ನಡೆಸಿ, ಪ್ರವೇಶ ಪಡೆದ ಎಲ್ಲಾ ವಿದ್ಯಾರ್ಥಿಗಳು ತರಗತಿಗಳಿಗೆ ಕಡ್ಡಾಯ ಹಾಜರಾಗುವಂತೆ ಎಲ್ಲಾ ಮಹಾವಿದ್ಯಾಲಯಗಳಿಗೆ ಈ ಕೆಳಕಂಡ ಕಟ್ಟುನಿಟ್ಟಿನ ಕ್ರಮಕೈಗೊಳ್ಳುವಂತೆ ನಿರ್ದೇಶಿಸಲು ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು.

1. ವಿದ್ಯಾರ್ಥಿಗಳ ಹಾಜರಾತಿಯನ್ನು ಖಚಿತಪಡಿಸಿಕೊಳ್ಳಲು ಬಯೊಮೆಟ್ರಿಕ್ (Irish Based), app ಗಳು (Zoho & Keka) ಮತ್ತು CCTV ಈ ಮೂರು ವಿಧಾನಗಳನ್ನು ಕಡ್ಡಾಯವಾಗಿ ಅಳವಡಿಸಲು ಮಹಾವಿದ್ಯಾಲಯಗಳಿಗೆ ಸೂಚಿಸುವುದು. ಬಯೊಮೆಟ್ರಿಕ್ ಮತ್ತು ಸಿಸಿಟಿವಿಗಳು ಬ್ಯಾಟರಿಗಳ ಮೂಲಕ ನಿರಂತರ ಕರ್ತವ್ಯ ನಿರ್ವಹಿಸುವ ವ್ಯವಸ್ಥೆ ಮಾಡಲು ಸಹ ಸೂಚಿಸುವುದು.
2. ಮಹಾವಿದ್ಯಾಲಯಗಳ ಪ್ರಾಚಾರ್ಯರು ಬಯೊಮೆಟ್ರಿಕ್/ಸಿಸಿಟಿವಿ/ಆಪ್ ಮೂಲಕ ಹಾಜರಾತಿಯನ್ನು ಎಲ್ಲಾ ತರಗತಿಗಳಿಗೆ ಕಡ್ಡಾಯಗೊಳಿಸಿ, ಪ್ರತಿ ತಿಂಗಳಿಗೊಮ್ಮೆ ಹಾಜರಾತಿಯ ದಾಖಲೆಗಳನ್ನು ದೃಢಿಕರಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.

ವಿಶ್ವವಿದ್ಯಾಲಯದ ನಿಯೋಜಿತ ತಂಡವು ಆಗಾಗ್ಗೆ ಮಹಾವಿದ್ಯಾಲಯಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಹಾಜರಾತಿಯನ್ನು ಪರಿಶೀಲಿಸುವ ವ್ಯವಸ್ಥೆ ಮಾಡುವುದನ್ನು ನಿರ್ಧರಿಸಲಾಯಿತು.

ಮುಂದುವರೆದು, ಪರೀಕ್ಷಾ ಅಪರಾಧಕ್ಕೆ ಸಂಬಂಧಿಸಿದಂತೆ ಮೂರು ಶಿಕ್ಷಣ ಮಹಾವಿದ್ಯಾಲಯಗಳು ಪರಿಷ್ಕೃತ ದಂಡವನ್ನು ಪಾವತಿಸುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವುದು ಮತ್ತು ಭಾಗಶಃ ಮಾತ್ರ ದಂಡ ತುಂಬಿರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿ ಈ ಮೂರೂ ಶಿಕ್ಷಣ ಮಹಾವಿದ್ಯಾಲಯಗಳಿಗೆ ಕಠಿಣ ಕ್ರಮದ ಆದೇಶ ನೀಡಲು ಸಭೆಯು ಸೂಚಿಸಿತು.

➲ ಐಟಂ ನಂ. 02:

ವಿಷಯ: ಶ್ರೀ. ಆಕಾಶ್ ಬಿ, ಕಿರಿಯ ಅಭಿಯಂತರರು ಇವರನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿಯ ಪ್ರಾದೇಶಿಕ ಕಛೇರಿ, ಬೆಂಗಳೂರು ಇಲ್ಲಿಗೆ ನಿಯೋಜಿಸುವ ಕುರಿತು.

ಉಲ್ಲೇಖ: 1. ಸರ್ಕಾರ ಪತ್ರ ಸಂಖ್ಯೆ: ಇಡಿ 03 ಯುಆರ್‌ಇ 2021 ಬೆಂಗಳೂರು ದಿನಾಂಕ 16.02.2021.

2. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಪತ್ರ ಸಂಖ್ಯೆ: ವಿತಾವಿ/ಬಿಜಿಎಮ/ಡಿಪಿಎಆರ್/ಸಿಆರ್(1)/2020-21/1760 ದಿನಾಂಕ 24.02.2021

3. ಶ್ರೀ ಆಕಾಶ್ ಬಿ, ಕಿರಿಯ ಅಭಿಯಂತರರು ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ಇವರ ಮನವಿ ಪತ್ರ ದಿನಾಂಕ:26.02.2021

*****

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಉನ್ನತ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿ ಇವರು ಶ್ರೀ. ಆಕಾಶ್ ಬಿ. ಕಿರಿಯ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ಇವರನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯ ಪ್ರಾದೇಶಿಕ ಕಛೇರಿ, ಬೆಂಗಳೂರಿಗೆ ಮುಂದಿನ 05 ವರ್ಷಗಳ ಅವಧಿಗೆ ಈ ಕೂಡಲೇ ಜಾರಿಗೆ ಬರುವಂತೆ ನಿಯೋಜನೆ ಮೇಲೆ ನೇಮಕ ಮಾಡಿ ಅಧಿಸೂಚನೆ ಹೊರಡಿಸಿದ್ದಾರೆ.

ಮುಂದುವರೆದು, ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರು ಸಹ ಈ ಕುರಿತಾಗಿ ಸದರಿಯವರನ್ನು ಬಿಡುಗೊಳಿಸುವಂತೆ ಕೋರಿದ್ದು, ವಿಶ್ವವಿದ್ಯಾಲಯದ ಶ್ರೀ. ಆಕಾಶ್ ಬಿ. ಕಿರಿಯ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ಇವರು ಸಹ ಬಿಡುಗಡೆಗೊಳಿಸುವಂತೆ ಕೋರಿದ್ದಾರೆ.

ಕಾರಣ ಕೆಸಿಎಸ್‌ಆರ್ ನಿಯಾಮಾವಳಿಗಳನ್ವಯ ನಿಯೋಜನೆ ಮೇರೆಗೆ ಬಿಡುಗಡೆ ಮಾಡಲು ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ಶ್ರೀ. ಆಕಾಶ್ ಬಿ. ಕಿರಿಯ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ಇವರನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯ ಪ್ರಾದೇಶಿಕ ಕಛೇರಿ, ಬೆಂಗಳೂರು ಇಲ್ಲಿಗೆ ಮುಂದಿನ 05 ವರ್ಷಗಳ ಅವಧಿಗೆ ಈ ಕೂಡಲೇ ಜಾರಿಗೆ ಬರುವಂತೆ ನಿಯೋಜನೆ ಮೇಲೆ ವಿಶ್ವವಿದ್ಯಾಲಯದಿಂದ ಬಿಡುಗಡೆಗೊಳಿಸಲು ಸಭೆಯು ಅನುಮೋದಿಸಿದೆ.

➲ ಐಟಂ ನಂ. 03:

ವಿಷಯ: ಯುಯುಸಿಎಂಎಸ್-ರಾಜ್ಯ ಯೋಜನಾ ನಿರ್ವಹಣಾ ಘಟಕದ ಪದನಿಮಿತ್ತ ಯೋಜನಾ ನಿರ್ವಾಹಕರನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ: ರಾಯೋನಿಘ/03/2021, ಬೆಂಗಳೂರು, ದಿ 29.01.2021

*****

ಉನ್ನತ ಶಿಕ್ಷಣ ಇಲಾಖೆಯಡಿಯ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳು ಮತ್ತು ಅವುಗಳ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳಲ್ಲಿ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ವ್ಯವಸ್ಥೆಯನ್ನು (UUCMS) ಅನುಷ್ಠಾನಗೊಳಿಸಲು ಡಾ. ನಿರಂಜನ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ಇವರನ್ನು ಯೋಜನಾ ನಿರ್ವಾಹಕರನ್ನಾಗಿ ಅನ್ಯ ಕಾರ್ಯ ನಿಮಿತ್ತ ನಿಯೋಜಿಸಲಾಗಿದ್ದು, ಸದರಿಯವರು (UUCMS) ರಾಜ್ಯ ಯೋಜನಾ ನಿರ್ವಹಣಾ ಘಟಕ, ರಾಜ್ಯ ಉನ್ನತ ಶಿಕ್ಷಣ ಪರಿಷತ್ ಇಲ್ಲಿ ವರದಿ ಮಾಡಿಕೊಂಡು, ಮುಂದಿನ ಆದೇಶದ ವರೆಗೆ ಕರ್ತವ್ಯ ನಿರ್ವಹಿಸಲು ನಿರ್ದೇಶಿಸಿದ್ದಾರೆ.

ಕಾರಣ ಕೆಸಿಎಸ್‌ಆರ್ ನಿಯಾಮಾವಳಿಗಳನ್ವಯ ಅನ್ಯ ಕಾರ್ಯ ನಿಮಿತ್ತ ನಿಯೋಜನೆ ಮೇರೆಗೆ ಬಿಡುಗಡೆ ಮಾಡಲು ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ಅನುಮೋದನೆಗಾಗಿ ಮರುಮಂಡನೆ ಮಾಡಲಾಗಿದೆ.

**ತೀರ್ಮಾನ**

ಡಾ. ನಿರಂಜನ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ಇವರನ್ನು ಯುಯುಸಿಎಂಎಸ್–ರಾಜ್ಯ ಯೋಜನಾ ನಿರ್ವಹಣಾ ಘಟಕದ ಪದನಿಮಿತ್ತ ಯೋಜನಾ ನಿರ್ವಾಹಕರಾಗಿ ತಾತ್ಕಾಲಿಕವಾಗಿ ಅನ್ಯ ಕಾರ್ಯ ನಿಮಿತ್ತ ನಿಯೋಜನೆ ಮೇಲೆ ಬಿಡುಗಡೆಗೊಳಿಸಲು ಸಭೆಯ ನಿರ್ಧರಿಸಿತು. ಈ ವಿಶೇಷ ಕಾರ್ಯವನ್ನು ಆದಷ್ಟು ಬೇಗ ಯಶಸ್ವಿಯಾಗಿ ಪೂರ್ಣಗೊಳಿಸಿ ಮಾತೃ ಸಂಸ್ಥೆಗೆ ಮರಳುವ ನಿರ್ದೇಶನವನ್ನು ನೀಡುವಂತೆ ಸಭೆಯು ಸೂಚನೆಯನ್ನು ನೀಡಿತು.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

| | | |
|---|---|---|
| | ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ<br>"ಜ್ಞಾನ ಸಾಗರ" ಆವರಣ, ಬಳ್ಳಾರಿ – 583 105 | |
| ಕುಲಸಚಿವರು | | |

ಸಂಖ್ಯೆ: ವಿಶ್ರೀಕೃವಿಬ/ಸಿಂಡಿಕೇಟ್ ಸಭೆ–ನಡಾವಳಿ/2021–22/70 ದಿನಾಂಕ: 10.04.2021

ಗೆ,
ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ದಿನಾಂಕ 30.03.2021 ರಂದು ಬೆಳಿಗ್ಗೆ 11.00 ಗಂಟೆಗೆ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.
ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ. 09.04.2021

* * *

ದಿನಾಂಕ 30.03.2021 ರಂದು ಬೆಳಿಗ್ಗೆ 11.00 ಗಂಟೆಗೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,
ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ: ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು(ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ.ಕೊಪ್ಪಳ/ಯಲಬುರ್ಗಾ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

# ದಿನಾಂಕ 30.03.2021 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ

**ಐಟಂ ನಂ. 01:**

ದಿನಾಂಕ. 05.02.2021 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮದ ವರದಿಯನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

## ತೀರ್ಮಾನ

ದಿನಾಂಕ. 05.02.2021 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮದ ವರದಿಯನ್ನು ಸಭೆಯು ದೃಢೀಕರಿಸಿ ಅನುಮೋದಿಸಿತು.

**ಐಟಂ ನಂ. 02:**

**ವಿಷಯ:** ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ಘಟಿಕೋತ್ಸವ ಮತ್ತು ಇತ್ಯಾದಿ ವಿಶೇಷ ಸಂದರ್ಭಗಳಿಗಾಗಿ ಖಾದಿ ಮತ್ತು ಕೈಮಗ್ಗ ಬಟ್ಟೆಯನ್ನು ಅಳವಡಿಸಿಕೊಳ್ಳುವ ಕುರಿತು.

**ಉಲ್ಲೇಖ:** 1) ಕರ್ನಾಟಕ ರಾಜ್ಯಪಾಲರ ಸಚಿವಾಲಯ ಇವರ ಪತ್ರ ಸಂಖ್ಯೆ: ಜಿಎಸ್ 13 ಜಿಯುಎಮ್ 2020, ದಿನಾಂಕ: 12.01.2021.
2) ಈ ಕಛೇರಿ ಪತ್ರ ಸಂಖ್ಯೆ. ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸುತ್ತೋಲೆ/2020–21/2503 ದಿನಾಂಕ. 15.03.2021

***

ಕರ್ನಾಟಕ ರಾಜ್ಯಪಾಲರ ಸಚಿವಾಲಯ ಕಛೇರಿಯಿಂದ ವಿಶ್ವವಿದ್ಯಾಲಯಗಳಲ್ಲಿ ಜರುಗುವ ಘಟಿಕೋತ್ಸವ ಮತ್ತು ಇನ್ನಿತರೆ ಕಾರ್ಯಕ್ರಮಗಳಲ್ಲಿ ಖಾದಿ ಮತ್ತು ಕೈಮಗ್ಗ ಆಧಾರಿತ ಸಮವಸ್ತ್ರಗಳನ್ನು ಅಳವಡಿಸಿಕೊಳ್ಳಲು ಸೂಚಿಸಿರುತ್ತಾರೆ.

ಕಾರಣ, ವಿಶ್ವವಿದ್ಯಾಲಯಗಳಲ್ಲಿ ಜರುಗುವ ಘಟಿಕೋತ್ಸವ ಮತ್ತು ಇನ್ನಿತರೆ ಕಾರ್ಯಕ್ರಮಗಳಲ್ಲಿ ಖಾದಿ ಮತ್ತು ಕೈಮಗ್ಗ ಆಧಾರಿತ ಸಮವಸ್ತ್ರಗಳನ್ನು ಅಳವಡಿಸಿಕೊಳ್ಳಲು ಹಾಗೂ ವಿಶ್ವವಿದ್ಯಾಲಯದ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ವಾರದಲ್ಲಿ ಒಂದು ದಿನ ಖಾದಿ ಸಮವಸ್ತ್ರಗಳನ್ನು ಬಳಕೆ ಮಾಡುವುದನ್ನು ಕಡ್ಡಾಯ ಮಾಡುವ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## ತೀರ್ಮಾನ

ವಿಶ್ವವಿದ್ಯಾಲಯದಲ್ಲಿ ಜರುಗುವ ಘಟಿಕೋತ್ಸವ ಮತ್ತು ಇನ್ನಿತರೆ ವಿಶೇಷ ಕಾರ್ಯಕ್ರಮಗಳಲ್ಲಿ ಖಾದಿ ಮತ್ತು ಕೈಮಗ್ಗ ಆಧಾರಿತ ಸಮವಸ್ತ್ರಗಳನ್ನು ಅಳವಡಿಸಿಕೊಳ್ಳುವ ವಿಷಯದ ಕುರಿತಾಗಿ ಚರ್ಚಿಸಿದ ಸಭೆಯು ಖಾದಿ ಮತ್ತು ಕೈಮಗ್ಗ ಆಧಾರಿತ ಸಮವಸ್ತ್ರಗಳನ್ನು ಬಳಸಲು ಅನುಮೋದಿಸಿತು.

ಈ ಕುರಿತಾಗಿ ವಿಶ್ವವಿದ್ಯಾಲಯ ಮಟ್ಟದ ವಿಶೇಷ ಸಮಾರಂಭವನ್ನು ಹಮ್ಮಿಕೊಂಡು ಹಿರಿಯ ಸ್ವಾತಂತ್ರ್ಯ ಹೋರಾಟಗಾರರನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸಿ ಸದರಿ ಕಾರ್ಯಕ್ರಮದಲ್ಲೇ ವಾರದಲ್ಲಿ ಒಂದು ದಿನ (ಶುಕ್ರವಾರ) ಆ ದಿನವನ್ನು ಖಾದಿ ದಿನವೆಂದು ಘೋಷಿಸಲು ತೀರ್ಮಾನಿಸಲಾಯಿತು. ವಿಶ್ವವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿಗಳಿಗೆ, ವಿದ್ಯಾರ್ಥಿಗಳಿಗೆ ಮತ್ತು ಇನ್ನಿತರ ಸಿಬ್ಬಂದಿಗಳಿಗೆ ಖಾದಿ ವಸ್ತ್ರಧಾರಣೆಯನ್ನು ಕಡ್ಡಾಯಗೊಳಿಸಲು ನಿರ್ಧರಿಸಲಾಯಿತು.

ಮುಂದುವರೆದು, ಸದರಿ ತೀರ್ಮಾನವು ವಿಶ್ವವಿದ್ಯಾಲಯದ ಅನುದಾನಿತ ಮಹಾವಿದ್ಯಾಲಯಗಳು ಸಹಿತ ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಸೂಚಿಸಲಾಯಿತು. ಜೊತೆಗೆ ಗುಡಿ ಕೈಗಾರಿಕೆಯನ್ನು ಉತ್ತೇಜಿಸಲು ವಿಶೇಷ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿರುವ ಸಂಸ್ಥೆಗಳನ್ನು ವಿಶ್ವವಿದ್ಯಾಲಯಕ್ಕೆ ಆಹ್ವಾನಿಸಿ ವಿದ್ಯಾರ್ಥಿಗಳಲ್ಲಿ ಮತ್ತು ಸಿಬ್ಬಂದಿ ವರ್ಗದವರಿಗೆ ಅವುಗಳ ಬಳಕೆ ಕುರಿತು ಮನವರಿಕೆ ಮಾಡಿಕೊಡಲು ನಿರ್ಧರಿಸಲಾಯಿತು.

➲ **ಐಟಂ ನಂ. 03:**

ವಿಷಯ: ವಿಶ್ವವಿದ್ಯಾಲಯದಲ್ಲಿ ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶದ ಪರೀಕ್ಷೆಯನ್ನು ನಡೆಸುವ ಕುರಿತು.

ಉಲ್ಲೇಖ: 1. ದಿನಾಂಕ:09.07.2020 ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ

2. ಸಂಖ್ಯೆ:ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/2020–21/1013(A) ದಿನಾಂಕ: 04.09.2020

****

ದಿನಾಂಕ: 09.07.2020 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಸಿಂಡಿಕೇಟ್ ಸದಸ್ಯರಾದ ಡಾ.ಅಜ್ಜಯ್ಯ ಎಂ ಮತ್ತು ಶ್ರೀ ಹೆಚ್.ಇ ದಾದಾಕಲಂದರ್ ಇವರು ವಿಷಯವನ್ನು ಪ್ರಸ್ತಾಪಿಸಿ ವಿಶ್ವವಿದ್ಯಾಲಯದಲ್ಲಿ ಅವಧಿ ಮುಗಿದ ಸ್ನಾತಕ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶದ ಪರೀಕ್ಷೆಯನ್ನು ಆಯೋಜಿಸುವ ಕುರಿತು ಪರಿನಿಯಮಾವಳಿಗಳನ್ನು ಮಂಡಿಸಿರುತ್ತಾರೆ. ಸದರಿ ಸಭೆಯಲ್ಲಿ ಇದನ್ನು ಅನುಮೋದಿಸಿ ಸರ್ಕಾರ ಹಾಗೂ ಘನತೆವೆತ್ತ ರಾಜ್ಯಪಾಲರ ಅನುಮೋದನೆಗೆ ಕಳುಹಿಸಿಕೊಡಲು ತೀರ್ಮಾನಿಸಲಾಗಿದೆ. ಅದರಂತೆ ಉಲ್ಲೇಖ(2)ರನ್ವಯ, ವಿಶ್ವವಿದ್ಯಾಲಯದಲ್ಲಿ ಅವಧಿ ಮುಗಿದ ಸ್ನಾತಕ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶದ ಪರೀಕ್ಷೆಯನ್ನು ಆಯೋಜಿಸಲು ರಚಿಸಿದ ಕರಡು ಪರಿನಿಯಮಾಳಿಯನ್ನು ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗಿದೆ. ಆದರೆ ಇಲ್ಲಿಯವರೆಗೂ ಯಾವುದೇ ಒಪ್ಪಿಗೆಯು ಬಂದಿರುವುದಿಲ್ಲ. 2010 ರಿಂದ 2020 ರವರೆಗಿನ ಅವಕಾಶ ವಂಚಿತ ವಿದ್ಯಾರ್ಥಿಗಳು ಒಂದು ವಿಶೇಷ ಪರೀಕ್ಷಾ ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಆದ್ದರಿಂದ ಪದವಿ ಪರೀಕ್ಷೆಗೆ ಹಾಜರಾಗುವ ಅವಧಿ ಮಿತಿಯನ್ನು ಮೀರಿದ ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ ಒಂದು ಕೊನೆಯ ಅವಕಾಶವಾಗಿ ಸುವರ್ಣಾವಕಾಶದ ಪರೀಕ್ಷೆಯನ್ನು ನಡೆಸಲು ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

## ತೀರ್ಮಾನ

ಈ ವಿಷಯವಾಗಿ ಪರಿಶೀಲಿಸಿ ಚರ್ಚಿಸಿದ ಸಭೆಯು ವಿಶ್ವವಿದ್ಯಾಲಯ ಸ್ಥಾಪನೆಯಾಗಿ ಹತ್ತು ವರ್ಷಗಳೇ ಕಳೆದಿದ್ದೂ, 2010 ರಿಂದ 2020 ರವರೆಗಿನ ಅವಕಾಶ ವಂಚಿತ ವಿದ್ಯಾರ್ಥಿಗಳು ಒಂದು ವಿಶೇಷ ಪರೀಕ್ಷಾ ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಭೆಯು ಇದೊಂದು ವಿಶೇಷ ಪ್ರಕರಣ ಎಂದು ಪರಿಗಣಿಸಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಅವಕಾಶ ವಂಚಿತ ವಿದ್ಯಾರ್ಥಿಗಳಿಗೆ ಕೊನೆಯ ಅವಕಾಶವಾಗಿ ಸುವರ್ಣಾವಕಾಶದ ಪರೀಕ್ಷೆಯನ್ನು ನಡೆಸಲು ಒಪ್ಪಿದೆ. ಮುಂದುವರೆದು, ಈ ಪರೀಕ್ಷೆಯು ವಿಶ್ವವಿದ್ಯಾಲಯದ ದಶಮಾನೋತ್ಸವ ಆಚರಣೆಯ ಸಂದರ್ಭದಲ್ಲಿ ಒಂದು ವಿಶೇಷ ಅವಕಾಶ ಮತ್ತು ಕೊನೆಯ ಅವಕಾಶ ಎಂದು ಪರಿಗಣಿಸಿ ಅನುಮೋದಿಸಿತು.

➲ **ಐಟಂ ನಂ. 04:**

ವಿಷಯ: ಸಹಾಯಕ ಪ್ರಾಧ್ಯಾಪಕರುಗಳ ಪರೀಕ್ಷಾ ಅವಧಿ ಮುಕ್ತಾಯದ ಘೋಷಣೆ ಕುರಿತು.

ಉಲ್ಲೇಖ: ದಿನಾಂಕ 05.02.2021 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ 14

****

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಸೆಪ್ಟಂಬರ್/ಆಕ್ಟೋಬರ್ – 2018 ರಲ್ಲಿ ಸಹಾಯಕ ಪ್ರಾಧ್ಯಾಪಕರುಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲಾಗಿದ್ದು, ಈ ಕೆಳಕಂಡ ಅಧ್ಯಾಪಕರುಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಎರಡು ವರ್ಷಗಳ ಸೇವಾ ಅವಧಿಯನ್ನು ಪೂರ್ತಿಗೊಳಿಸಿರುತ್ತಾರೆ. ಕರ್ನಾಟಕ ಸಿವಿಲ್ ಸೇವೆಗಳ (ಪ್ರೊಬೇಷನ್) ನಿಯಮಗಳು, 1977 ರನ್ವಯ ಸಹಾಯಕ ಪ್ರಾಧ್ಯಾಪಕರುಗಳ ಪರೀಕ್ಷಾ ಅವಧಿ ಮುಕ್ತಾಯವಾಗಿದೆ ಎಂದು ಘೋಷಿಸಬೇಕಾಗಿರುತ್ತದೆ.

| ಕ್ರಸಂ. | ಅಧ್ಯಾಪಕರ ಹೆಸರು | ವಿಭಾಗ | ವರ್ಗ | ವರದಿ ದಿನಾಂಕ | ಪರೀಕ್ಷತಾ ಅವಧಿ ಮುಕ್ತಾಯದ ದಿನಾಂಕ | ವೈಯಕ್ತಿಕ ಮೌಲ್ಯಮಾಪನ ವರದಿ/ಷರಾ |
|---|---|---|---|---|---|---|
| 1) | ಶ್ರೀ. ಬಸವರಾಜ | ವಾಣಿಜ್ಯಶಾಸ್ತ್ರ | ಪ.ಜಾ | 15.09.2018 | 14.09.2020 | ತೃಪ್ತಿಕರವಾಗಿದೆ |
| 2) | ಡಾ. ಜ್ಯೋತಿಲಿಂಗ ವಿ. | ವಾಣಿಜ್ಯಶಾಸ್ತ್ರ | ಪ.ಪಂ | 10.09.2018 | 09.09.2020 | ತೃಪ್ತಿಕರವಾಗಿದೆ |
| 3) | ಡಾ. ನೀಲೂಫರ್ | ಗಣಿತಶಾಸ್ತ್ರ | ಸಾಮಾನ್ಯ | 10.09.2018 | 09.09.2020 | ತೃಪ್ತಿಕರವಾಗಿದೆ |
| 4) | ಶ್ರೀಮತಿ. ಸರಸ್ವತಿ | ಗಣಿತಶಾಸ್ತ್ರ | ಸಾಮಾನ್ಯ | 11.09.2018 | 10.09.2020 | ತೃಪ್ತಿಕರವಾಗಿದೆ |
| 5) | ಡಾ. ಅಶ್ವಿನ್‌ಕುಮಾರ್ | ಗಣಿತಶಾಸ್ತ್ರ | ಪ.ಜಾ | 08.09.2018 | 07.09.2020 | ತೃಪ್ತಿಕರವಾಗಿದೆ |
| 6)* | ಡಾ. ಅನಿತ | ಗಣಿತಶಾಸ್ತ್ರ | ಪ.ಪಂ | 01.10.2018 | 05.05.2021 | (ಸದರಿಯವರು 218 ದಿನಗಳ ವೇತನ ರಹಿತ ರಜೆ ಪಡೆದಿರುವ ಪ್ರಯುಕ್ತ ದಿನಾಂಕ: 30.09.2020ರ ಬದಲಾಗಿ 05.05.2021ಕ್ಕೆ ಪರೀಕ್ಷತಾ ಅವಧಿಯನ್ನುಮುಂದೂಡಲಾಗಿದೆ) |
| 7) | ಡಾ. ಬಸವರಾಜ ಹಟ್ಟಿ | ಅನ್ವಯಿಕ ಭೂ ವಿಜ್ಞಾನ | ಸಾಮಾನ್ಯ | 10.09.2018 | 09.09.2020 | ತೃಪ್ತಿಕರವಾಗಿದೆ |
| 8) | ಶ್ರೀಮತಿ. ಎಂ. ಸಿದ್ದೇಶ್ವರಿ | ಸಸ್ಯಶಾಸ್ತ್ರ | ಸಾಮಾನ್ಯ | 11.09.2018 | 10.09.2020 | ತೃಪ್ತಿಕರವಾಗಿದೆ |
| 9) | ಡಾ. ಕವಿತಾ ಸಾಗರ್ | ಸಸ್ಯಶಾಸ್ತ್ರ | ಪ.ಜಾ | 10.09.2018 | 09.09.2020 | ತೃಪ್ತಿಕರವಾಗಿದೆ |
| 10) | ಡಾ. ಸಾಧು ಸೂರ್ಯಕಾಂತ್ ಶಾಂತಪ್ಪ | ರಸಾಯನಶಾಸ್ತ್ರ | ಪ.ಜಾ | 10.09.2018 | 09.09.2020 | ತೃಪ್ತಿಕರವಾಗಿದೆ |
| 11) | ಡಾ. ಪಾಂಡುರಂಗ ಆರ್. | ಅರ್ಥಶಾಸ್ತ್ರ | ಸಾಮಾನ್ಯ | 10.09.2018 | 09.09.2020 | ತೃಪ್ತಿಕರವಾಗಿದೆ |
| 12) | ಡಾ. ವೀರ ಪ್ರಸಾದ್ ಎಂ. | ರಾಜ್ಯಶಾಸ್ತ್ರ | ಸಾಮಾನ್ಯ | 11.09.2018 | 10.09.2020 | ತೃಪ್ತಿಕರವಾಗಿದೆ |
| 13) | ಡಾ. ಕೊಟ್ರೇಶ್ ಎಂ.ಜಿ. | ಭೌತಶಾಸ್ತ್ರ | ಸಾಮಾನ್ಯ | 11.09.2018 | 10.09.2020 | ತೃಪ್ತಿಕರವಾಗಿದೆ |
| 14) | ಡಾ. ಅವಿನಾಶ್ ಪಾಂಡುರಂಗ | ಭೌತಶಾಸ್ತ್ರ | ಪ.ಜಾ | 17.09.2018 | 16.09.2020 | ತೃಪ್ತಿಕರವಾಗಿದೆ |
| 15) | ಡಾ. ನಾಗಭೂಷಣ ವಿ.ಸಿ. | ಪ್ರಾಣಿಶಾಸ್ತ್ರ | ಸಾಮಾನ್ಯ | 29.09.2018 | 28.09.2020 | ತೃಪ್ತಿಕರವಾಗಿದೆ |
| 16) | ಕು. ಸ್ನೇಹಾ ಸುಮಾ ಹೆಗ್ಡೆ | ಪ್ರಾಣಿಶಾಸ್ತ್ರ | ಪ.ಜಾ | 26.09.2018 | 25.09.2020 | ತೃಪ್ತಿಕರವಾಗಿದೆ |
| 17) | ಡಾ. ಚಾಂದ್ ಬಾಷ ಎಂ. | ಇಂಗ್ಲೀಷ್ | ಸಾಮಾನ್ಯ | 19.09.2018 | 18.09.2020 | ತೃಪ್ತಿಕರವಾಗಿದೆ |
| 18) | ಶ್ರೀ. ವಿ. ಜಡೆಪ್ಪ | ಇಂಗ್ಲೀಷ್ | ಪ.ಜಾ | 26.09.2018 | 25.09.2020 | ತೃಪ್ತಿಕರವಾಗಿದೆ |
| 19) | ಶ್ರೀಮತಿ. ವಾತ್ಸಲ್ಯ ಆರ್. | ಇಂಗ್ಲೀಷ್ | ಪ.ಪಂ | 19.09.2018 | 18.09.2020 | ತೃಪ್ತಿಕರವಾಗಿದೆ |
| 20) | ಶ್ರೀ. ಸಂತೋಷ್ ಕುಮಾರ್ ಸಿ. | ಇತಿಹಾಸ ಮತ್ತು ಪುರಾತತ್ವ | ಸಾಮಾನ್ಯ | 10.10.2018 | 09.10.2020 | ತೃಪ್ತಿಕರವಾಗಿದೆ |
| 21) | ಡಾ. ಸಂಜಯ್ ಗಾಂಧಿ | ಸಮಾಜಶಾಸ್ತ್ರ | ಸಾಮಾನ್ಯ | 15.10.2018 | 14.10.2020 | ತೃಪ್ತಿಕರವಾಗಿದೆ |
| 22) | ಡಾ. ಶ್ರೀದೇವಿ ಆಲೂರ್ | ಮಹಿಳಾ ಅಧ್ಯಯನ | ಸಾಮಾನ್ಯ | 05.10.2018 | 04.10.2020 | ತೃಪ್ತಿಕರವಾಗಿದೆ |
| 23) | ಶ್ರೀ. ಶ್ರೀ ಕೃಷ್ಣ ಭಾರದ್ವಾಜ್ ಹೆಚ್. | ಕಾನೂನು | ಸಾಮಾನ್ಯ | 04.10.2018 | 03.10.2020 | ತೃಪ್ತಿಕರವಾಗಿದೆ |
| 24) | ಶ್ರೀ. ರಾಮ ದಾಸ್ ಡಿ. | ಕಾನೂನು | ಪ.ಜಾ | 06.10.2018 | 05.10.2020 | ತೃಪ್ತಿಕರವಾಗಿದೆ |
| 25) | ಡಾ. ಕೃಷ್ಣವೇಣಿ ಆರ್. | ಸೂಕ್ಷ್ಮಜೀವಶಾಸ್ತ್ರ | ಸಾಮಾನ್ಯ | 04.10.2018 | 03.10.2020 | ತೃಪ್ತಿಕರವಾಗಿದೆ |
| 26) | ಡಾ. ಆಶಾಜ್ಯೋತಿ ಸಿ. | ಜೈವಿಕ ತಂತ್ರಜ್ಞಾನ | ಸಾಮಾನ್ಯ | 04.10.2018 | 03.10.2020 | ತೃಪ್ತಿಕರವಾಗಿದೆ |
| 27) | ಕು. ಚೈತ್ರಾ ಡಿ. | ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ | ಸಾಮಾನ್ಯ | 03.10.2018 | 02.10.2020 | ತೃಪ್ತಿಕರವಾಗಿದೆ |

ಮೇಲ್ಕಂಡ ಸಹಾಯಕ ಪ್ರಾಧ್ಯಾಪಕರುಗಳ ಪರೀಕ್ಷತಾ ಅವಧಿ ಮುಕ್ತಾಯದ ಮಾಹಿತಿಯನ್ನು ದಿನಾಂಕ 05.02.2021 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ 14 ರಂತೆ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮರು ಮಂಡಿಸಿದೆ.

## ತೀರ್ಮಾನ

27 ಸಂಖ್ಯೆ ಸಹಾಯಕ ಪ್ರಾಧ್ಯಾಪಕರುಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಎರಡು ವರ್ಷಗಳ ಸೇವಾ ಅವಧಿಯನ್ನು ಪೂರ್ತಿಗೊಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸಿವಿಲ್ ಸೇವೆಗಳ (ಪ್ರೊಬೇಷನ್) ನಿಯಮಗಳು, 1977 ರನ್ವಯ ಸಹಾಯಕ ಪ್ರಾಧ್ಯಾಪಕರುಗಳ ಪರೀಕ್ಷತಾ ಅವಧಿ ಮುಕ್ತಾಯದ ಘೋಷಣೆಯನ್ನು ಸಭೆಯು ಅನುಮೋದಿಸಿ, ಪ್ರಮಾಣ ಪತ್ರಗಳು ಸಂಬಂಧಪಟ್ಟ ಪ್ರಾಧಿಕಾರಗಳಿಂದ ಪರಿಶೀಲತವಾಗಿರುವ ಸಹಾಯಕ ಪ್ರಾಧ್ಯಾಪಕರುಗಳಿಗೆ ಮಾತ್ರ ಆದೇಶ ನೀಡಲು ಸೂಚಿಸಲಾಯಿತು.

➲ ಐಟಂ ನಂ. 05:

ವಿಷಯ: ಆತ್ಮನಿರ್ಭರ ಭಾರತ್ ಕಾರ್ಯಕ್ರಮಕ್ಕೆ ವಿಶ್ವವಿದ್ಯಾಲಯದ ವತಿಯಿಂದ ರೂ. 1 ಲಕ್ಷ ಧನಸಹಾಯ ನೀಡಿರುವ ಕುರಿತು.

ಉಲ್ಲೇಖ: UGC D.O.No. 1-6/2019/(CPP-II) pt.file, Date: 05.03.2021.

******

ಸಾರ್ಥಕ್ EduVision 2021 ಅಡಿಯಲ್ಲಿ ಆತ್ಮನಿರ್ಭರ ಭಾರತ್, 2021ರ ಮಾರ್ಚ 15-17ರವರೆಗೆ ಭೋಪಾಲ್ ಮಿಂಟೊ ಹಾಲ್‌ನಲ್ಲಿ ನಡೆದಿದ್ದು, ಸದರಿ ಕಾರ್ಯಕ್ರಮಕ್ಕೆ ಸರ್ಕಾರಿ ಇಲಾಖೆಗಳು, ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳು ಕಾರ್ಪೊರೇಟರ್‌ಗಳು ಮತ್ತು ಪ್ರಕಾಶಕರು ಎಚ್‌ಆರ್ ಶಿಕ್ಷಣ ದಲ್ಲಿ ಚಟುವಟಿಕೆಗಳು, ಸಾಧನೆಗಳು, ದೃಷ್ಟಿ ಮತ್ತು ಧ್ಯೇಯವನ್ನು ಪ್ರದರ್ಶಿಸುತ್ತಾ ಭಾಗವಹಿಸುತ್ತಿದ್ದು, EduVision 2021 ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ವೈಜ್ಞಾನಿಕ ಸುಧಾರಣಾ ಕ್ಷೇತ್ರದಲ್ಲಿ ಕೆಲಸ ಮಾಡುವ ಸಂಸ್ಥೆಗಳಿಗೆ ಅವರ ಅಭಿಪ್ರಾಯಗಳು, ಚಟುವಟಿಕೆಗಳು ಮತ್ತು ಸಾಧನೆಗಳನ್ನು ಪ್ರದರ್ಶಿಸಲು ಮತ್ತು ಆತ್ಮನಿರ್ಭರ ಭಾರತ ಸಾಧಿಸುವಲ್ಲಿ ಶೈಕ್ಷಣಿಕ ಪ್ರಗತಿ ಮತ್ತು ಕೌಶಲ್ಯ ಅಭಿವೃದ್ಧಿಯನ್ನು ಬಳಸಿಕೊಂಡು ಸೂಕ್ತ ಅವಕಾಶಗಳನ್ನು ಪಡೆಯಲು ಜ್ಞಾನ ಹಂಚಿಕೆಯನ್ನು ಒದಗಿಸಲು ಒಂದು ವೇದಿಕೆಯಾಗಿದ್ದು, ವಿಶ್ವವಿದ್ಯಾಲಯಗಳು ಸಾರ್ಥಕ್ EduVision 2021ನಲ್ಲಿ ಆತ್ಮನಿರ್ಭರ ಭಾರತಗಾಗಿ ಭಾಗವಹಿಸಬಹುದೆಂದು ತಿಳಿಸಿರುತ್ತಾರೆ.

ಮುಂದುವರೆದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ, 2021ರ ಮಾರ್ಚ 15-17ರವರೆಗೆ ಭೋಪಾಲ್‌ನಲ್ಲಿ ನಡೆದಿರುವ ಆತ್ಮನಿರ್ಭರ ಭಾರತ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಸದರಿ ಕಾರ್ಯಕ್ರಮಕ್ಕೆ ವಿಶ್ವವಿದ್ಯಾಲಯ ವತಿಯಿಂದ ರೂ.1 ಲಕ್ಷ ಧನಸಹಾಯ ಮಾಡಲಾಗಿದ್ದು, ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

## ತೀರ್ಮಾನ

2021ರ ಮಾರ್ಚ 15-17ರವರಗೆ ಭೋಪಾಲ್‌ನಲ್ಲಿ ನಡೆದಿರುವ ಆತ್ಮನಿರ್ಭರ ಭಾರತ ಕಾರ್ಯಕ್ರಮಕ್ಕೆ ವಿಶ್ವವಿದ್ಯಾಲಯ ವತಿಯಿಂದ ರೂ.1 ಲಕ್ಷ ಧನಸಹಾಯ ಮಾಡಲಾಗಿದ್ದು, ಸದರಿ ಪಾವತಿಯನ್ನು ಸಭೆಯು ಅನುಸಮರ್ಥಿಸಿತು.

➲ ಐಟಂ ನಂ. 06:

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ Center of Excellence Multidisciplinary Advanced Research Facility ಯನ್ನು ನಿರ್ಮಿಸುವ ಕುರಿತು.

****

ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ವಿವಿಧ ವಿಭಾಗಗಳಿಗೆ ಸಂಶೋಧನಾ ಸೌಲಭ್ಯಕ್ಕಾಗಿ Center of Excellence Multidisciplinary Advanced Research Facility ಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಕೇಂದ್ರವನ್ನು ಸ್ಥಾಪಿಸಲು ಮತ್ತು ಅದಕ್ಕಾಗಿ ಪ್ರತ್ಯೇಕ ಕಟ್ಟಡವನ್ನು ಅಂದಾಜು ರೂ.250 ಲಕ್ಷಗಳಲ್ಲಿ ನಿರ್ಮಿಸುವ ಕುರಿತು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

## ತೀರ್ಮಾನ

ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ವಿವಿಧ ವಿಭಾಗಗಳಿಗೆ ಸಂಶೋಧನಾ ಸೌಲಭ್ಯಕ್ಕಾಗಿ Center of Excellence Multidisciplinary Advanced Research Facility ಕೇಂದ್ರವನ್ನು ಸ್ಥಾಪಿಸಲು ಮತ್ತು ಅದಕ್ಕಾಗಿ ಪ್ರತ್ಯೇಕ ಕಟ್ಟಡವನ್ನು ಅಂದಾಜು ರೂ.250 ಲಕ್ಷಗಳಲ್ಲಿ ನಿರ್ಮಿಸಲು ಸಭೆಯು ತಾತ್ವಿಕ ಒಪ್ಪಿಗೆಯನ್ನು ಸರ್ವಾನುಮತದಿಂದ ಅಂಗಿಕರಿಸಿತು.

➲ ಐಟಂ ನಂ. 07:

ವಿಷಯ: ವಿಶ್ವವಿದ್ಯಾಲಯದ 9ನೇ ವಾರ್ಷಿಕ ಘಟಿಕೋತ್ಸವದ ಆಚರಣೆಗೆ ಆಡಳಿತಾತ್ಮಕ ಅನುಮೋದನೆ ಕುರಿತು.

***

ವಿಶ್ವವಿದ್ಯಾಲಯದ 9ನೇ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು ಆಯೋಜಿಸುವ ಕುರಿತು ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಿದೆ.

## ತೀರ್ಮಾನ

ಈ ಸಮಾರಂಭದ ಆಚರಣೆಯ ಕುರಿತಾಗಿ ಚರ್ಚಿಸಿ, ವಿಶ್ವವಿದ್ಯಾಲಯದ 9ನೇ ವಾರ್ಷಿಕ ಘಟಿಕೋತ್ಸವ ಆಚರಿಸಲು ಸಭೆಯು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

➲ ಐಟಂ ನಂ. 08:

ವಿಷಯ: ವಿಶ್ವವಿದ್ಯಾಲಯದ ಸ್ನಾತಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಕರ್ತವ್ಯಗಳಿಗೆ ಕರ್ನಾಟಕ ರಾಜ್ಯದ ಅನ್ಯ ವಿಶ್ವವಿದ್ಯಾಲಯಗಳ ಬೋಧಕ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಕುರಿತು.

***

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಪರೀಕ್ಷಾ ವ್ಯವಸ್ಥೆಯಲ್ಲಿ ದಕ್ಷತೆಯನ್ನು ಹೆಚ್ಚಿಸಲು ಸ್ನಾತಕ ಪದವಿಯ ವಿವಿಧ ಕರ್ತವ್ಯಗಳನ್ನು ನಿರ್ವಹಿಸಲು ಕರ್ನಾಟಕ ರಾಜ್ಯದ ಅನ್ಯ ವಿಶ್ವವಿದ್ಯಾಲಯಗಳ ಬೋಧಕ ಸಿಬ್ಬಂದಿಗಳ ಸೇವೆಯನ್ನು ವಿಶ್ವವಿದ್ಯಾಲಯಕ್ಕೆ ಪಡೆಯುವ ವಿಷಯವನ್ನು ಚರ್ಚೆ ಹಾಗೂ ಅನುಮೋದನೆಗಾಗಿ ಸಿಂಡಿಕೇಟ್ ಸಭೆಗೆ ಮಂಡಿಸಿದೆ.

## ತೀರ್ಮಾನ

ವಿಶ್ವವಿದ್ಯಾಲಯದ ಸ್ನಾತಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಕರ್ತವ್ಯಗಳಿಗೆ ಕರ್ನಾಟಕ ರಾಜ್ಯದ ಅನ್ಯ ವಿಶ್ವವಿದ್ಯಾಲಯಗಳ ಬೋಧಕ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಕುರಿತಾಗಿ ಅತ್ಯಾವಶ್ಯಕವಾದಲ್ಲಿ ಮಾತ್ರ ಅನ್ಯ ವಿಶ್ವವಿದ್ಯಾಲಯಗಳ ಬೋಧಕ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ತೀರ್ಮಾನಿಸಲಾಯಿತು. ಮುಂದುವರೆದು ಸದರಿ ವಿಷಯವು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ವಿಶ್ವವಿದ್ಯಾಲಯದ ಮಟ್ಟದ ಸಮಿತಿಯೊಂದನ್ನು ರಚಿಸಲು ಅನುಮೋದಿಸಿತು ಹಾಗೂ ಸದರಿ ಸಮಿತಿಯು ತಕ್ಷಣ ಕಾರ್ಯ ಪ್ರವೃತ್ತರಾಗಿ ವರದಿಯನ್ನು ಸಲ್ಲಿಸಲು ಸೂಚಿಸಲಾಯಿತು.

➲ ಐಟಂ ನಂ. 09:

ವಿಷಯ: ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ ಆವರಣಕ್ಕೆ GeM ಮೂಲಕ ಲಘು ವಾಹನ ಖರೀದಿಸುವ ಕುರಿತು.

******

ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ ಆವರಣದಲ್ಲಿ ಸುಮಾರು 400 ವಿದ್ಯಾರ್ಥಿಗಳು ಸ್ನಾತಕೋತ್ತರ ಅಧ್ಯಯನ ಮಾಡುತ್ತಿದ್ದು, ಸದರಿ ಆವರಣದಲ್ಲೆ 03 ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳು ಮತ್ತು ವಸತಿ ಗೃಹಗಳಲ್ಲಿ ಸ್ನಾತಕೋತ್ತರ ಕೇಂದ್ರದ ಸಿಬ್ಬಂದಿಗಳು ವಾಸವಿರುತ್ತಾರೆ. ಆವರಣವು ನಗರ ಪ್ರದೇಶದಿಂದ ಹೊರವಲಯದಲ್ಲಿದ್ದು, ತುರ್ತು ವೈದ್ಯಕೀಯ ಅವಶ್ಯಕತೆಗಳಿಗಾಗಿ ವಿಶ್ವವಿದ್ಯಾಲಯದ ವಾಹನ ಅವಶ್ಯವಿರುವ ಹಿನ್ನೆಲೆಯಲ್ಲಿ ಒಂದು ಲಘು ವಾಹನವನ್ನು GeM ಮೂಲಕ ಖರೀದಿಸಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

## ತೀರ್ಮಾನ

ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ ಆವರಣವು ನಗರ ಪ್ರದೇಶದಿಂದ ದೂರವಿರುವ ಕಾರಣ ತುರ್ತು ವೈದ್ಯಕೀಯ ಅವಶ್ಯಕತೆಗಳಿಗಾಗಿ ಒಮಿನಿ ಮಾದರಿಯ 01 ಸಂಖ್ಯೆ ಲಘುವಾಹನವನ್ನು GeM ಮೂಲಕ ಖರೀದಿಸಲು ಸಿಂಡಿಕೇಟ್ ಸಭೆಯು ಒಪ್ಪಿಗೆ ಸೂಚಿಸಿದೆ.

➲ ಐಟಂ ನಂ. 10:

ವಿಷಯ: ಕುಲಸಚಿವರಿಗೆ ನೂತನ ವಾಹನ ಖರೀದಿಸುವ ಕುರಿತು.

****

ವಿಶ್ವವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳಾದ ಕುಲಸಚಿವರು ಕಾರ್ ಸಂಖ್ಯೆ ಕೆಎ 34 ಎನ್ 2693 (ಇಟಿಯೋಸ್) ಇದನ್ನು ಕಳೆದ 9 ವರ್ಷದಿಂದ ಸುಮಾರು 2.6 ಲಕ್ಷ ಕಿಲೋ ಮೀಟರ್ ಬಳಸಿದ್ದು, ಸದರಿ ವಾಹನವು ನಿರಂತರವಾಗಿ ಬಹು ದೂರದ ಪ್ರಯಾಣ ಮತ್ತು ನಿರಂತರ ಪ್ರಯಾಣಕ್ಕೆ ಅನುಕೂಲಕರವಾಗಿರುವುದಿಲ್ಲ. ಆದ್ದರಿಂದ ಸದರಿಯವರಿಗೆ ನೂತನ ಇನೋವ್, ಕೃಷ್ಟಾ ಮಾಡೆಲ್‌ನ ಕಾರನ್ನು GeM ಮೂಲಕ ಖರೀದಿಸುವ ಅನುಮತಿಗಾಗಿ ಸಲ್ಲಿಸಿದೆ.

## ತೀರ್ಮಾನ

ವಿಶ್ವವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳಾದ ಕುಲಸಚಿವರು ಇವರ ಕಾರ್ ಸಂಖ್ಯೆ ಕೆಎ 34 ಎನ್ 2693 (ಇಟಿಯೋಸ್) ಈ ವಾಹನವು ನಿರಂತರವಾಗಿ ಬಹು ದೂರದ ಪ್ರಯಾಣ ಮತ್ತು ನಿರಂತರ ಪ್ರಯಾಣಕ್ಕೆ ಅನುಕೂಲಕರವಾಗಿರದ ಕಾರಣ ಸದರಿಯವರಿಗೆ ನೂತನ ಇನೋವ್, ಕೃಷ್ಟಾ ಮಾಡೆಲ್‌ನ ಕಾರನ್ನು GeM ಮೂಲಕ ಖರೀದಿಸಲು ಸಭೆಯು ಅನುಮತಿಸಿದೆ.

➲ ಐಟಂ ನಂ. 11

ವಿಷಯ: ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

ಉಲ್ಲೇಖ: ಹಣಕಾಸು ವಿಭಾಗದ ಪತ್ರ ಸಂ: ವಿಶ್ರೀಕೃವಿಬ/ಹ.ವಿ/ಸಿಂಡಿಕೇಟ್ ಐಟಂ/2020-21/335 ದಿನಾಂಕ: 25/03/2021

****

ಹಣಕಾಸು ವಿಷಯಕ್ಕೆ ಸಂಬಂಧಿಸಿದಂತೆ 2020-21ನೇ ಆರ್ಥಿಕ ಸಾಲಿನ ವಿಶ್ವವಿದ್ಯಾಲಯದ ಐದನೇ ಹಣಕಾಸು ಸಮಿತಿ ಸಭೆಯನ್ನು ದಿನಾಂಕ 24.03.2021 ರಂದು ಆಯೋಜಿಸಲಾಗಿತ್ತು. ಸದರಿ ಸಮಿತಿ ಸಭೆಯು ಈ ಕುರಿತು ನಡಾವಳಿಗಳನ್ನು ಸಲ್ಲಿಸಲಾಗಿದ್ದು, ಈ ನಡಾವಳಿಗಳನ್ನು ಸಾಮಾನ್ಯ ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## ತೀರ್ಮಾನ

ವಿಶ್ವವಿದ್ಯಾಲಯದ ಐದನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ದೃಢೀಕರಿಸಿ ಅನುಮೋದಿಸಿತು.

**ಅಧ್ಯಕ್ಷರ ಅಪ್ಪಣೆ ಪಡೆದ ವಿಷಯಗಳು**

ಸಿಂಡಿಕೇಟ್ ಸಭೆಯ ಅಧ್ಯಕ್ಷರ ಅಪ್ಪಣೆ ಪಡೆದು ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರಿಕೃಷ್ಣದೇವರಾಯ ಇವರು ವಿಶ್ವವಿದ್ಯಾಲಯದಲ್ಲಿ ಕೃಷ್ಣದೇವರಾಯ ಪೀಠವನ್ನು ಸ್ಥಾಪಿಸಿ ಹೆಚ್ಚಿನ ಸಂಶೋಧನೆಗೆ ಅವಕಾಶವನ್ನು ಮಾಡಿಕೊಡುವ ಪ್ರಸ್ತಾವನೆಯನ್ನು ಮಂಡಿಸಿದರು. ಸಭೆಯು ತಾತ್ವಿಕವಾಗಿ ಇದನ್ನು ಒಪ್ಪಿಕೊಂಡಿದ್ದು, ವಿಸ್ತೃತವಾದ ಪ್ರಸ್ತಾವನೆಯೊಂದನ್ನು ಮುಂದಿನ ಸಿಂಡಿಕೇಟ್ ಸಭೆಯೊಳಗೆ ಸಲ್ಲಿಸಲು ಸಭೆಯು ಕೇಳಿಕೊಂಡಿತು.

ಸಿಂಡಿಕೇಟ್ ಸಭೆಯ ಅಧ್ಯಕ್ಷರ ಅಪ್ಪಣೆ ಪಡೆದು ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ. ಮಲ್ಲಿಕಾರ್ಜುನ್ ಮರ್ಚೆಡ್ ಇವರು ವಿಶ್ವವಿದ್ಯಾಲಯದ ಮುಖ್ಯ ಆವರಣ ಬಳ್ಳಾರಿಯ ಮುಖ್ಯ ದ್ವಾರದಿಂದ ಕ್ಯಾಂಪಸ್ ಒಳಗಡೆಯ ಸಂಚಾರಕ್ಕೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ 02 ಸಂಖ್ಯೆ ಬ್ಯಾಟರಿ ಚಾಲಿತ ಲಘು ಸಾರಿಗೆ ವಾಹನಗಳನ್ನು ಖರೀದಿಸುವ ವಿಷಯವನ್ನು ಪ್ರಸ್ತಾಪಿಸಿದರು ಸದರಿ ವಿಷಯಕ್ಕೆ ಸಭೆಯು GeM/ಕರ್ನಾಟಕ ಸರ್ಕಾರ ನಿಯಮಾವಳಿ ಪ್ರಕಾರ ಖರೀದಿಸಲು ಸರ್ವಾನುಮತದಿಂದ ಅಂಗಿಕರಿಸಿತು.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
"ಜ್ಞಾನ ಸಾಗರ" ಆವರಣ, ಬಳ್ಳಾರಿ – 583 105

ಕುಲಸಚಿವರು

ಸಂಖ್ಯೆ: ವಿಶ್ರೀಕೃವಿಬ/ಸಿಂಡಿಕೇಟ್ ಸಭೆ–ನಡಾವಳಿ/2021–22/**205** ದಿನಾಂಕ: 05.05.2021

ಗೆ,
ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ದಿನಾಂಕ 03.05.2021 ರಂದು ಮಧ್ಯಾಹ್ನ 03.00 ಗಂಟೆಗೆ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.
ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ. 05.04.2021

* * *

ದಿನಾಂಕ 03.05.2021 ರಂದು ಮಧ್ಯಾಹ್ನ 03.00 ಗಂಟೆಗೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ Google Meet ಮುಖೇನ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ: ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು(ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ.ಕೊಪ್ಪಳ/ಯಲಬುರ್ಗಾ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 03.05.2021 ರಂದು ಮಧ್ಯಾಹ್ನ 03.00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿ

**ಐಟಂ ನಂ. 01:**

ವಿಷಯ: ಕೊರೋನಾ ಎರಡನೇ ಅಲೆಯ ನಿರ್ವಹಣೆಯಲ್ಲಿ ವಿಶ್ವವಿದ್ಯಾಲಯ ಪಾತ್ರದ ಕುರಿತು.

***

ಕೊರೋನಾ ಸಾಂಕ್ರಾಮಿಕ ರೋಗದ ಎರಡನೇ ಅಲೆಯು ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸದರಿ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತ ಸೂಕ್ತ ಕ್ರಮಗಳ ಮೂಲಕ ಪ್ರಯತ್ನಿಸುತ್ತಿವೆ. ಮುಂದುವರೆದು, ಕೊರೋನಾ ಎರಡನೇ ಅಲೆಯ ನಿರ್ವಹಣೆಯ ವಿಷಯದ ಕುರಿತಾಗಿ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಸಹಕಾರ ಮತ್ತು ಪಾತ್ರದ ಕುರಿತು ವಿಶೇಷ ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

### ತೀರ್ಮಾನ

ಕೊರೋನಾ ಎರಡನೇ ಅಲೆಯ ನಿರ್ವಹಣೆಯ ವಿಷಯದ ಕುರಿತು ದೀರ್ಘವಾಗಿ ಚರ್ಚಿಸಿದ ಸಭೆಯು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು ತನ್ನ ಸಾಮಾಜಿಕ ಕಳಕಳಿ ಹಾಗೂ ಜವಾಬ್ದಾರಿಯಿಂದ ವಿಶ್ವವಿದ್ಯಾಲಯದ ಅತಿಥಿ ಗೃಹದಲ್ಲಿ 50 ಹಾಸಿಗೆಗಳ "ಕೋವಿಡ್ ಕೇರ್ ಐಸೋಲೇಷನ್ ಕೇಂದ್ರ"ವನ್ನು ಜೈನ್ ಇಂಟರ್ ನ್ಯಾಷನಲ್ ಟ್ರೇಡ್ ಆರ್ಗನೈಜೇಷನ್ (ಜೆಐಟಿಒ), ಬಳ್ಳಾರಿ ಹಾಗೂ ಸೇವಾಭಾರತಿ, ಬಳ್ಳಾರಿ ಇವರ ಜಂಟಿ ಆಶ್ರಯದಲ್ಲಿ ಪ್ರಾರಂಭಿಸಲು ತೀರ್ಮಾನಿಸಲಾಯಿತು.

**ಟೇಬಲ್ ಅಜೆಂಡಾ**

**ಐಟಂ ಸಂಖ್ಯೆ 01**

ವಿಷಯ: ಹೊರಗುತ್ತಿಗೆ, ಭದ್ರತಾ ಹಾಗೂ ಗೃಹ ಪರಿಚಾರಕ ಸಿಬ್ಬಂದಿಗಳ ವೇತನ ಮಂಜೂರಿಸುವ ಕುರಿತು.

*****

ಕೊರೋನಾ ಸಾಂಕ್ರಾಮಿಕ ರೋಗದ ಎರಡನೇ ಅಲೆಯು ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ಸೂಚನೆಯಂತೆ ವಿಶ್ವವಿದ್ಯಾಲಯದ ಚಟುವಟಿಕೆಗಳನ್ನು ಸ್ಥಗಿತಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮಾಸಿಕ ವೇತನವನ್ನು ಜೀವನ ನಿರ್ವಹಣೆ ಹಿತದೃಷ್ಟಿಯಿಂದ ವಿಶ್ವವಿದ್ಯಾಲಯದ ಮುಖ್ಯ ಆವರಣ ಹಾಗೂ ಸ್ನಾತಕಕೋತ್ತರ ಕೇಂದ್ರದ ಹೊರಗುತ್ತಿಗೆ, ಭದ್ರತಾ ಹಾಗೂ ಗೃಹ ಪರಿಚಾರಕ ಸಿಬ್ಬಂದಿಗಳ ವೇತನವನ್ನು ಮಂಜೂರಿಸಲು ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

### ತೀರ್ಮಾನ

ಈ ಕುರಿತಾಗಿ ಸಭೆಯು ಜೀವನ ನಿರ್ವಹಣೆ ಹಿತದೃಷ್ಟಿಯಿಂದ ವಿಶ್ವವಿದ್ಯಾಲಯದ ಮುಖ್ಯ ಆವರಣ ಹಾಗೂ ಸ್ನಾತಕಕೋತ್ತರ ಕೇಂದ್ರದ ಹೊರಗುತ್ತಿಗೆ, ಭದ್ರತಾ ಹಾಗೂ ಗೃಹ ಪರಿಚಾರಕ ಸಿಬ್ಬಂದಿಗಳ ಮಾಸಿಕ ವೇತನವನ್ನು ಮಂಜೂರಿಸಲು ಸಭೆಯು ಅನುಮೋದಿಸಿತು.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
## "ಜ್ಞಾನ ಸಾಗರ" ಆವರಣ, ಬಳ್ಳಾರಿ – 583 105

ಕುಲಸಚಿವರು


ಸಂಖ್ಯೆ: ವಿಶ್ರೀಕೃವಿಬ/ಸಿಂಡಿಕೇಟ್ ಸಭೆ–ನಡಾವಳಿ/2021–22/ **212** ದಿನಾಂಕ: 17.05.2021

ಗೆ,
ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ದಿನಾಂಕ 12.05.2021 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ. 17.05.2021

* * *

ದಿನಾಂಕ 12.05.2021 ರಂದು ಬೆಳಿಗ್ಗೆ 11.00 ಗಂಟೆಗೆ Google Meet ಮುಖೇನ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,
17.05.2021
ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:
1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ: ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು(ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ.ಕೊಪ್ಪಳ/ಯಲಬುರ್ಗಾ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 12.05.2021 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ

**ಐಟಂ ನಂ. 01:**

ದಿನಾಂಕ. 30.03.2021 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮದ ವರದಿಯನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

**ತೀರ್ಮಾನ**

ಕೋವಿಡ್ ಅಲೆಯ ತಡೆಗಟ್ಟುವಿಕೆ ಸಂಬಂಧ ಸರ್ಕಾರ ಹೊರಡಿಸಿದ ಮಾರ್ಗಸೂಚಿ ಅನ್ವಯ ವಿಶ್ವವಿದ್ಯಾಲಯದ ಕಛೇರಿ ಕಾರ್ಯದಲ್ಲಿ ಅಡಚಣೆಯಾದ ಕಾರಣ ದಿನಾಂಕ. 30.03.2021 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮಗಳ ಅನುಷ್ಠಾನ ಕುರಿತ ವರದಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸಭೆಯು ಸರ್ವಾನುಮತ ಸೂಚಿಸಿತು.

**ಐಟಂ ನಂ. 02:**

ವಿಷಯ: ಡಾ.ಜಿತೇಂದ್ರ ಕುಮಾರ್ ಸಿಂಗ್, ಸಹಾಯಕ ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಇವರಿಗೆ ನೀಡಿದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

ಉಲ್ಲೇಖ: 1. ಸದರಿಯವರ ಮನವಿ ಪತ್ರ ದಿನಾಂಕ: 24.03.2021.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 06.04.2021.

*****

ಡಾ. ಜಿತೇಂದ್ರ ಕುಮಾರ್ ಸಿಂಗ್, ಸಹಾಯಕ ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಇವರಿಗೆ Sikkim University (A Central University), Gongtok, Sikkim. ನಲ್ಲಿ ಸಹ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು ವಿಶ್ವವಿದ್ಯಾಲಯದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ಕಾರಣ ಸದರಿಯವರಿಗೆ ನೀಡಿದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ**

ಡಾ. ಜಿತೇಂದ್ರ ಕುಮಾರ್ ಸಿಂಗ್, ಸಹಾಯಕ ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಇವರಿಗೆ Sikkim University (A Central University), Gongtok, Sikkim. ನಲ್ಲಿ ಸಹ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು ವಿಶ್ವವಿದ್ಯಾಲಯದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಿರುವುದಕ್ಕೆ ಸಭೆಯು ಅನುಸಮರ್ಥಿಸಿತು.

**ಐಟಂ ನಂ. 03:**

ವಿಷಯ: ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರುಗಳಿಗೆ ಯುಜಿಸಿಯ ನಿಯಮಗಳನ್ವಯ ವೃತ್ತಿ ಪದೋನ್ನತಿಗಾಗಿ ವಿವಿಧ ವಿಭಾಗಗಳ ವಿಷಯ ಪರಿಣಿತರ ಪಟ್ಟಿಯನ್ನು ಅನುಮೋದಿಸುವ ಕುರಿತು.

***

ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರುಗಳಿಗೆ ಯುಜಿಸಿಯ ನಿಯಮಗಳನ್ವಯ ವೃತ್ತಿ ಪದೋನ್ನತಿಗಾಗಿ ವಿವಿಧ ವಿಭಾಗಗಳಿಂದ ವಿಷಯ ಪರಿಣಿತರ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಸದರಿ ಪಟ್ಟಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಯುಜಿಸಿಯ ನಿಯಮಗಳನ್ವಯ ವೃತ್ತಿ ಪದೋನ್ನತಿಗಾಗಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು ಸಲ್ಲಿಸಿದ ವಿಷಯ ಪರಿಣಿತರ ಪಟ್ಟಿಯನ್ನು ಸಭೆಯು ಅನುಮೋದಿಸಿತು. ಮುಂದುವರೆದು, ಅಗತ್ಯತೆಯ ಅನುಸಾರವಾಗಿ ಬೇರೆ ಪರಿಣಿತರನ್ನು ಸಹ ಆಹ್ವಾನಿಸುವ ಅನುಮತಿಯನ್ನು ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಸಭೆಯು ನೀಡಿತು.

➲ **ಐಟಂ ನಂ. 04:**

ವಿಷಯ: ಶ್ರೀಮತಿ. ಶಾಂತಮ್ಮ ಬದಾಮಿ, ಉದ್ಯಾನ ಕೆಲಸಗಾರಳು ಇವರಿಗೆ 30 ನೇ ವರ್ಷದ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರಿಸಿದ ಕುರಿತು.

ಉಲ್ಲೇಖ: 1. ಶ್ರೀಮತಿ. ಶಾಂತಮ್ಮ ಬದಾಮಿ, ಉದ್ಯಾನ ಕೆಲಸಗಾರಳು, ಇವರ ಮನವಿ ಪತ್ರ ದಿನಾಂಕ: 25.03.2021

2. ಸರ್ಕಾರ ಆದೇಶ ಸಂಖ್ಯೆ: ಎಫ್‌ಡಿ 12 ಎಸ್.ಆರ್.ಪಿ.2012 (VIII) ದಿನಾಂಕ: 14.06.2012

3. ಈ ಕಛೇರಿ ಆದೇಶ ಸಂಖ್ಯೆ: ವಿಶ್ರೀಕೃವಿಬ/ಆಡಳಿತ/ಡಿಪಿಎಆರ್–ಬೋಧಕೇತರ/ 2021–22/109 ದಿನಾಂಕ: 20.04.2021

***

ಶ್ರೀಮತಿ. ಶಾಂತಮ್ಮ ಬದಾಮಿ, ಉದ್ಯಾನ ಕೆಲಸಗಾರಳು ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ ಇವರು ದಿನಾಂಕ 10.01.1990 ರಂದು ಉದ್ಯಾನ ಕೆಲಸಗಾರಳಾಗಿ ಸೇವೆಗೆ ಸೇರಿ ದಿನಾಂಕ: 09.01.2020ಕ್ಕೆ 30 ವರ್ಷಗಳ ಸೇವೆ ಪೂರ್ಣಗೊಂಡಿದ್ದು ಈ ಅವಧಿಯಲ್ಲಿ ಸದರಿಯವರಿಗೆ ಯಾವುದೇ ಪದೋನ್ನತಿ ನೀಡಿರುವುದಿಲ್ಲ.

ಉಲ್ಲೇಖ–2ರಲ್ಲಿಯ ಸರ್ಕಾರಿ ಆದೇಶದಂತೆ ಯಾವುದೇ ಒಂದು ಹುದ್ದೆಯಲ್ಲಿ 30 ವರ್ಷಗಳ ಕಾಲ ಒಂದು ಪದೋನ್ನತಿ ಪಡೆಯದೆ ಮುಂದುವರೆದಿರುವ ಅಥವಾ ಮುಂದುವರೆಯುವ ಸರ್ಕಾರಿ ನೌಕರರಿಗೆ ಆ ಹುದ್ದೆಗೆ ನಿಗದಿಪಡಿಸಲಾದ ವೇತನ ಶ್ರೇಣಿಯಲ್ಲಿ 30 ವರ್ಷಗಳ ಸೇವೆ ಪೂರ್ಣಗೊಳಿಸಿದ ದಿನಾಂಕ ದಿಂದ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ನೀಡಲು ಅವಕಾಶವಿರುತ್ತದೆ.

ಕಾರಣ ಉಲ್ಲೇಖ–02ರಲ್ಲಿಯ ಸರ್ಕಾರದ ಆದೇಶದಂತೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ನಿರೀಕ್ಷಿಸಿ ಶ್ರೀಮತಿ. ಶಾಂತಮ್ಮ ಬದಾಮಿ, ಉದ್ಯಾನ ಕೆಲಸಗಾರಳು ಇವರಿಗೆ ದಿನಾಂಕ: 10.01.2020 ರಿಂದ ಅನ್ವಯಿಸಿ ಉಲ್ಲೇಖ–03ರಂತೆ ಮಂಜೂರಿಸಿದ 30ನೇ ವರ್ಷದ ಹೆಚ್ಚುವರಿ ವೇತನ ಬಡ್ತಿಯನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ**

ಶ್ರೀಮತಿ. ಶಾಂತಮ್ಮ ಬದಾಮಿ, ಉದ್ಯಾನ ಕೆಲಸಗಾರಳು ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ ಇವರಿಗೆ ಸರ್ಕಾರದ ಆದೇಶದಂತೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ನಿರೀಕ್ಷಿಸಿ ಮಂಜೂರಿಸಿದ 30ನೇ ವರ್ಷದ ಹೆಚ್ಚುವರಿ ವೇತನ ಬಡ್ತಿಯನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.

➲ **ಐಟಂ ನಂ. 05:**

ವಿಷಯ: ಖರೀದಿ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

ಉಲ್ಲೇಖ: ದಿನಾಂಕ 15.04.2021 ರಂದು ಜರುಗಿದ ಖರೀದಿ ಸಮಿತಿ ಸಭೆ

*****

ವಿಶ್ವವಿದ್ಯಾಲಯದ ಮುಖ್ಯ ಆವರಣ ಮತ್ತು ಎಲ್ಲಾ ಸ್ನಾತಕೋತ್ತರ ಕೇಂದ್ರಗಳ ವಿವಿಧ ವಿಭಾಗ/ಘಟಕಗಳಿಗೆ ಅಗತ್ಯತೆಯ ಅನುಸಾರವಾಗಿ ವಿವಿಧ ಉಪಕರಣ ಮತ್ತು ಸಾಮಗ್ರಿಗಳನ್ನು ಖರೀದಿಸಬೇಕಾದ ಕಾರಣ, ಸದರಿ ಖರೀದಿಯ ವಿವರಗಳನ್ನು ಹಾಗೂ ಪ್ರಕ್ರಿಯೆಯನ್ನು ದಿನಾಂಕ 15.04.2021 ರಂದು ಜರುಗಿದ ಖರೀದಿ ಸಮಿತಿ ಸಭೆಯಲ್ಲಿ ಮಂಡಿಸಿದೆ.

ಖರೀದಿ ಸಮಿತಿ ಸಭೆಯು ಎಲ್ಲಾ ಕಾರ್ಯಸೂಚಿಗಳನ್ನು ಪರಿಶೀಲಿಸಿ ತೀರ್ಮಾನಿಸಿದ ನಡಾವಳಿಯನ್ನು ಸಲ್ಲಿಸಲಾಗಿದ್ದು, ಈ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ದಿನಾಂಕ 15.04.2021 ರಂದು ಜರುಗಿದ ಖರೀದಿ ಸಮಿತಿ ಸಭೆಯ ನಡಾವಳಿಗಳ ಕುರಿತು ವಿಸ್ತೃತವಾದ ಚರ್ಚೆಯು ಅವಶ್ಯವಿರುವ ಹಿನ್ನೆಲೆಯಲ್ಲಿ, ಸದರಿ ವಿಷಯದಲ್ಲಿ ಐಟಂ ಸಂಖ್ಯೆ 08 ನ್ನು ಹೊರತುಪಡಿಸಿ ಉಳಿದ ಐಟಂಗಳ ವಿಷಯಗಳನ್ನು ಮುಂದಿನ ಆಫ್‌ಲೈನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಮುಂದುವರೆದು, ಖರೀದಿ ಸಮಿತಿ ಸಭೆಯ ನಡಾವಳಿಯ ಐಟಂ ಸಂಖ್ಯೆ 08 ರ ವಿಶ್ವವಿದ್ಯಾಲಯ ಆವರಣದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹೊಸದಾಗಿ ನಿರ್ಮಿಸಿರುವ ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯಗಳಿಗೆ ಅಗತ್ಯವಾದ Singal Cot, Reading Table & Reading Chair ಖರೀದಿಸಲು ಕಟ್ಟಡ ಸಲಹಾ ಸಮಿತಿಯ ನಿರ್ಧಾರವನ್ನು ಅನ್ವಯಿಸಿ ಸರ್ಕಾರದ ಕೆಟಿಪಿಪಿ ನಿಯಮಾನುಸಾರ ಮುಂದಿನ ಕ್ರಮಕೈಗೊಳ್ಳಲು ಸಭೆಯು ಅನುಮೋದಿಸಿತು.

➲ **ಐಟಂ ನಂ. 06:**

ವಿಷಯ: ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

***

ದಿನಾಂಕ 07.04.2021 ರಂದು ಕಟ್ಟಡ ಸಲಹಾ ಸಮಿತಿ ಸಭೆಯು ಜರುಗಿದ್ದು, ಈ ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ದಿನಾಂಕ 07.04.2021 ರ ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳಲ್ಲಿ ಐಟಂ ಸಂಖ್ಯೆ 01 ನ್ನು ಮುಂದಿನ ಆಫ್‌ಲೈನ ಸಿಂಡಿಕೇಟ್ ಸಭೆಯಲ್ಲಿ ಚರ್ಚೆಗಾಗಿ ಮುಂದೂಡಲಾಯಿತು. ಮುಂದುವರೆದು ದಿನಾಂಕ 07.04.2021 ರ ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳಲ್ಲಿ ಐಟಂ ಸಂಖ್ಯೆ 02, 03 ಮತ್ತು 04 ಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಸಭೆಯು ಸರ್ಕಾರದ ಕೆಟಿಪಿಪಿ ನಿಯಾಮಾನುಸಾರ ಮುಂದಿನ ಕ್ರಮಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.

➲ **ಐಟಂ ನಂ. 07:**

ವಿಷಯ: ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ ಮತ್ತು ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾದಲ್ಲಿ ಆಡಳಿತ ಕೆಲಸಗಳಿಗೆ ಅಗತ್ಯವಾದ ಮಾನವ ಶಕ್ತಿಗಳನ್ನು ಕೆಲಸಕ್ಕೆ ಒದಗಿಸುವ ಟೆಂಡರ್ ಕುರಿತು.

ಉಲ್ಲೇಖ: 1.ಈ ಕಛೇರಿ ಪತ್ರ ಸಂಖ್ಯೆ: ವಿಶ್ರೀಕೃವಿಬ/ಡಿ.ಪಿ.ಎ.ಆರ್/ಬೋಧಕೇತರ/ಹೊರಗುತ್ತಿಗೆ /2020–21/25(1) ದಿನಾಂಕ: 06.05.2020

2. ಈ ಕಛೇರಿ ಪತ್ರ ಸಂಖ್ಯೆ: ವಿಶ್ರೀಕೃವಿಬ/ಡಿ.ಪಿ.ಎ.ಆರ್/ಬೋಧಕೇತರ/ಹೊರಗುತ್ತಿಗೆ /2020–21/25(2) ದಿನಾಂಕ: 06.05.2020

***

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ ಮತ್ತು ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾದಲ್ಲಿ ಆಡಳಿತ ಕೆಲಸಗಳಿಗೆ ಅಗತ್ಯವಾದ ಮಾನವ ಶಕ್ತಿಗಳನ್ನು (ಡಿ.ಇ.ಓ,ಟೈಪಿಸ್ಟ್/ಕ್ಲರ್ಕ್/ಜೂನಿಯರ್ ಕ್ಲರ್ಕ್‌ಗಳನ್ನು ಹಾಗೂ ಅಟೆಂಡರ್/ಜವಾನ/ಆಫೀಸ್ ಬಾಯ್ ಮತ್ತು ಸ್ವೀಪರ್/ಸ್ಕ್ಯಾವೇಂಜರ್‌ಗಳು) ಹೊರಗುತ್ತಿಗೆ ಆಧಾರದ ಮೇಲೆ ಇಂಡಸ್ ಸೆಕ್ಯೂರಿಟಿ ಸರ್ವಿಸ್ & ಡಿಟೆಕ್ಟಿವ್ಸ್ ಪ್ರೈವೇಟ್ ಲಿಮಿಟೆಡ್ ಧಾರವಾಡ, ಇವರು ಒಂದು ವರ್ಷದ ಅವಧಿಗೆ ಒದಗಿಸುತ್ತಿದ್ದು, ಸದರಿಯವರ ಅವಧಿಯು ಉಲ್ಲೇಖ–01 ಮತ್ತು 02 ರ ಪ್ರಕಾರ ದಿನಾಂಕ: 31.05.2021ಕ್ಕೆ ಮುಕ್ತಾಯವಾಗಲಿದೆ.

ಈ ಕಛೇರಿ ಆದೇಶದ ಷರತ್ತುಗಳನ್ವಯ ಕ್ರಮ ಸಂಖ್ಯೆ 12ನೇ ಪ್ರಕಾರ On receipt of the order the agency shall execute an agreement on the stamp paper as per the Karnataka stamp Duty Act applicable. The Contract will be valid for 1 year from the date of coming into force of agreement or further notice by VSK University, Ballari.

ಮತ್ತು ಕ್ರಮ ಸಂಖ್ಯೆ 38ನೇ ಪ್ರಕಾರ Under normal circumstances the contract shall be valid for period of one year. However, contract may be extended for further period up to the completion of next tender process or next work order or one more year. If agreed by the tenderer and Registrar, VSKU Ballari on the applicable rate on that period and terms and conditions. ಹಾಗೂ ಟೆಂಡರ್ ಕರಾರು ಪತ್ರ ಸಂಖ್ಯೆ 03ರ ಪ್ರಕಾರ The contract shall stand determined on 31.05.2021 or till a fresh tender for the enlistment of outsource man power is invited by the university. In the latter event the contractor shall continue to render his services on same terms & conditions stipulated in the tender document dated 01.01.2020. ನಮೂದಿಸಿರುವ ಕಾರಣ ಟೆಂಡರ್ ಕರೆಯುವ ಅಥವಾ ಮುಂದುವರೆಸುವ ಸಂಬಂಧ ಕುರಿತು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹೊಸ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿ, ಟೆಂಡರ್ ಪ್ರಕ್ರಿಯೆ ಮುಗಿದು ಆದೇಶ ಹೊರಡಿಸುವವರೆಗೆ ಪ್ರಸ್ತುತ ಜಾರಿಯಲ್ಲಿರುವ ಟೆಂಡರ್ ನಿಯಮಗಳು ಮತ್ತು ಷರತ್ತುಗಳನ್ನು ಅನ್ವಯಿಸಿ ಮೆ: ಇಂಡಸ್ ಸೆಕ್ಯೂರಿಟಿ ಸರ್ವಿಸ್ ಅಂಡ್ ಡಿಟೆಕ್ಟಿವ್ ಪ್ರೈವೆಟ್ ಲಿಮಿಟೆಡ್, ಧಾರವಾಡ ಇವರ ಸೇವೆಯನ್ನು ಮುಂದುವರೆಸಲು ಸಭೆಯು ಒಪ್ಪಿ ಅನುಮೋದಿಸಿದೆ.

➲ **ಐಟಂ ನಂ. 08:**

ವಿಷಯ: ವಿಶ್ವವಿದ್ಯಾಲಯದ ಆಡಳಿತ ನಿರ್ವಹಣೆಯ ಸಂಬಂಧ ಅಗತ್ಯವಾದ ಪರಿನಿಯಮಾವಳಿಗಳನ್ನು ರಚಿಸಿರುವ ಕುರಿತಾದ ಸಭೆಯ ನಡಾವಳಿಗಳನ್ನು ಸಲ್ಲಿಸುವ ಕುರಿತು.

ಉಲ್ಲೇಖ:
1. ದಿನಾಂಕ: 09.07.2020 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ–03.
2. ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಆನಿಪ/2020–21/652 ದಿ:17.07.2020.
3. ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಆನಿಪ/2020–21/1050 ದಿನಾಂಕ: 12.09.2020.
4. ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಆನಿಪ/2020–21/1405 ದಿನಾಂಕ: 27.10.2020.
5. ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಆನಿಪ/2020–21/2287 ದಿನಾಂಕ: 18.02.2021.
6. ಸದಸ್ಯ ಕಾರ್ಯದರ್ಶಿ, ಆಡಳಿತ ನಿರ್ವಹಣಾ ಪರಿನಿಯಮಾವಳಿ ಸಮಿತಿ ಸಭೆ ಇವರು ಸಭೆಯ ನಡಾವಳಿಯನ್ನು ಸಲ್ಲಿಸಿದ ದಿ:05.04.2021.

*****

ವಿಶ್ವವಿದ್ಯಾಲಯದ ಅಭಿವೃದ್ಧಿ ಹಾಗೂ ಕಾರ್ಯನಿರ್ವಹಣೆಯನ್ನು ಸುಧಾರಣೆಗೊಳಿಸಲು ಹಾಗೂ ವಿಶ್ವವಿದ್ಯಾಲಯದ ಆಡಳಿತ, ಶೈಕ್ಷಣಿಕ, ಡಿಪಿಎಆರ್, ಹಣಕಾಸು ವಿಭಾಗ ಹಾಗೂ ಪರೀಕ್ಷಾ ವಿಭಾಗಗಳ ಆಡಳಿತ ನಿರ್ವಹಣೆಯನ್ನು ದಕ್ಷವಾಗಿ ಹಾಗೂ ಸುಸೂತ್ರವಾಗಿ ನಡೆಸಲು ಪರಿನಿಯಮಾವಳಿಗಳನ್ನು ಸಿದ್ದಪಡಿಸಲು ಉಲ್ಲೇಖ–2 ರಂತೆ ವಿಶ್ವವಿದ್ಯಾಲಯದ ಸದರಿ ವಿಭಾಗಗಳಿಗೆ ಸಂಬಂಧಿಸಿದಂತೆ ಪರಿನಿಯಮಾವಳಿಗಳನ್ನು ರಚಿಸಲು ದಿನಾಂಕ: 17.07.2020 ರಂತೆ ಸಮಿತಿಯನ್ನು ರಚಿಸಿ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಉಲ್ಲೇಖ–3, 4 ಮತ್ತು 5 ರಂತೆ ವಿಶ್ವವಿದ್ಯಾಲಯದ ಆಡಳಿತ, ಶೈಕ್ಷಣಿಕ, ಡಿಪಿಎಆರ್, ಹಣಕಾಸು ವಿಭಾಗ ಹಾಗೂ ಪರೀಕ್ಷಾ ವಿಭಾಗಗಳ ಆಡಳಿತ ನಿರ್ವಹಣೆಯ ಸಂಬಂಧ ಪರಿನಿಯಮಾವಳಿಗಳನ್ನು ರಚಿಸಲು ವಿಶ್ವವಿದ್ಯಾಲಯದಲ್ಲಿ ಸಮಿತಿ ಸಭೆಗಳನ್ನು ನಡೆಸಿ ಚರ್ಚಿಸಿ ಪರಿನಿಯಮಾವಳಿಗಳನ್ನು ರಚಿಸಿದ್ದು, ಉಲ್ಲೇಖ–6 ರಂತೆ ಸದರಿ ಸಮಿತಿಯು ವಿಶ್ವವಿದ್ಯಾಲಯದ ಆಡಳಿತ ನಿರ್ವಹಣೆಗೆ ಬೇಕಾಗಿರುವ ವಿಧೇಯಕಗಳನ್ನು ಅಗತ್ಯತೆಗನುಗುಣವಾಗಿ ಒಟ್ಟು 06 ಪರಿನಿಯಮಾವಳಿಗಳನ್ನು ತಯಾರಿಸಿ ಕರಡು ಪ್ರತಿಗಳನ್ನು ಸಲ್ಲಿಸಿದ್ದು, ಸದರಿ ಪ್ರತಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ ಆಡಳಿತ, ಶೈಕ್ಷಣಿಕ, ಡಿಪಿಎಆರ್, ಹಣಕಾಸು ವಿಭಾಗ ಹಾಗೂ ಪರೀಕ್ಷಾ ವಿಭಾಗಗಳ ಆಡಳಿತ ನಿರ್ವಹಣೆಯ ಸಂಬಂಧ ರಚಿಸಿದ 06 ಸಂಖ್ಯೆ ಪರಿನಿಯಮಾವಳಿಗಳನ್ನು ಸಭೆಯು ಕೂಲಂಕುಷವಾಗಿ ಪರಿಶೀಲಿಸಿ ಅನುಮೋದಿಸಿತು.

ಮುಂದುವರೆದು, ಸನ್ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀಮತಿ ಪದ್ಮಾ ಹೆಚ್ ವಿಠ್ಠಲ್ ಇವರು Statute governing the vijayanagara sri krishanadevaraya university General Recruitment ಗೆ ಸಂಬಂಧಿಸಿದಂತೆ ಕ್ರಮ ಸಂಖ್ಯೆ 10 & 11 ರ ಕುರಿತಂತೆ ಹೆಚ್ಚಿನ ವಿವರಣೆ ಕೇಳ ಬಯಸಿದ ಹಿನ್ನೆಲೆಯಲ್ಲಿ ಮುಂದಿನ ಆಫ್‌ಲೈನ ಸಿಂಡಿಕೇಟ್ ಸಭೆಯಲ್ಲಿ ಸದರಿ ವಿವರಣೆಯನ್ನು ಹಾಜರುಪಡಿಸಲು ಸಭೆಯು ತೀರ್ಮಾನಿಸಿತು.

➲ **ಐಟಂ ನಂ. 09:**

ವಿಷಯ: Consultancy/Advisory Project ಮಾರ್ಗಸೂಚಿಗಳ ಅನುಮೋದನೆ ಕುರಿತು.

*****

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ Consultancy/Advisory Project ಮಾರ್ಗಸೂಚಿಗಳನ್ನು ಸಿದ್ಧಪಡಿಸಿದ್ದು, ಸದರಿ ಮಾರ್ಗಸೂಚಿಯ ಕರಡು ಪ್ರತಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ Consultancy/Advisory Project ಮಾರ್ಗಸೂಚಿಗಳನ್ನು ಸಭೆಯು ಕೂಲಂಕುಷವಾಗಿ ಪರಿಶೀಲಿಸಿ ಅನುಮೋದಿಸಿತು.

➲ **ಐಟಂ ನಂ. 10:**

ವಿಷಯ: ವಿಶ್ವವಿದ್ಯಾಲಯದ 06 ಸಹಾಯಕ ಪ್ರಾಧ್ಯಾಪಕರುಗಳ ಸೇರಿಕೆ ದಿನಾಂಕವನ್ನು ಬದಲಾಯಿಸುವ ಕುರಿತು.

***

ವಿಶ್ವವಿದ್ಯಾಲಯದ ಈ ಕೆಳಕಂಡ 06 ಜನ ಸಹಾಯಕ ಪ್ರಾಧ್ಯಾಪಕರುಗಳು ಸೇರಿಕೆ ದಿನಾಂಕವನ್ನು ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ಸೇರಿಕೆ ದಿನಾಂಕವನ್ನು ಪರಿಗಣಿಸಲಾಗಿತ್ತು, ಸದರಿ ವಿಷಯವನ್ನು ಸಹಾಯಕ ಪ್ರಾಧ್ಯಾಪಕರ ಜ್ಯೇಷ್ಠತಾ ಪಟ್ಟಿಯ ಸಮಿತಿಯವರ ದಿನಾಂಕ: 28.08.2020 ರಂದು ಜರುಗಿದ ಸಭೆಯ ನಡಾವಳಿ ಸಂಖ್ಯೆ: 04 ರನ್ವಯ 06 ಜನ ಸಹಾಯಕ ಪ್ರಾಧ್ಯಾಪಕರುಗಳ ಸೇವೆಗೆ ಸೇರಿದ (ಕರ್ತವ್ಯ ಮೇಲೆ ತೆಗೆದುಕೊಂಡ) ದಿನಾಂಕಗಳನ್ನು ಜ್ಯೇಷ್ಠತೆಗೆ ಪರಿಗಣಿಸಿರುವ ಪ್ರಯುಕ್ತ ಸೇರಿಕೆ ದಿನಾಂಕಗಳನ್ನು ಬದಲಾಯಿಸಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| ಕ್ರ.ಸಂ. | ಅಧ್ಯಾಪಕರ ಹೆಸರು | ವಿಭಾಗ | ಪ್ರಮಾಣ ಪತ್ರದ ಆಧಾರದ ಮೇಲೆ ಸೇರಿಕೆ | ಸೇವೆಗೆ ಸೇರಿದ (ಕರ್ತವ್ಯ ಮೇಲೆ ತೆಗೆದುಕೊಂಡ) ದಿನಾಂಕ |
|---|---|---|---|---|
| 01. | ಡಾ. ಕೊಟ್ರೇಶ್ ಎಂ.ಜಿ. | ಭೌತಶಾಸ್ತ್ರ ಅಧ್ಯಯನ ವಿಭಾಗ | 11.09.2018 | 07.09.2018 |
| 02. | ಡಾ. ಜ್ಯೋತಿಲಿಂಗ ವಿ | ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ | 10.09.2018 | 07.09.2018 |
| 03. | ಡಾ. ಅಶ್ವಿನ್‌ಕುಮಾರ್ | ಗಣಿತಶಾಸ್ತ್ರ ಅಧ್ಯಯನ ವಿಭಾಗ | 08.09.2018 | 07.09.2018 |
| 04. | ಡಾ. ಪಾಂಡುರಂಗ ಆರ್ | ಅರ್ಥಶಾಸ್ತ್ರ ಅಧ್ಯಯನ ವಿಭಾಗ | 10.09.2018 | 07.09.2018 |
| 05. | ಡಾ. ನೀಲೂಫರ್ | ಗಣಿತಶಾಸ್ತ್ರ ಅಧ್ಯಯನ ವಿಭಾಗ | 10.09.2018 | 07.09.2018 |
| 06. | ಡಾ. ಬಸವರಾಜ್ | ಅನ್ವಯಿಕ ಭೂ ವಿಜ್ಞಾನ ಅಧ್ಯಯನ ವಿಭಾಗ | 10.09.2018 | 07.09.2018 |

**ತೀರ್ಮಾನ**

ವಿಶ್ವವಿದ್ಯಾಲಯದ 06 ಸಂಖ್ಯೆ ಸಹಾಯಕ ಪ್ರಾಧ್ಯಾಪಕರುಗಳ ಸೇರಿಕೆ ದಿನಾಂಕವನ್ನು ಬದಲಾಯಿಸಿ ಸದರಿಯವರ ಸೇವಾ ಪುಸ್ತಕದಲ್ಲಿ ನಮೂದಿಸಲು ಸಭೆಯು ಅನುಮೋದಿಸಿತು.

➲ ಐಟಂ ನಂ. 11:

ವಿಷಯ: ಸಹಾಯಕ ನಿರ್ದೇಶಕರು/ಸ್ನಾತಕೋತ್ತರ ಕೇಂದ್ರದ ನಿಲಯಪಾಲಕರಾಗಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ಗಳಿಕೆ ರಜೆಯನ್ನು ಮಂಜೂರಿಸುವ ಕುರಿತು.

***

ಕಾಲೇಜು ಅಭಿವೃದ್ಧಿ ಮಂಡಳಿ ವಿಭಾಗದಲ್ಲಿ ಸಹಾಯಕ ನಿರ್ದೇಶಕರು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ನಿಲಯಪಾಲಕರಾಗಿ ರಜಾರಹಿತವಾಗಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ಗಳಿಕೆ ರಜೆಯನ್ನು ಮಂಜೂರಿಸಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿ ವಿಭಾಗದಲ್ಲಿ ಸಹಾಯಕ ನಿರ್ದೇಶಕರು ಹಾಗೂ ಸ್ನಾತಕೋತ್ತರ ಕೇಂದ್ರಗಳಲ್ಲಿ ನಿಲಯಪಾಲಕರಾಗಿ ರಜಾರಹಿತವಾಗಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ಗಳಿಕೆ ರಜೆಯನ್ನು ಸಭೆಯು ಅನುಮೋದಿಸಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ**

ಸನ್ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ. ಹೆಚ್.ಪಿ ರಮೇಶ್ ಇವರು ವಿಶ್ವವಿದ್ಯಾಲಯವು ಕೋವಿಡ್ ಸಂಕಷ್ಟ ಪರಿಸ್ಥಿತಿಯಲ್ಲೂ ಕಾರ್ಯನಿರ್ವಹಿಸಿ ಬಿಇ.ಡಿ ಪರೀಕ್ಷಾ ಫಲಿತಾಂಶಗಳನ್ನು ಪ್ರಕಟಿಸಿರುವ ಕಾರ್ಯವನ್ನು ಶ್ಲಾಘಿಸಿ ಅಭಿನಂಧಿಸಿದರು. ಜೊತೆಗೆ ಎಲ್ಲಾ ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳು ಸಹ ವಿಶ್ವವಿದ್ಯಾಲಯದ ಕಾರ್ಯತತ್ಪರತೆಯನ್ನು ಪ್ರಶಂಸಿಸಿ ಅಭಿನಂದನೆ ಸಲ್ಲಿಸಿದರು.

17.05.2021

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
"ಜ್ಞಾನ ಸಾಗರ" ಆವರಣ, ಬಳ್ಳಾರಿ – 583 105

ಕುಲಸಚಿವರು

ಸಂಖ್ಯೆ: ವಿಶ್ರೀಕೃವಿಬ/ಸಿಂಡಿಕೇಟ್ ಸಭೆ–ನಡಾವಳಿ/2021–22/**613** ದಿನಾಂಕ: 20.07.2021

ಗೆ,
ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ದಿನಾಂಕ 08.07.2021 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ. 15.07.2021

* * *

ದಿನಾಂಕ 08.07.2021 ರಂದು ಬೆಳಿಗ್ಗೆ 11.00 ಗಂಟೆಗೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿನ ವಿದ್ಯಾವಿಷಯಕ ಪರಿಷತ್ ಸಭಾಂಗಣದಲ್ಲಿ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

20.7.21

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ: ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು(ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ,ಕೊಪ್ಪಳ/ಯಲಬುರ್ಗಾ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

# ದಿನಾಂಕ 08.07.2021 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ

**ಐಟಂ ನಂ. 01:**

ದಿನಾಂಕ 30.03.2021 ಮತ್ತು 12.05.2021 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮಗಳ ವರದಿಯನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

**ತೀರ್ಮಾನ**

ದಿನಾಂಕ. 30.03.2021 ಮತ್ತು 12.05.2021 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮಗಳ ವರದಿಯನ್ನು ದೃಢೀಕರಿಸಿ ಅನುಮೋದಿಸಲಾಯಿತು.

**ಐಟಂ ನಂ. 02:**

ವಿಷಯ: ಸ್ಕೂಲ್ ಆಫ್ ಮೈನಿಂಗ್ ಸಂಸ್ಥೆ ಸ್ಥಾಪನೆಗೆ ಸುಮಾರು 50.00 ಎಕರೆ ಪ್ರದೇಶವನ್ನು ಒದಗಿಸುವ ಕುರಿತು.

ಉಲ್ಲೇಖ: ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಪತ್ರ ಸಂಖ್ಯೆ: ಗಭೂಇ/ಹೆನಿಬ/ಉವ/ಸ್ಕೂಲ್ ಆಫ್ ಮೈನಿಂಗ್/2021-22/161 ಬಳ್ಳಾರಿ ದಿನಾಂಕ 01.06.2021.

****

ರಾಜ್ಯ ಸರ್ಕಾರವು ಗಣಿ ಬಾಧಿತ ಪ್ರದೇಶದಲ್ಲಿ ಮತ್ತು ಗಣಿ ಗುತ್ತಿಗೆಗಳ ಪ್ರದೇಶಗಳಲ್ಲಿ ಕೌಶಲ್ಯ ಹೊಂದಿರುವ ಕಾರ್ಮಿಕರ ಅಗತ್ಯತೆ ಹೆಚ್ಚಿಸಲು ತರಬೇತಿ ನಡೆಸಲು ಇಚ್ಛೆ ಹೊಂದಿರುವ ಕಾರಣ ಕರ್ನಾಟಕ ಮೈನಿಂಗ್ ಎಕ್ಸಲೆಂಟ್ ಸಂಸ್ಥೆಯು ಈ ಸಂಬಂಧ ಸ್ಕೂಲ್ ಆಫ್ ಮೈನಿಂಗ್ ಸಂಸ್ಥೆ ಸ್ಥಾಪನೆಗೆ ಇಚ್ಛಿಸಿದೆ. ಹೀಗಾಗಿ ಸ್ಕೂಲ್ ಆಫ್ ಮೈನಿಂಗ್ ಸಂಸ್ಥೆ ಸ್ಥಾಪನೆಗೆ 50.00 ಎಕರೆ ಸ್ಥಳಾವಕಾಶ ಒದಗಿಸುವಂತೆ ಹೆಚ್ಚುವರಿ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಉತ್ತರ ವಲಯ, ಬಳ್ಳಾರಿ ಇವರು ಕೋರಿದ್ದಾರೆ. ಸದರಿ ಕೋರಿಕೆ ಕುರಿತು ಸಿಂಡಿಕೇಟ್ ಸಭೆಯ ಚರ್ಚೆ, ತೀರ್ಮಾನ ಮತ್ತು ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ಸ್ಕೂಲ್ ಆಫ್ ಮೈನಿಂಗ್ ಸಂಸ್ಥೆಯು ವಿಶ್ವವಿದ್ಯಾಲಯದ ಬಳ್ಳಾರಿ ಆವರಣದಲ್ಲಿ ಸ್ಥಾಪಿತವಾಗುವುದಾದಲ್ಲಿ ಸ್ಥಳದ ಅಭಾವದಿಂದ ಕೇವಲ 10.00 ಎಕರೆ ಅಥವಾ ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿಯ ಆವರಣದಲ್ಲಿ ಸ್ಥಾಪನೆಗೆ ಇಚ್ಛಿಸಿದಲ್ಲಿ 30.00 ಎಕರೆ ಸ್ಥಳವನ್ನು ನೀಡಲು ಅನುಮೋದನೆ ನೀಡಲಾಯಿತು. ಈ ಸಂಸ್ಥೆಯು ಬಳ್ಳಾರಿ ಆವರಣದಲ್ಲಿ ಸ್ಥಾಪಿತ ಆಗುವುದಾದಲ್ಲಿ ನಮ್ಮ ವಿಶ್ವವಿದ್ಯಾಲಯದ ಬಳಕೆಗೂ ಅನುಕೂಲವಾಗುವ ಕ್ರೀಡಾ ಸಂಕೀರ್ಣ (Sports Complex), ಪ್ರೇಕ್ಷಕ ಸಭಾಂಗಣ (Auditorium), ರಸ್ತೆ ನಿರ್ಮಾಣದಂತಹ ಸೌಕರ್ಯಗಳನ್ನು ನಿರ್ಮಿಸಿಕೊಡುವ ಷರತ್ತುಗಳನ್ನು ವಿಧಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಮುಂದುವರೆದು, ಸಾಧ್ಯವಾದಲ್ಲಿ ಸದರಿ ಸಂಸ್ಥೆಯನ್ನು ವಿಜಯನಗರ ಶ್ರೀ ಕೃಷ್ಣದೇವರಾಯ, ಬಳ್ಳಾರಿ ವಿಶ್ವವಿದ್ಯಾಲಯದ ಅಡಿಯಲ್ಲಿಯೇ ಪ್ರಾರಂಭಿಸುವ ಸಾಧ್ಯತೆಗಳನ್ನು ಪರಿಶೀಲಿಸುವ ನಿರ್ಧಾರವನ್ನು ಸಹ ಸಭೆಯಲ್ಲಿ ಕೈಗೊಳ್ಳಲಾಯಿತು.

➲ ಐಟಂ ನಂ. 03:

ವಿಷಯ: ಬಿ.ಇಡಿ ಮಹಾವಿದ್ಯಾಲಯಗಳ ಕಾರ್ಯನಿರ್ವಹಣಾ ಪರಿಶೀಲನೆ ವರದಿಯ ಕುರಿತು.

***

ಬಿ.ಇಡಿ ಮಹಾವಿದ್ಯಾಲಯಗಳ ಶೈಕ್ಷಣಿಕ ಚಟುವಟಿಕೆಗಳ ಕಾರ್ಯನಿರ್ವಹಣೆ ಕುರಿತು NCTE ಮತ್ತು ವಿಶ್ವವಿದ್ಯಾಲಯದ ಪರಿನಿಯಮಾವಳಿಗಳ ಅನುಸಾರ ಪರಿಶೀಲಿಸಿ ಸಮಗ್ರ ವರದಿಯನ್ನು ಸಲ್ಲಿಸಲು ಸಮಿತಿಗಳನ್ನು ರಚಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಸಮಿತಿಗಳು ಈ ಕೆಳಕಂಡ ದಿನಾಂಕಗಳಂದು ಭೇಟಿ ನೀಡಿ NCTE ಮತ್ತು ವಿಶ್ವವಿದ್ಯಾಲಯದ ಪರಿನಿಯಮಾವಳಿಗಳ ಅನುಸಾರ ಪರಿಶೀಲಿಸಿ ಸದರಿ ಸಮಿತಿಗಳ ಅಧ್ಯಕ್ಷರುಗಳು ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ತೀರ್ಮಾನಕ್ಕಾಗಿ ಸಲ್ಲಿಸಿದೆ.

| ಕ್ರಸಂ | ಬಿ.ಇಡಿ ಮಹಾವಿದ್ಯಾಲಯದ ಹೆಸರು | ಸಮಿತಿ ಭೇಟಿ ನೀಡಿದ ದಿನಾಂಕ |
|---|---|---|
| 1. | ಎಸ್.ಎಂ.ಬಿ.ಎಸ್ ಶಿಕ್ಷಣ ಮಹಾವಿದ್ಯಾಲಯ, ಮರಳಿ | 05.02.2021 |
| 2. | ಟಿ.ಎಂ.ಎ.ಇ.ಎಸ್ ಶಿಕ್ಷಣ ಮಹಾವಿದ್ಯಾಲಯ, ಗಂಗಾವತಿ | 05.02.2021 |
| 3. | ಎಸ್.ಬಿ.ಬಿ.ಎನ್ ಶಿಕ್ಷಣ ಮಹಾವಿದ್ಯಾಲಯ, ಹೊಸಪೇಟೆ | 05.02.2021 |
| 4. | ಜೆ.ಎಸ್.ಎಸ್ ಶಿಕ್ಷಣ ಮಹಾವಿದ್ಯಾಲಯ, ಹೂವಿನಹಡಗಲಿ | 22.02.2021 |
| 5. | ನ್ಯಾಷನಲ್ ಶಿಕ್ಷಣ ಮಹಾವಿದ್ಯಾಲಯ, ಹೊಸಪೇಟೆ | 22.02.2021 |
| 6. | ತುಂಗಾಭದ್ರ ಶಿಕ್ಷಣ ಮಹಾವಿದ್ಯಾಲಯ, ಕೊಟ್ಟೂರು | 22.02.2021 |

**ತೀರ್ಮಾನ**

ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲಾ ಬಿ.ಇಡಿ ಕಾಲೇಜುಗಳ ವರದಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಎಲ್ಲಾ ಸಿಂಡಿಕೇಟ್ ಸಮಿತಿಗಳು ಹಾಗೂ ಕಾಲೇಜು ಅಭಿವೃದ್ಧಿ ಮಂಡಳಿಯ ವರದಿಗಳನ್ನು ಕ್ರೋಢೀಕರಿಸಿ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲು ಒಂದು ತಿಂಗಳ ಕಾಲಾವಕಾಶ ನೀಡಿ ಕೂಡಲೇ ಶಿಕ್ಷಣ ಮಹಾವಿದ್ಯಾಲಯಗಳಿಗೆ ಪತ್ರ ಬರೆಯಲು ಸಭೆಯಲ್ಲಿ ನಿರ್ಧರಿಸಲಾಯಿತು. ನಂತರ ಈ ಮಹಾವಿದ್ಯಾಲಯಗಳು ಶಿಫಾರಸ್ಸುಗಳ ಅಳವಡಿಕೆಯನ್ನು ಸಿಂಡಿಕೇಟ್ ಸಮಿತಿಗಳು ಎರಡು ತಿಂಗಳುಗಳ ಒಳಗಾಗಿ ಭೇಟಿ ನೀಡಿ ಪರಿಶೀಲಿಸುವ ಕುರಿತು ನಿರ್ಧರಿಸಲಾಯಿತು.

➲ ಐಟಂ ನಂ. 04:

ವಿಷಯ: ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕೋತ್ತರ ಕೇಂದ್ರಗಳಲ್ಲಿ ಪ್ರಾರಂಭಿಸಿರುವ ಕೋರ್ಸ್‌ಗಳ ಅಧ್ಯಯನ ಸಮಿತಿಯ ವರದಿಯ ಕುರಿತು.

ಉಲ್ಲೇಖ: 1. ಅಧಿಸೂಚನೆ ಸಂಖ್ಯೆ : ವಿಶ್ರೀಕೃವಿಬ/ಆಡಳಿತ-ಸಾಮಾನ್ಯ/ಸಮಿತಿ/2020-21/2349 ದಿನಾಂಕ 27.02.2021

2. ವರದಿ ದಿನಾಂಕ 10.03.2021

***

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಸ್ನಾತಕೋತ್ತರ ಕೇಂದ್ರಗಳಲ್ಲಿ ಉಲ್ಲೇಖ-01ರಂತೆ ಕೋರ್ಸ್‌ಗಳು ಪ್ರಾರಂಭಿಸಿರುವ ಕುರಿತ ಅಧ್ಯಯನ ಮಾಡಲು ಸಮಿತಿಯನ್ನು ರಚಿಸಿ ವರದಿಯನ್ನು ಸಲ್ಲಿಸುವಂತೆ ಕೋರಲಾಗಿತ್ತು. ಉಲ್ಲೇಖ-02ರಂತೆ ಸದರಿ ಸಮಿತಿಯು ಎಲ್ಲಾ ಸ್ನಾತಕೋತ್ತರ ಕೇಂದ್ರಗಳಲ್ಲಿ ಕೋರ್ಸ್‌ಗಳು ಪ್ರಾರಂಭಿಸಿರುವ ಕುರಿತ ಅಧ್ಯಯನ ನಡೆಸಿ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ವಿವಿಧ ಸ್ನಾತಕೋತ್ತರ ಕೇಂದ್ರಗಳಲ್ಲಿ ಪ್ರಾರಂಭಿಸಿರುವ ಕೋರ್ಸ್‌ಗಳ ಅಧ್ಯಯನ ಸಮಿತಿಯ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ಸಭೆಯು ಈ ಕೆಳಕಂಡಂತೆ ಸ್ನಾತಕೋತ್ತರ ಕೇಂದ್ರಗಳಲ್ಲಿ ವಿಷಯ/ವಿಭಾಗಗಳನ್ನು ನಡೆಸಲು ತೀರ್ಮಾನಿಸಲಾಯಿತು.

1. ಸ್ನಾತಕೋತ್ತರ ಕೇಂದ್ರ, ಕೊಪ್ಪಳ:- ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಇಂಗ್ಲೀಷ ಮತ್ತು ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ.
2. ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ:- ಕನ್ನಡ, ವಾಣಿಜ್ಯಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತಶಾಸ್ತ್ರ ಅಧ್ಯಯನ ವಿಭಾಗ.

3. ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ:- ಕನ್ನಡ, ಇತಿಹಾಸ ಮತ್ತು ಪುರಾತತ್ವ, ವಾಣಿಜ್ಯಶಾಸ್ತ್ರ, ಅನ್ವಯಿಕ ಭೂವಿಜ್ಞಾನ, ಖನಿಜ ಸಂಸ್ಕರಣ ಮತ್ತು ಸಮಾಜಕಾರ್ಯ ಅಧ್ಯಯನ ವಿಭಾಗ.

ಮುಂದುವರೆದು, ಅನ್ವಯಿಕ ಭೂವಿಜ್ಞಾನ ಮತ್ತು ಖನಿಜ ಸಂಸ್ಕರಣ ಅಧ್ಯಯನ ವಿಭಾಗಗಳನ್ನು ಒಂದುಗೂಡಿಸಿ, ಒಂದೇ ವಿಷಯದಡಿ ಬೋಧನೆ ಮಾಡಲು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲು ನಿರ್ಧರಿಸಲಾಯಿತು.

➲ **ಐಟಂ ನಂ. 05:**

ವಿಷಯ: 2021–22ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಶುಲ್ಕದ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ. 01.04.2021 ರಂದು ನಡೆದ ಶುಲ್ಕ ಸಮಿತಿ ಸಭೆಯಲ್ಲಿ 2020–21ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಶುಲ್ಕಕ್ಕೆ ಶೇ. 10% ರಷ್ಟು ಶುಲ್ಕವನ್ನು ಹೆಚ್ಚಿಸಿ, 2021–22ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಶುಲ್ಕವನ್ನು ಅನುಮೋದಿಸಲಾಗಿತ್ತು. ಈ ಕುರಿತು ಪ್ರಾಂಶುಪಾಲರ ಮನವಿ ಮತ್ತು ಕೊರೋನಾದ ಪರಿಸ್ಥಿತಿಯನ್ನು ಅವಲೋಕಿಸಿ ದಿನಾಂಕ. 30.06.2021 ರಂದು ನಡೆದ ಶುಲ್ಕ ಸಮಿತಿಯ ಸಭೆಯಲ್ಲಿ 2020–21ನೇ ಶೈಕ್ಷಣಿಕ ಸಾಲಿಗೆ ನಿಗದಿಪಡಿಸಿದ ಸಂಯೋಜನಾ ಶುಲ್ಕವನ್ನೇ 2021–22ನೇ ಶೈಕ್ಷಣಿಕ ಸಾಲಿಗೆ ಮುಂದುವರೆಸಲು ಹಾಗೂ ಸಂಯೋಜನಾ ಶುಲ್ಕದ ಜೊತೆಗೆ ವಿಶ್ವವಿದ್ಯಾಲಯದ ಅಭಿವೃದ್ಧಿ ಶುಲ್ಕ ಹಾಗೂ ಜಿ.ಎಸ್.ಟಿಯನ್ನು ಸೇರಿಸಲು ತೀರ್ಮಾನಿಸಿ ಅನುಮೋದಿಸಲಾಯಿತು. ಶುಲ್ಕ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡ 2021–22ನೇ ಸಂಯೋಜನಾ ಶುಲ್ಕವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

<u>**ತೀರ್ಮಾನ**</u>

2021–22ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಶುಲ್ಕದ ಕುರಿತು ಚರ್ಚಿಸಿದ ಸಭೆಯು, ಶುಲ್ಕ ಸಮಿತಿ ಸಭೆಯ ಅನುಮೋದನೆಯಂತೆ 2020–21ನೇ ಶೈಕ್ಷಣಿಕ ಸಾಲಿಗೆ ನಿಗದಿಪಡಿಸಿದ ಸಂಯೋಜನಾ ಶುಲ್ಕ ವಿಶ್ವವಿದ್ಯಾಲಯದ ಅಭಿವೃದ್ಧಿ ಶುಲ್ಕ ಹಾಗೂ ಜಿ.ಎಸ್.ಟಿಯನ್ನು ಪರಿಗಣಿಸಿ 2021–22ನೇ ಶೈಕ್ಷಣಿಕ ಸಾಲಿಗೆ ಸಂಯೋಜನಾ ಶುಲ್ಕವನ್ನು ಸಭೆಯು ಅನುಮೋದಿಸಿತು.

➲ **ಐಟಂ ನಂ. 06:**

ವಿಷಯ: ವಿವಿಧ ಸ್ನಾತಕೋತ್ತರ ವಿಭಾಗಳಿಗೆ ಮುಖ್ಯಸ್ಥರ ನೇಮಕಾತಿಯನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

*****

ಈ ಕೆಳಕಂಡ ಸ್ನಾತಕೋತ್ತರ ವಿಭಾಗಗಳಿಗೆ ಸೂಚಿಸಿದ ದಿನಾಂಕದಿಂದ ಜಾರಿಗೆ ಬರುವಂತೆ 02 ವರ್ಷಗಳ ಅವಧಿಗೆ ಈ ಕೆಳಗಿನಂತೆ ಮುಖ್ಯಸ್ಥರನ್ನು ನೇಮಕ ಮಾಡಿದ್ದು, ಸದರಿ ಮಾಹಿತಿಯನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

| ಕ್ರಸಂ | ವಿಭಾಗಗಳು | ಅವಧಿ ಮುಗಿದ ಮುಖ್ಯಸ್ಥರ ಹೆಸರು | ಪ್ರಸ್ತುತ ನೇಮಕಾತಿ ಮಾಡಲಾದ ಮುಖ್ಯಸ್ಥರ ಹೆಸರು | ಅನ್ವಯಿಸುವ ದಿನಾಂಕ |
|---|---|---|---|---|
| | 1 | 2 | 3 | 4 |
| 01. | ಖನಿಜ ಸಂಸ್ಕರಣ ಅಧ್ಯಯನ ವಿಭಾಗ | ಡಾ. ಪಿ. ಶರತ್‌ಕುಮಾರ | ಡಾ. ಪಿ. ಶರತ್‌ಕುಮಾರ | 04.05.2021 |
| 02. | ಅನ್ವಯಿಕ ಭೂವಿಜ್ಞಾನ ಅಧ್ಯಯನ ವಿಭಾಗ | ಶ್ರೀ. ಎಂ. ಡಿ. ಖಣದಾಳಿ | ಪ್ರೊ. ಸಿ. ವೆಂಕಟಯ್ಯ | 04.05.2021 |
| 03. | ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ | ಪ್ರೊ. ವಿಜಯಕುಮಾರ ಬಿ. ಮಲಶೆಟ್ಟಿ | ಡಾ. ಶಶಿಕಾಂತ ಹೆಚ್. ಮಜಿಗಿ | 04.07.2021 |
| 04. | ಸಮಾಜಕಾರ್ಯ ಅಧ್ಯಯನ ವಿಭಾಗ | ಡಾ. ಗೌರಿ ಮಾಣಿಕ ಮಾನಸ | ಡಾ. ಗೌರಿ ಮಾಣಿಕ ಮಾನಸ | 04.07.2021 |
| 05 | ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ | ಡಾ. ಅನಂತ ಎಲ್. ಝುಂಡೇಕರ್ | ಡಾ. ತಿಪ್ಪೇಸ್ವಾಮಿ ಎಚ್. | 04.07.2021 |
| 06 | ಭೌತಶಾಸ್ತ್ರ ಅಧ್ಯಯನ ವಿಭಾಗ | ಪ್ರೊ. ಜೆ. ತಿಪ್ಪೇರುದ್ರಪ್ಪ | ಡಾ. ಖಿಡ್ಕೆ ಉದಯಕುಮಾರ | 04.07.2021 |
| 07 | ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗ | ಪ್ರೊ. ಜಿ. ಪಿ. ದಿನೇಶ್ | ಡಾ. ಅರ್ಚನಾ ಹೆಚ್. ಎನ್. | 04.07.2021 |

## ತೀರ್ಮಾನ

ವಿವಿಧ ಸ್ನಾತಕೋತ್ತರ ವಿಭಾಗಳಿಗೆ ಮುಖ್ಯಸ್ಥರ ನೇಮಕಾತಿ ಮಾಡಿ ಹೊರಡಿಸಿದ ಆದೇಶಗಳನ್ನು ಸಭೆಯು ಅನುಸರ್ಮಥಿಸಿತು.

➲ ಐಟಂ ನಂ. 07:

ವಿಷಯ: ವಿಶ್ವವಿದ್ಯಾಲಯದ ಪರೀಕ್ಷೆಗಳ ನಿರ್ವಹಣೆ (ಇಪಿಎಂಎಸ್) ಮತ್ತು ಇತ್ಯಾದಿ ಕೆಲಸಗಳನ್ನು ಗುತ್ತಿಗೆ ನೀಡುವ ಕುರಿತು.

ಉಲ್ಲೇಖ: 1. ಮೆ.ಲಾಜಿಸಿಸ್, ಬೆಂಗಳೂರು ಇವರೊಂದಿಗೆ ಮಾಡಿಕೊಂಡ ಕರಾರು ಪತ್ರದ ದಿನಾಂಕ: 31.08.2017

2. ಮೆ.ಲಾಜಿಸಿಸ್, ಬೆಂಗಳೂರು ಇವರಿಗೆ ನೀಡಿದ ಈ ಕಛೇರಿ ಆದೇಶ ಸಂಖ್ಯೆ: 1554 ದಿನಾಂಕ:31.08.2017.

3. ಸಿಂಡಿಕೇಟ್ ಸಭೆಯ ನಡಾವಳಿ ಸಂಖ್ಯೆ: 07 ದಿನಾಂಕ:09.07.2020.

4. ಗುತ್ತಿಗೆ ಅವಧಿಯನ್ನು ವಿಸ್ತರಿಸಿದ ಈ ಕಛೇರಿ ಆದೇಶ ಸಂಖ್ಯೆ:1055ಎ ದಿನಾಂಕ:08.12.2020

****

ವಿಶ್ವವಿದ್ಯಾಲಯದ ಪರೀಕ್ಷೆಗಳ ನಿರ್ವಹಣೆ (ಇಪಿಎಂಎಸ್) ಹಾಗೂ ಇತ್ಯಾದಿ ಕೆಲಸಗಳನ್ನು ನಿರ್ವಹಿಸಲು ಮೆ: ಲಾಜಿಸಿಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರಿಗೆ ಈ ಕೆಳಗಿನಂತೆ ದಿನಾಂಕ: 31.08.2017 ರಿಂದ ಆಗಸ್ಟ್ 2020 ರವರೆಗೆ ಗುತ್ತಿಗೆಯನ್ನು ನೀಡಲಾಗಿತ್ತು. ಈ ಗುತ್ತಿಗೆ ಅವಧಿಯು ಮುಕ್ತಾಯವಾಗಿದ್ದರಿಂದ ಸೆಪ್ಟೆಂಬರ್/ಅಕ್ಟೋಬರ್ 2020 ರ ಪರೀಕ್ಷೆಗಳ ನಿರ್ವಹಣೆಯ ಹಾಗೂ ಇತ್ಯಾದಿ ಕೆಲಸಗಳನ್ನು ನಿರ್ವಹಿಸಲು ಉಲ್ಲೇಖ (3&4) ರನ್ವಯ ಮೆ. ಲಾಜಿಸಿಸ್, ಬೆಂಗಳೂರು ಇವರಿಗೆ ತಮ್ಮ ಸೇವೆಯನ್ನು ಮುಂದುವರೆಸಲು ಗುತ್ತಿಗೆಯನ್ನು ಹಾಲಿ ದರದನ್ವಯ ಮುಂದಿನ ಒಂದು ಪರೀಕ್ಷೆ ಅಥವಾ ಹೊಸ ಇ-ಟೆಂಡರ್ ಪ್ರಕ್ರಿಯೆ ಮುಕ್ತಾಯದವರೆಗೆ (ಇವುಗಳಲ್ಲಿ ಯಾವುದು ನಂತರ ಘಟಿಸುವುದೋ ಅಲ್ಲಿಯವರಗೆ) ನೀಡಲಾಗಿತ್ತು. ಸದರಿ ಗುತ್ತಿಗೆ ವಿಸ್ತರಣೆಯು ಮುಕ್ತಾಯದ ಹಂತದಲ್ಲಿ ಇರುವುದರಿಂದ ಹಾಗೂ ಮುಂಬರುವ ಪರೀಕ್ಷೆಗಳ ನಿರ್ವಹಣಾ ಹಾಗೂ ಇತ್ಯಾದಿ ಕೆಲಸಗಳನ್ನು ನಿರ್ವಹಿಸಲು ನೂತನ ಸಂಸ್ಥೆಯೊಂದಿಗೆ ಒಡಂಬಡಿಕೆ ಅಗತ್ಯವಿರುವುದರಿಂದ ಸರ್ಕಾರದ ಮುಂದಿನ ಆದೇಶದವರೆಗೆ ಕಾರ್ಯನಿರ್ವಹಿಸಲು ಇ-ಟೆಂಡರ್ ಆಹ್ವಾನಿಸಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

ಮುಂದುವರೆದು, ಈ ಮಧ್ಯೆ ರಾಜ್ಯ ಸರ್ಕಾರದಿಂದ ಇಪಿಎಂಎಸ್ ಸೇವೆಗೆ ಸಂಬಂಧಿಸಿದಂತೆ ಯೋಜನೆಗಳು ಜಾರಿಯಾದರೆ ಅದನ್ನು ಅಳವಡಿಸಿಕೊಂಡು ಇ-ಟೆಂಡರ್ ರದ್ದುಪಡಿಸಲಾಗುವುದು.

## ತೀರ್ಮಾನ

ವಿಶ್ವವಿದ್ಯಾಲಯದ ಪರೀಕ್ಷೆಗಳ ನಿರ್ವಹಣೆ (ಇಪಿಎಂಎಸ್) ಮತ್ತು ಇತ್ಯಾದಿ ಕೆಲಸಗಳನ್ನು ಗುತ್ತಿಗೆ ನೀಡುವ ಕುರಿತು ಚರ್ಚಿಸಿದ ಸಭೆಯು, ಗುತ್ತಿಗೆಯ ಈ ಹಿಂದಿನ ವಿಸ್ತರಣೆಯು ಮುಕ್ತಾಯದ ಹಂತದಲ್ಲಿ ಇರುವುದರಿಂದ ಹಾಗೂ ಕೋವಿಡ್-19 ಲಾಕಡೌನ್ ನಿಮಿತ್ತ ನೂತನ ಪ್ರಕ್ರಿಯೆ ಇದುವರೆಗೆ ಪ್ರಾರಂಭವಾಗದಿರುವುದನ್ನು ಪರಿಗಣಿಸಿ, ಪ್ರಸ್ತುತ 2020-21ನೇ ಸಾಲಿನ ಸಮ ಮತ್ತು ಬೆಸ ಎರಡೂ ಸೆಮಿಸ್ಟರ್‌ನ್ ಪರೀಕ್ಷೆಗಳು ಸೆಪ್ಟೆಂಬರ್- 2021ರ ಒಳಗಾಗಿ ಆಗಬೇಕಾಗಿರುವುದರಿಂದ ಪ್ರಸ್ತುತ ಗುತ್ತಿಗೆ ವಿಸ್ತರಣೆಯ ಅಗತ್ಯತೆಯ ಹಿನ್ನೆಲೆಯಲ್ಲಿ 2020-21ನೇ ಶೈಕ್ಷಣಿಕ ಸಾಲಿನ ಎಲ್ಲಾ ಸೆಮಿಸ್ಟರ್ ಪರೀಕ್ಷೆಗಳ ಪರಿಣಾಮ ಘೋಷಣೆವರೆಗೆ ಸದ್ಯ ಜಾರಿಯಲ್ಲಿರುವ ಮೆ: ಲಾಜಿಸಿಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರ ಸೇವೆಯನ್ನು ಹಾಲಿ ದರಗಳನ್ವಯಿಸಿ ಗುತ್ತಿಗೆಯನ್ನು ಮುಂದುವರೆಸಲು ಸಭೆಯು ಅನುಮೋದಿಸಿದೆ. ಜೊತೆಗೆ ಪರೀಕ್ಷಾ ಕಾರ್ಯ ನಿರ್ವಹಣೆಗಾಗಿ ನೂತನ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸಭೆಯು ಅನುಮತಿ ನೀಡಿತು.

ಮುಂದುವರೆದು, ರಾಜ್ಯ ಸರ್ಕಾರದಿಂದ ಇಪಿಎಂಎಸ್ ಸೇವೆಗೆ ಸಂಬಂಧಿಸಿದಂತೆ ಯೋಜನೆಗಳು ಜಾರಿಯಾದಲ್ಲಿ ಅವುಗಳನ್ನು ಅಳವಡಿಸಿಕೊಂಡು ನೂತನ ಒಡಂಬಡಿಕೆಯನ್ನು ರದ್ದುಗೊಳಿಸುವ ಅಧಿಕಾರವನ್ನು ವಿಶ್ವವಿದ್ಯಾಲಯ ಹೊಂದಿರಲು ನಿರ್ಧರಿಸಲಾಯಿತು.

➲ ಐಟಂ ನಂ. 08:

ವಿಷಯ: M/s Haigreeva Infratech Ltd ಇವರ ಮೇಲ್ಮನವಿಗೆ ಜಿಲ್ಲಾ ನ್ಯಾಯಾಲಯ, ಬಳ್ಳಾರಿ ನೀಡಿರುವ ತೀರ್ಪಿನ ವಿರುದ್ಧ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ Science Block ನ್ನು M/s Haigreeva Infratech Ltd ಇವರಿಂದ ನಿರ್ಮಾಣಗೊಂಡಿದ್ದು ಕೊನೆಯ ಹಂತದ ಬಿಲ್ಲ್ ಮೊತ್ತ ರೂ.1,03,40,821/- ಬಾಕಿ ಇದ್ದು, ಇದಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಕಂಪನಿಯು ಜಿಲ್ಲಾ ನ್ಯಾಯಾಲಯ, ಬಳ್ಳಾರಿಯಲ್ಲಿ ಮೊಕದ್ದಮೆಯನ್ನು ಹೂಡಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಜಿಲ್ಲಾ ನ್ಯಾಯಾಲಯ, ಬಳ್ಳಾರಿ ಇವರು ರೂ.1,03,40,281/-ಕ್ಕೆ ಹಳೆಯ, ಪ್ರಸ್ತುತ ಇರುವ ಹಾಗೂ ಭವಿಷ್ಯದ ಬಡ್ಡಿಯೊಂದಿಗೆ ಬಾಕಿ ಮೊತ್ತವನ್ನು ಪಾವತಿಸಲು ತೀರ್ಪನ್ನು ನೀಡಿರುತ್ತದೆ. ಕಾರಣ, ಜಿಲ್ಲಾ ನ್ಯಾಯಾಲಯ, ಬಳ್ಳಾರಿ ನೀಡಿರುವ ತೀರ್ಪಿನ ವಿರುದ್ದ ಹೈಕೋರ್ಟ್‌ನಲ್ಲಿ ಮೇಲ್ಮನವಿಯನ್ನು ಸಲ್ಲಿಸಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ತೀರ್ಮಾನಕ್ಕಾಗಿ ಸಲ್ಲಿಸಿದೆ.

**ತೀರ್ಮಾನ**

M/s Haigreeva Infratech Ltd ಇವರ ಮೇಲ್ಮನವಿಗೆ ಜಿಲ್ಲಾ ನ್ಯಾಯಾಲಯ, ಬಳ್ಳಾರಿ ನೀಡಿರುವ ತೀರ್ಪಿನ ವಿರುದ್ಧ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ಕುರಿತು ಚರ್ಚಿಸಿದ ಸಭೆಯು ಮೇಲ್ಮನವಿ ಸಲ್ಲಿಕೆಗೆ ಅನುಮೋದಿಸಿತು.

➲ ಐಟಂ ನಂ. 09:

ವಿಷಯ: ಖರೀದಿ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

ಉಲ್ಲೇಖ: 1. ದಿನಾಂಕ 15.04.2021 ರಂದು ಜರುಗಿದ ಖರೀದಿ ಸಮಿತಿ ಸಭೆ
2. 12.05.2021 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ 05

*****

ವಿಶ್ವವಿದ್ಯಾಲಯದ ಮುಖ್ಯ ಆವರಣ ಮತ್ತು ಎಲ್ಲಾ ಸ್ನಾತಕೋತ್ತರ ಕೇಂದ್ರಗಳ ವಿವಿಧ ವಿಭಾಗ/ಘಟಕಗಳಿಗೆ ಅಗತ್ಯತೆಯ ಅನುಸಾರವಾಗಿ ವಿವಿಧ ಉಪಕರಣ ಮತ್ತು ಸಾಮಗ್ರಿಗಳನ್ನು ಖರೀದಿಸಬೇಕಾದ ಕಾರಣ, ಸದರಿ ಖರೀದಿಯ ವಿವರಗಳನ್ನು ಹಾಗೂ ಪ್ರಕ್ರಿಯೆಯನ್ನು ದಿನಾಂಕ 15.04.2021 ರಂದು ಜರುಗಿದ ಖರೀದಿ ಸಲಹಾ ಸಮಿತಿ ಸಭೆಯಲ್ಲಿ ಮಂಡಿಸಿ, ಸದರಿ ಖರೀದಿ ಸಲಹಾ ಸಮಿತಿ ಸಭೆಯು ಎಲ್ಲಾ ಕಾರ್ಯಸೂಚಿಗಳನ್ನು ಪರಿಶೀಲಿಸಿ ತೀರ್ಮಾನಿಸಿದ ನಡಾವಳಿಯನ್ನು ದಿನಾಂಕ 12.05.2021 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿತ್ತು, ಸದರಿ ಸಭೆಯಲ್ಲಿ ಮುಂದೂಡಿದ ಇನ್ನುಳಿದ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮರುಮಂಡಿಸಿದೆ.

**ತೀರ್ಮಾನ**

ದಿನಾಂಕ 15.04.2021 ರಂದು ಜರುಗಿದ ಖರೀದಿ ಸಲಹಾ ಸಮಿತಿ ಸಭೆಯ ನಡಾವಳಿಗಳಲ್ಲಿ ಈ ಸಿಂಡಿಕೇಟ್ ಸಭೆಯಲ್ಲಿ ಮರುಮಂಡಿಸಿದ ಖರೀದಿ ಸಲಹಾ ಸಮಿತಿ ನಡಾವಳಿಯನ್ನು ಸಭೆಯು ದೃಢೀಕರಿಸಿ ಅನುಮೋದಿಸಿತು.

➲ ಐಟಂ ನಂ. 10:

ವಿಷಯ: ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

***

ದಿನಾಂಕ 07.04.2021 ರಂದು ಕಟ್ಟಡ ಸಲಹಾ ಸಮಿತಿ ಸಭೆಯು ಜರುಗಿದ್ದು, ಈ ಸಮಿತಿ ಸಭೆಯ ನಡಾವಳಿಗಳನ್ನು ದಿನಾಂಕ 12.05.2021 ಸಾಮಾನ್ಯ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮರುಮಂಡಿಸಿದೆ.

**ತೀರ್ಮಾನ**

ದಿನಾಂಕ 07.04.2021 ರಂದು ಜರುಗಿದ ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳಲ್ಲಿ ಈ ಸಿಂಡಿಕೇಟ್ ಸಭೆಯಲ್ಲಿ ಮರುಮಂಡಿಸಿದ ನಡಾವಳಿಯನ್ನು ಸಭೆಯು ದೃಢೀಕರಿಸಿ ಅನುಮೋದಿಸಿತು.

15.7.21

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

| | | |
|---|---|---|
| | ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ<br>"ಜ್ಞಾನ ಸಾಗರ" ಆವರಣ, ಬಳ್ಳಾರಿ – 583 105 | |
| ಕುಲಸಚಿವರು | | |

ಸಂಖ್ಯೆ: ವಿಶ್ರೀಕೃವಿಬ/ಸಿಂಡಿಕೇಟ್ ಸಭೆ–ನಡಾವಳಿ/2021–22/ ದಿನಾಂಕ: 28.08.2021

ಗೆ,
ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ದಿನಾಂಕ 12.08.2021 ರಂದು ಮಧ್ಯಾಹ್ನ 03.30 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ. 28.08.2021

* * *

ದಿನಾಂಕ 12.08.2021 ರಂದು ಮಧ್ಯಾಹ್ನ 03.30 ಗಂಟೆಗೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿನ ವಿದ್ಯಾವಿಷಯಕ ಪರಿಷತ್ ಸಭಾಂಗಣದಲ್ಲಿ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ: ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು(ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ,ಕೊಪ್ಪಳ/ಯಲಬುರ್ಗಾ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 12.08.2021 ರಂದು ಮಧ್ಯಾಹ್ನ 03.30 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿ

**ಐಟಂ ನಂ. 01:**

ವಿಷಯ: 2021–22ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾಲಯದ ಸ್ನಾತಕ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮಾ ಕೋರ್ಸ್, ಬಿ.ಇಡಿ, ಬಿ.ಪಿ.ಇಡಿ ಮತ್ತು ಪಿಹೆಚ್.ಡಿ ಪ್ರವೇಶ, ಪರೀಕ್ಷಾ ಹಾಗೂ ಇತರೆ ಶುಲ್ಕಗಳ ನಿಗದಿ ಕುರಿತು.

ಉಲ್ಲೇಖ: 1. ಈ ಕಛೇರಿ ಅಧಿಸೂಚನೆ ಸಂಖ್ಯೆ: ವಿಶ್ರೀಕೃವಿಬ/ವಿಮವಿ/ಶೈ.ವೇ.ಪ–ಶು.ಪ–ಪ್ರ.ಅ/ 2021–22/296 ದಿನಾಂಕ : 18/06/2021

2. ಈ ಕಛೇರಿ ಸಭೆ ಸೂಚಿ ಸಂಖ್ಯೆ: ವಿಶ್ರೀಕೃವಿಬ/ವಿಮಂವಿ/ಶು.ನಿ–ಸ.ಸೂ/2021–22/763 ದಿನಾಂಕ : 05/08/2021

*****

2021–22ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾಲಯದ ಸ್ನಾತಕ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮಾ ಕೋರ್ಸ್, ಬಿ.ಇಡಿ, ಬಿ.ಪಿ.ಇಡಿ ಮತ್ತು ಪಿಹೆಚ್.ಡಿ ಪ್ರವೇಶ, ಪರೀಕ್ಷಾ ಹಾಗೂ ಇತರೆ ಶುಲ್ಕಗಳ ನಿಗದಿಪಡಿಸುವ ಸಂಬಂಧ ಉಲ್ಲೇಖ–01 ರನ್ವಯ ಸಮಿತಿಯನ್ನು ರಚಿಸಿದೆ. ನಂತರ ಸದರಿ ಸಮಿತಿಯು ಉಲ್ಲೇಖ–02 ರನ್ವಯ ದಿನಾಂಕ 10.08.2021 ರಂದು ಸದರಿ ವಿಷಯದ ಕುರಿತಾಗಿ ಸಭೆಯನ್ನು ಸೇರಿ ಸ್ನಾತಕ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮಾ ಕೋರ್ಸ್, ಬಿ.ಇಡಿ, ಬಿ.ಪಿ.ಇಡಿ ಮತ್ತು ಪಿಹೆಚ್.ಡಿ ಪ್ರವೇಶ, ಪರೀಕ್ಷಾ ಹಾಗೂ ಇತರೆ ಶುಲ್ಕಗಳ ನಿಗದಿ ಕುರಿತಾಗಿ ಚರ್ಚಿಸಿ ಸಭೆಯು ನಡಾವಳಿಯನ್ನು ಸಲ್ಲಿಸಿದೆ. ಸದರಿ ನಡಾವಳಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ತೀರ್ಮಾನ

2021–22ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾಲಯದ ಸ್ನಾತಕ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮಾ ಕೋರ್ಸ್, ಬಿ.ಇಡಿ, ಬಿ.ಪಿ.ಇಡಿ ಮತ್ತು ಪಿಹೆಚ್.ಡಿ ಪ್ರವೇಶ, ಪರೀಕ್ಷಾ ಹಾಗೂ ಇತರೆ ಶುಲ್ಕಗಳ ನಿಗದಿ ಕುರಿತಾಗಿ ಚರ್ಚಿಸಿದ ಸಭೆಯು ಸದರಿ ಸಭೆಯ ನಡಾವಳಿಯನ್ನು ಅನುಮೋದಿಸಿತು.

ಮುಂದುವರೆದು, 2021–22ನೇ ಸಾಲಿನ ದ್ವಿತೀಯ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರವೇಶಾತಿಯಲ್ಲಿಯೂ ಕೋವಿಡ್–19 ಮಹಾಮಾರಿ ಸಾಂಕ್ರಾಮಿಕ ರೋಗಕ್ಕೆ ಬಲಿಯಾದ ಪೋಷಕರ (ದಾಖಲಾತಿಗಳನ್ನು ಸಲ್ಲಿಸಿದ್ದಲ್ಲಿ ಮಾತ್ರ) ಮಕ್ಕಳಿಗೆ ಮಾತ್ರ ಪ್ರವೇಶಾತಿ ಶುಲ್ಕದಿಂದ ವಿನಾಯಿತಿ ನೀಡಲು ತೀರ್ಮಾನಿಸಲಾಯಿತು.

➲ ಐಟಂ ನಂ. 02:

ವಿಷಯ: ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳ ಬೋಧಕ ಸಿಬ್ಬಂದಿಗಳಿಗೆ ಯುಜಿಸಿಯ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ನೀಡುವ ಕುರಿತು.

ಉಲ್ಲೇಖ: 1. ಈ ಕಛೇರಿ ಅಧಿಸೂಚನೆ ಸಂಖ್ಯೆ: ವಿಶ್ರೀಕೃವಿಬ/ಡಿಪಿಎಆರ್/ಬೋಧಕ/ಸಿ.ಎ.ಎಸ್–ಪದೋನ್ನತಿ/2021–22/337, 339, 440, 441, 442, 588 ದಿನಾಂಕ : 28/06/2021 ಮತ್ತು 14/07/2021

2. ಈ ಕಛೇರಿ ಸಭೆ ಸೂಚಿ ಸಂಖ್ಯೆ: ವಿಶ್ರೀಕೃವಿಬ/ಡಿಪಿಎಆರ್/ಬೋಧಕ/ಸಿ.ಎ.ಎಸ್–ಪದೋನ್ನತಿ/2021–22/602, 603, 641, 642, 643, 680 ದಿನಾಂಕ : 15/07/2021, 20/07/2021 ಮತ್ತು 23/07/2021

*****

ವಿಶ್ವವಿದ್ಯಾಲಯದ ವಾಣಿಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಕಾರ್ಯ, ಇಂಗ್ಲೀಷ್, ಖನಿಜ ಸಂಸ್ಕರಣ ಮತ್ತು ರಾಜ್ಯಶಾಸ್ತ್ರ ಅಧ್ಯಯನ ವಿಭಾಗಗಳ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ.ಯ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ನೀಡುವ ಸಂಬಂಧ ಉಲ್ಲೇಖ–01 ರನ್ವಯ ವಿಭಾಗವಾರು ಸ್ಕ್ರೀನಿಂಗ್–ಕಮ್–ಮೌಲ್ಯಮಾಪನ ಸಮಿತಿಗಳನ್ನು ರಚಿಸಿದೆ. ತದನಂತರ ಸದರಿ ಸಮಿತಿಗಳು ಉಲ್ಲೇಖ–02ರಂತೆ ಕಾರ್ಯ ಪ್ರವೃತ್ತಗೊಂಡು ದಿನಾಂಕ 20/07/2021, 27/07/2021 ಮತ್ತು 28/07/2021 ರಂದು ವಿಭಾಗವಾರು ಸ್ಕ್ರೀನಿಂಗ್–ಕಮ್–ಮೌಲ್ಯಮಾಪನ ನಡೆಸಲು ಸಭೆಗಳನ್ನು ಆಯೋಜಿಸಲಾಗಿದೆ.

ಸದರಿ ಸಮಿತಿಗಳು ಯು.ಜಿ.ಸಿ ಹಾಗೂ ಸರ್ಕಾರದ ನಿಯಮಗಳಂತೆ ಬೋಧಕ ಸಿಬ್ಬಂದಿಗಳಿಗೆ ಯುಜಿಸಿಯ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ನೀಡುವ ಸಂಬಂಧ ಸ್ಕ್ರೀನಿಂಗ್–ಕಮ್–ಮೌಲ್ಯಮಾಪನ ನಡೆಸಿ ವಿಭಾಗವಾರು ಪಟ್ಟಿಗಳನ್ನು ಸಿದ್ಧಪಡಿಸಿ ಸಲ್ಲಿಸಿದ್ದು, ಸದರಿ ಪಟ್ಟಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## ತೀರ್ಮಾನ

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ.ಯ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿಗಾಗಿ ರಚಿಸಿದ ವಿಭಾಗವಾರು ಸ್ಕ್ರೀನಿಂಗ್–ಕಮ್–ಮೌಲ್ಯಮಾಪನ ಸಮಿತಿಗಳು ಸಲ್ಲಿಸಿದ ನಡಾವಳಿಗಳನ್ನು ಸಭೆಯು ಈ ಕೆಳಕಂಡಂತೆ ಅನುಮೋದಿಸಿತು.

| ಕ್ರಸಂ | ಅಧ್ಯಾಪಕರ ಹೆಸರು | ವೃತ್ತಿ ಪದೋನ್ನತಿ ಹಂತ | ಸಮಿತಿಯು ಶಿಫಾರಸು ಮಾಡಿದ ಬಡ್ತಿ ದಿನಾಂಕ | ತೀರ್ಮಾನ |
|---|---|---|---|---|
| | | ಅರ್ಥಶಾಸ್ತ್ರ | | |
| 1 | ಡಾ. ನಾಯಕರ ಹೊನ್ನೂರ್‌ಸ್ವಾಮಿ | AGP 6,000 (Level 10) - AGP 7,000 (Level 11) | - | Recommendations of the Screening cum evaluation committee is approved. (ವಿಭಾಗವಾರು ಸ್ಕ್ರೀನಿಂಗ್–ಕಮ್–ಮೌಲ್ಯಮಾಪನ ಸಮಿತಿಗಳು ಸಲ್ಲಿಸಿದ ಶಿಫಾರಸ್ಸುಗಳನ್ನು ಸಭೆಯು ಅನುಮೋದಿಸಿದೆ.) |
| 2 | ಡಾ. ವಿ.ಎ. ಚೌಡಪ್ಪ | AGP 6,000 (Level 10) - AGP 7,000 (Level 11) | 07.12.2018 | |
| | | ರಾಜ್ಯಶಾಸ್ತ್ರ | | |
| 1 | ಶ್ರೀ. ವಿಜಯಕುಮಾರ ಬಿ. | AGP 6,000 (Level 10) - AGP 7,000 (Level 11) | 30.11.2018 | |
| | | ಖನಿಜ ಸಂಸ್ಕರಣ | | |
| 1 | ಡಾ. ಪಿ. ಶರತ್‌ಕುಮಾರ | AGP 6,000 (Level 10) - AGP 7,000 (Level 11) | 18.10.2017 | |
| | | ಸಮಾಜಕಾರ್ಯ | | |
| 1 | ಶ್ರೀಮತಿ. ಸುಮಾ ಕೆ.ಜಿ. | AGP 6,000 (Level 10) - AGP 7,000 (Level 11) | 04.11.2020 | |
| | | ಇಂಗ್ಲೀಷ್ | | |
| 1 | ಡಾ. ಸಂತೋಷ ಜಿ. ಕೆ. | AGP 6,000 (Level 10) - AGP 7,000 (Level 11) | 20.10.2018 | |
| | | ವಾಣಿಜ್ಯಶಾಸ್ತ್ರ | | |
| 1 | ಡಾ. ರಾಘವೇಂದ್ರ ಎಸ್. ಆರ್. | AGP 6,000 (Level 10) - AGP 7,000 (Level 11) | 04.01.2019 | |
| 2 | ಡಾ. ವೀಣಾ ಎಂ. | AGP 6,000 (Level 10) - AGP 7,000 (Level 11) | 03.01.2019 | |
| 3 | ಡಾ. ಸಿದ್ದಪ್ಪ | AGP 6,000 (Level 10) - AGP 7,000 (Level 11) | 03.01.2019 | |

| | | | |
|---|---|---|---|
| 4 | ಡಾ. ಮೇಘರಾಜ ಬಿ. | AGP 6,000 (Level 10) - AGP 7,000 (Level 11) | ಮುಂದಿನ ಸಿಂಡಿಕೇಟ್ ಸಭೆಗೆ ಮುಂದೂಡಲಾಗಿದೆ. |
| 5 | ಡಾ. ಪ್ರಕಾಶ ಯಳವಟ್ಟಿ | AGP 6,000 (Level 10) - AGP 7,000 (Level 11) | |
| 6 | ಡಾ. ಮುಬಾರಕ್ | AGP 6,000 (Level 10) - AGP 7,000 (Level 11) | |

ಮುಂದುವರೆದು, ಸದರಿ ಪ್ರಯೋಜನಗಳನ್ನು ಸಿಂಡಿಕೇಟ್ ದಿನಾಂಕದಿಂದ ಅನ್ವಯಿಸಿ ಪಡೆಯಬಹುದಾಗಿದೆ.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯ

1. ವಿಶ್ವವಿದ್ಯಾಲಯವು ಸುವರ್ಣಾವಕಾಶ ಪರೀಕ್ಷೆ ನಡೆಸುವ ಸಿದ್ಧತೆಯಲ್ಲಿದ್ದು, ಈ ಪರೀಕ್ಷೆಗಳಿಗೆ ವಿಧಿಸಬೇಕಾದ ಪರೀಕ್ಷಾ ಶುಲ್ಕ ಹಾಗೂ ಪರೀಕ್ಷಾ ಆಯೋಜನೆಯ ಕೇಂದ್ರಗಳ ಕುರಿತು ಚರ್ಚಿಸಲಾಯಿತು. ಸದರಿ ಪರೀಕ್ಷಾ ಶುಲ್ಕವು ಸ್ನಾತಕ/ಸ್ನಾತಕೋತ್ತರ ಪದವಿಗಳ ಪ್ರತಿ ಸೆಮಿಸ್ಟರ್‌ಗೆ ರೂ. 5,000.00 (ಅಕ್ಷರಗಳಲ್ಲಿ ರೂಪಾಯಿ ಐದು ಸಾವಿರ ಮಾತ್ರ)ಗಳು ಪರೀಕ್ಷಾ ಶುಲ್ಕವಾಗಿ ವಿಧಿಸಿ, ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಅನುಸಾರವಾಗಿ ಕೊಪ್ಪಳದಲ್ಲಿ ಪರೀಕ್ಷೆಗಳನ್ನು ನಡೆಸಲು ನಿರ್ಧಾರ ಕೈಗೊಳ್ಳಲಾಯಿತು.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105
ಕುಲಸಚಿವರು

ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2021–22/**1054** ದಿನಾಂಕ: 28.09.2021

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ 01.09.2021 ರಂದು ಸಂಜೆ 05.00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 20.09.2021

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ 01.09.2021 ರಂದು ಸಂಜೆ 05.00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ: ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು(ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 01.09.2021 ರಂದು ಸಂಜೆ 05.00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿ

**ಐಟಂ ನಂ. 01:**

ವಿಷಯ: ವಿಶ್ವವಿದ್ಯಾಲಯದಲ್ಲಿ ಯು.ಜಿ ಕೋರ್ಸ್‌ಗಳನ್ನು ಪ್ರಾರಂಭಿಸುವ ಕುರಿತು.

ಉಲ್ಲೇಖ: 1. ಸದರಿ ವಿಷಯದ ಕುರಿತ ಡೀನರ ಪ್ರಸ್ತಾವನೆ ದಿನಾಂಕ: 28.08.2021

2. ಸರ್ಕಾರದ ಪತ್ರ ಸಂಖ್ಯೆ ಇಡಿ 260 ಯುಎನ್ಇ 2019 (ಭಾಗ–1) ದಿನಾಂಕ. 07.08.2021.

****

ಸಮಾಜ ವಿಜ್ಞಾನ ನಿಕಾಯ, ವ್ಯವಹಾರ ನಿಕಾಯ ಮತ್ತು ಶುದ್ಧ ವಿಜ್ಞಾನ ನಿಕಾಯ ಡೀನರುಗಳು ವಿಶ್ವವಿದ್ಯಾಲಯದಲ್ಲಿ ಯು.ಜಿ ಕೋರ್ಸ್‌ಗಳನ್ನು (ಬಿ.ಎ., ಬಿ.ಕಾಮ್., ಮತ್ತು ಬಿ.ಎಸ್‌ಸಿ.) ಪ್ರಾರಂಭಿಸುವ ಕುರಿತಾಗಿ ವಿಶ್ವವಿದ್ಯಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 28.08.2021 ರಂದು ನಡೆದ ಡೀನರ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಯಿತು.

ರಾಷ್ಟ್ರೀಯ ಶಿಕ್ಷಣ ನೀತಿ (NEP 2020)ಯನ್ನು ದೇಶದಾದ್ಯಂತ ಜಾರಿ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಘನ ಸರ್ಕಾರವು ವಿಶ್ವವಿದ್ಯಾಲಯಗಳಲ್ಲಿ ಈಗಾಗಲೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಲು ಉನ್ನತ ಶಿಕ್ಷಣ ಇಲಾಖೆಯು ಆದೇಶ ಹೊರಡಿಸಿದ್ದು, ಈ ಭಾಗದ ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ಶಿಕ್ಷಣವನ್ನು ಒದಗಿಸುವ ನಿಟ್ಟಿನಲ್ಲಿ ಡೀನರ ಸಭೆಯಲ್ಲಿ ಸದರಿ ಪ್ರಸ್ತಾವನೆಯನ್ನು ಅನುಮೋದಿಸಿದ್ದು, ಪ್ರಸಕ್ತ ಶೈಕ್ಷಣಿಕ ವರ್ಷದಿಂದ ವಿಶ್ವವಿದ್ಯಾಲಯದಲ್ಲಿ ಯು.ಜಿ ಕೋರ್ಸ್‌ಗಳನ್ನು (ಬಿ.ಎ., ಬಿ.ಕಾಂ., ಮತ್ತು ಬಿ.ಎಸ್‌ಸಿ.) ನಿರ್ದೇಶಕರು, ಸ್ನಾತಕ ಕಾರ್ಯಕ್ರಮ (Director, UG Programms) ಅಡಿಯಲ್ಲಿ ಪ್ರಾರಂಭಿಸಲು ಅನುಮತಿಸಲಾಯಿತು. ಈ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

### ತೀರ್ಮಾನ

ವಿಶ್ವವಿದ್ಯಾಲಯದಲ್ಲಿ ಯು.ಜಿ ಕೋರ್ಸ್‌ಗಳನ್ನು (ಬಿ.ಎ., ಬಿ.ಕಾಂ., ಮತ್ತು ಬಿ.ಎಸ್‌ಸಿ.) ಪ್ರಾರಂಭಿಸುವ ಡೀನರ ಪ್ರಸ್ತಾವನೆಯ ಕುರಿತಾಗಿ ಸುಧೀರ್ಘವಾಗಿ ಚರ್ಚಿಸಿದ ಸಭೆಯು, ಯು.ಜಿ ಕೋರ್ಸ್‌ಗಳನ್ನು ನಿರ್ದೇಶಕರು, ಸ್ನಾತಕ ಕಾರ್ಯಕ್ರಮ (Director, UG Programms) ಅಡಿಯಲ್ಲಿ ಈ ಕೆಳಗಿನಂತೆ ಆರಂಭಿಸಲು ಅನುಮೋದಿಸಿದೆ.

B.Sc- Main Campus, VSKUB.
B.A- PG Center Yalaburga,VSKUB.
B.Com- Main Campus/ PG Center Yalaburga,VSKUB.

ಮುಂದುವರೆದು ಈ ಸಂಬಂಧವಾಗಿ ವೆಬ್‌ಸೈಟ್, ಪ್ರಚಲಿತ ಮಾಧ್ಯಮ, ಎಲೆಕ್ಟ್ರಾನಿಕ್ ಮಾಧ್ಯಮ, ಮತ್ತು ಸೂಚನಾ ಫಲಕದಲ್ಲಿ ಪ್ರಕಟಿಸಿ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು, ವಿದ್ಯಾರ್ಥಿಗಳು ಹಾಗೂ ಪೋಷಕರ ಗಮನಕ್ಕೆ ತರಲು ಸಭೆಯು ಸೂಚಿಸಿದೆ.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105

ಕುಲಸಚಿವರು


ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2021–22/ 1187 ದಿನಾಂಕ: 21.10.2021

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ 22.09.2021 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 28.09.2021

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ 22.09.2021 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ: ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು(ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 22.09.2021 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ

**ಐಟಂ ನಂ. 01:**

ದಿನಾಂಕ. 08.07.2021 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮದ ವರದಿಯನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

**ತೀರ್ಮಾನ**

ದಿನಾಂಕ. 08.07.2021 ರಂದು ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮಗಳ ವರದಿಯನ್ನು ಸಭೆಯು ದೃಢೀಕರಿಸಿ ಅನುಮೋದಿಸಿತು.

**ಐಟಂ ನಂ. 02:**

ವಿಷಯ: ಶ್ರೀ. ಸಂತೋಷ್ ಕುಮಾರ್ ಸಿ., ಸಹಾಯಕ ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಇವರಿಗೆ ನೀಡಿದ ನಿರಾಕ್ಷೇಪಣಾ ಪ್ರಮಾಣ ಪತ್ರದ ಕುರಿತು.

ಉಲ್ಲೇಖ: 1) ಶ್ರೀ. ಸಂತೋಷ್ ಕುಮಾರ್ ಸಿ, ಇವರ ಮನವಿ ಪತ್ರ ದಿನಾಂಕ: 09.08.2021
2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 18.08.2021.

****

ಶ್ರೀ. ಸಂತೋಷ್ ಕುಮಾರ್ ಸಿ., ಸಹಾಯಕ ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಇವರಿಗೆ ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿಯ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದಲ್ಲಿ ಅರೆಕಾಲಿಕವಾಗಿ ಪಿಹೆಚ್.ಡಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ವಿಶ್ವವಿದ್ಯಾಲಯದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಲಾಗಿದೆ. ಕಾರಣ ಸದರಿಯವರಿಗೆ ನೀಡಿದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ**

ಶ್ರೀ. ಸಂತೋಷ್ ಕುಮಾರ್ ಸಿ., ಸಹಾಯಕ ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಇವರಿಗೆ ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿಯ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದಲ್ಲಿ ಅರೆಕಾಲಿಕವಾಗಿ ಪಿಹೆಚ್.ಡಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿರುವುದನ್ನು ಸಭೆಯು ಅನುಸಮರ್ಥಿಸಿದೆ.

➲ ಐಟಂ ನಂ. 03:

ವಿಷಯ: ಡೀನರ ನೇಮಕಾತಿಯನ್ನು ಸಿಂಡಿಕೇಟ್ ಸಭೆಯಲ್ಲಿ ಅನುಸಮರ್ಥಿಸುವ ಕುರಿತು.

ಉಲ್ಲೇಖ: 1. ಈ ಕಛೇರಿ ಅಧಿಸೂಚನೆ ಸಂಖ್ಯೆ: ವಿಶ್ರೀಕೃವಿಬ/ಡಿಪಿಎಆರ್/ಡೀನರು/ಸವಿ–ನಿಕಾಯ/ 2021–22/587 ದಿನಾಂಕ: 14.07.2021

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 08.07.2021

***

ಪ್ರೊ. ಬಸವರಾಜ ಎಸ್ ಬೆಣ್ಣಿ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ದಿನಾಂಕ: 04.07.2021 ರಿಂದ ಅನ್ವಯಿಸಿ 02 ವರ್ಷಗಳ ಅವಧಿಗೆ ಸಮಾಜ ವಿಜ್ಞಾನ ನಿಕಾಯದ ಡೀನರನ್ನಾಗಿ ನೇಮಕ ಮಾಡಿ ಉಲ್ಲೇಖಿತ ಅಧಿಸೂಚನೆ ಹೊರಡಿಸಿದ್ದು, ಸದರಿ ನೇಮಕಾತಿಯನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ**

ಪ್ರೊ. ಬಸವರಾಜ ಎಸ್ ಬೆಣ್ಣಿ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ದಿನಾಂಕ: 04.07.2021 ರಿಂದ ಅನ್ವಯಿಸಿ 02 ವರ್ಷಗಳ ಅವಧಿಗೆ ಸಮಾಜ ವಿಜ್ಞಾನ ನಿಕಾಯದ ಡೀನರನ್ನಾಗಿ ನೇಮಕ ಮಾಡಿ ಹೊರಡಿಸಿದ ಅಧಿಸೂಚನೆಯನ್ನು ಸಭೆಯು ಅನುಸಮರ್ಥಿಸಿದೆ.

➲ ಐಟಂ ನಂ. 04:

ವಿಷಯ: ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯ ಅಧ್ಯಯನ ಮಂಡಳಿ ರಚಿಸಿರುವ ಕುರಿತು.

***

ವಿಶ್ವವಿದ್ಯಾಲಯದ ಈ ಕೆಳಗಿನ ಅಧ್ಯಯನ ಮಂಡಳಿ ಅವಧಿಯು ಮುಕ್ತಾಯವಾಗಿದ್ದರಿಂದ ಪುನಃ ರಚಿಸಲಾಗಿದೆ.

1. ಮಹಿಳಾ ಅಧ್ಯಯನ ವಿಭಾಗ
2. ಕನ್ನಡ ಅಧ್ಯಯನ ವಿಭಾಗ
3. ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ
4. ರಾಜ್ಯಶಾಸ್ತ್ರ ಅಧ್ಯಯನ ವಿಭಾಗ
5. ಪ್ರದರ್ಶನ ಕಲಾ (ನಾಟಕ) ಅಧ್ಯಯನ ವಿಭಾಗ

ಮೇಲ್ಕಂಡ ವಿವಿಧ ಅಧ್ಯಯನ ವಿಭಾಗಗಳ ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಯನ ಮಂಡಳಿಯನ್ನು ಪುನಃ ರಚಿಸಿ ಅಧಿಸೂಚನೆಯನ್ನು ಹೊರಡಿಸಿದ್ದು, ಸದರಿ ಅಧಿಸೂಚನೆಗಳನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಮಹಿಳಾ ಅಧ್ಯಯನ ವಿಭಾಗ, ಕನ್ನಡ ಅಧ್ಯಯನ ವಿಭಾಗ, ವಾಣಿಜ್ಯಶಾಸ್ತ್ರ ಅಧ್ಯಯನ ವಿಬಾಗ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಮತ್ತು ಪ್ರದರ್ಶನ ಕಲಾ (ನಾಟಕ) ಅಧ್ಯಯನ ವಿಭಾಗಗಳ ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಯನ ಮಂಡಳಿಯನ್ನು ಪುನಃ ರಚಿಸಿ ಹೊರಡಿಸಿದ ಅಧಿಸೂಚನೆಯನ್ನು ಸಭೆಯು ಅನುಸಮರ್ಥಿಸಿದೆ.

➲ ಐಟಂ ನಂ. 05:

ವಿಷಯ: ಶ್ರೀಕೃಷ್ಣದೇವರಾಯ ಸಂಶೋಧನೆ ಮತ್ತು ಅಧ್ಯಯನ ಪೀಠ ಸ್ಥಾಪನೆ ಕುರಿತು.
ಉಲ್ಲೇಖ: ದಿನಾಂಕ 01.09.2021 ರಂದು ಜರುಗಿದ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ಸಂಖ್ಯೆ 05

******

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯಲ್ಲಿ ಶ್ರೀಕೃಷ್ಣದೇವರಾಯ ಸಂಶೋಧನೆ ಮತ್ತು ಅಧ್ಯಯನ ಪೀಠ ಸ್ಥಾಪನೆ ಪ್ರಸ್ತಾವನೆಯ ಕುರಿತು ದಿನಾಂಕ 01.09.2021 ರಂದು ಜರುಗಿದ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ಸಂಖ್ಯೆ 05 ರ ನಿರ್ಣಯದ ಸಮರ್ಥನೆಗಾಗಿ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**<u>ತೀರ್ಮಾನ</u>**

ಸದರಿ ವಿಷಯದ ಕುರಿತಾಗಿ ವಿಶ್ವವಿದ್ಯಾಲಯದಲ್ಲಿ ಶ್ರೀಕೃಷ್ಣದೇವರಾಯ ಸಂಶೋಧನೆ ಮತ್ತು ಅಧ್ಯಯನ ಪೀಠ ಸ್ಥಾಪನೆ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ, ದಿನಾಂಕ 01.09.2021 ರಂದು ಜರುಗಿದ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ಸಂಖ್ಯೆ 05 ರ ಸದರಿ ಅಧ್ಯಯನ ಕೇಂದ್ರ ಸ್ಥಾಪನೆಗಾಗಿ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಆರಂಭಿಕ ಮೊತ್ತ ರೂ. 50.00 ಲಕ್ಷಗಳನ್ನು ಸ್ಥಿರ ಠೇವಣಿಯನ್ನಾಗಿಸಿ (Fixed Deposit) ಸದರಿ ಠೇವಣಿಯಿಂದ ಲಭಿಸಿದ ಬಡ್ಡಿ ಮೊತ್ತವನ್ನು ಮಾತ್ರ ಬಳಕೆ ಮಾಡುವ ತೀರ್ಮಾನ ಹಾಗೂ ಇನ್ನೂ ಹೆಚ್ಚಿನ ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ನಿರ್ಧಾರವನ್ನು ಸಿಂಡಿಕೇಟ್ ಸಹ ಸಮರ್ಥಿಸಿ ಅನುಮೋದಿಸಿದೆ.

➲ ಐಟಂ ನಂ. 06:

ವಿಷಯ: ವಿಶ್ವವಿದ್ಯಾಲಯದ 2018-19ನೇ ಸಾಲಿನ AQAR ವರದಿ ಅನುಮೋದನೆ ಕುರಿತು.
ಉಲ್ಲೇಖ: ನಿರ್ದೇಶಕರು, ಐಕ್ಯೂಎಸಿ ಘಟಕ, ವಿಶ್ರೀಕೃ ವಿಶ್ವವಿದ್ಯಾಲಯ ಇವರ ಪತ್ರ ಸಂಖ್ಯೆ: ವಿಶ್ರೀಕೃವಿಬ/ಐಕ್ಯೂಎಸಿ-ಘ/2021-22/23 ದಿನಾಂಕ: 09.09.2021.

*****

ನಿರ್ದೇಶಕರು, ಐಕ್ಯೂಎಸಿ ಘಟಕ ಇವರು ವಿಶ್ವವಿದ್ಯಾಲಯದ 2018-19ನೇ ಸಾಲಿನ AQAR ವರದಿಯನ್ನು ಸಿದ್ಧಪಡಿಸಿ ಉಲ್ಲೇಖಿತ ಪತ್ರದೊಂದಿಗೆ ಸಲ್ಲಿಸಿದ್ದು, ಸದರಿ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**<u>ತೀರ್ಮಾನ</u>**

ವಿಶ್ವವಿದ್ಯಾಲಯದ 2018-19ನೇ ಸಾಲಿನ AQAR ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ಸಭೆಯು ಸದರಿ ವರದಿಯನ್ನು ಅನುಮೋದಿಸಿದೆ.

➲ ಐಟಂ ನಂ. 07:

ವಿಷಯ: ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗಕ್ಕೆ KSTA ಯ ಸಾಂಸ್ಥಿಕ ಸದಸ್ಯತ್ವ ಮಾಡಿಕೊಳ್ಳಲು ಕಾರ್ಪಸ್ ನಿಧಿಗೆ 1.00 ಲಕ್ಷ ಮೊತ್ತವನ್ನು ಪಾವತಿಸಿರುವ ಕುರಿತು.
ಉಲ್ಲೇಖ: 1. ಈ ಕಛೇರಿ ಆದೇಶ ಸಂಖ್ಯೆ: ವಿಶ್ರೀಕೃವಿಬ/ಆಡಳಿತ-ಸಾಮಾನ್ಯ/2021-22/815 ದಿನಾಂಕ 12.08.2021
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 12.08.2021

*****

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ (KSTA) ಜೊತೆ ನಮ್ಮ ವಿಶ್ವವಿದ್ಯಾಲಯವು ತಿಳುವಳಿಕೆ ಸ್ಮರಣಿಕೆಯ (MOU) ನ್ನು ಮಾಡಿಕೊಂಡಿರುತ್ತದೆ. ಇದಲ್ಲದೆ ಪರಸ್ಪರ ಕಾರ್ಯಕ್ರಮಗಳನ್ನು ಆಯೋಜಿಸಲು ಮತ್ತು ವಿಜ್ಞಾನವನ್ನು ಉತ್ತೇಜಿಸಲು KSTA ಕಾರ್ಪಸ್ ನಿಧಿಗೆ ಉಲ್ಲೇಖ-1 ರನ್ವಯ ವಿಶ್ವವಿದ್ಯಾಲಯದ ಜೀವಮಾನ ಸದಸ್ಯತ್ವವನ್ನು ತೆಗೆದುಕೊಳ್ಳಲು 1.00 ಲಕ್ಷ (ರೂಪಾಯಿ ಒಂದು ಲಕ್ಷ ಮಾತ್ರ) ಮೊತ್ತವನ್ನು (NEFT UTR No:230210123090923 Dated:18.08.2021) ಪಾವತಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಲಾಗಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗಕ್ಕೆ KSTA ಯ ಸಾಂಸ್ಥಿಕ ಸದಸ್ಯತ್ವ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ಕಾರ್ಪಸ್ ನಿಧಿಗೆ 1.00 ಲಕ್ಷ ಮೊತ್ತವನ್ನು ಪಾವತಿಸಲು ಹೊರಡಿಸಿರು ಆದೇಶವನ್ನು ಸಭೆಯು ಅನುಸಮರ್ಥಿಸಿದೆ.

➲ **ಐಟಂ ನಂ. 08:**

ವಿಷಯ: M/S. Haigreeva Infratech Projects, Bangalore ಇವರೊಂದಿಗೆ ಮಾತುಕತೆ ನಡೆಸಿ ಸಮಿತಿ ಸಲ್ಲಿಸಿದ ವರದಿ ಕುರಿತು.

ಉಲ್ಲೇಖ: 1. ಸುತ್ತೋಲೆ ಸಂಖ್ಯೆ : ವಿಶ್ರೀಕೃವಿಬ/ಆಡಳಿತ-ಸಾಮಾನ್ಯ/ಕಾಕೋ/2021- 22/779 ದಿನಾಂಕ 06.08.2021

2. ಸುತ್ತೋಲೆ ಸಂಖ್ಯೆ : ವಿಶ್ರೀಕೃವಿಬ/ಆಡಳಿತ-ಸಾಮಾನ್ಯ/ಕಾಕೋ/2021- 22/799 ದಿನಾಂಕ 13.08.2021

3. ವರದಿ ದಿನಾಂಕ: 24.08.2021.

***

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ v/s ಮೆ. ಹೈಗ್ರೀವಾ ಇನ್‌ಫ್ರಾಟೆಕ್ ಪ್ರೊಜೆಕ್ಟ್ ಲಿ., ವಿಶಾಖಪಟ್ನಮ್‌ಗೆ ಸಂಬಂಧಿಸಿದಂತೆ ಬಳ್ಳಾರಿ Commercial Court ನಲ್ಲಿ ಕೇಸ್ ನಂ. AP 01/2020 ಕುರಿತು ತೀರ್ಪು ನೀಡಿದ್ದು, ಮೆ. ಹೈಗ್ರೀವಾ ಇನ್‌ಫ್ರಾಟೆಕ್ ಪ್ರೊಜೆಕ್ಟ್ ಲಿ., ವಿಶಾಖಪಟ್ನಮ್ ಇವರಿಗೆ ವಾರ್ಷಿಕ 12% ಬಡ್ಡಿ ದರದಂತೆ ಪಾವತಿಸಲು ಆದೇಶಿಸಿರುತ್ತಾರೆ. ಈ ವಿಷಯವಾಗಿ ಉಲ್ಲೇಖ-01 ರಂತೆ ಮೆ. ಹೈಗ್ರೀವಾ ಇನ್‌ಫ್ರಾಟೆಕ್ ಪ್ರೊಜೆಕ್ಟ್ ಲಿ., ವಿಶಾಖಪಟ್ನಮ್ ಇವರೊಂದಿಗೆ ಮಾತುಕತೆ ನಡೆಸಲು ವಿಶ್ವವಿದ್ಯಾಲಯದಲ್ಲಿ ಕುಲಸಚಿವರ ಅಧ್ಯಕ್ಷತೆಯಲ್ಲಿ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಿದ್ದು, ಉಲ್ಲೇಖ-02 ರಂತೆ ಸಮಿತಿಯು ಸಭೆ ನಡೆಸಿ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಮೆ. ಹೈಗ್ರೀವಾ ಇನ್‌ಫ್ರಾಟೆಕ್ ಪ್ರೊಜೆಕ್ಟ್ ಲಿ., ವಿಶಾಖಪಟ್ನಮ್ ಇವರೊಂದಿಗೆ ಮಾತುಕತೆ ನಡೆಸಲು ದಿನಾಂಕ 23.08.2021 ರಂದು ವಿಶ್ವವಿದ್ಯಾಲಯದಲ್ಲಿ ಕುಲಸಚಿವರ ಅಧ್ಯಕ್ಷತೆಯಲ್ಲಿ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಮಿತಿಯ ಎಲ್ಲಾ ಸದಸ್ಯರು Principal Amount Rs. 1,03,40,821.00 ಗೆ ದಿನಾಂಕ: 23.08.2021 ರವರೆಗೆ ಅನ್ವಯಿಸಿ 7% (Simple Interest) ಬಡ್ಡಿ ದರದಂತೆ Rs. 46,02,940.00 ಒಟ್ಟು ಮೊತ್ತ ರೂ. 1,49,43,761.00 ಆಗಲಿದ್ದು, round off amount Rs. 1,49,43,000.00 ಗಳನ್ನು ಮೆ. ಹೈಗ್ರೀವಾ ಇನ್‌ಫ್ರಾಟೆಕ್ ಪ್ರೊಜೆಕ್ಟ್ ಲಿ., ವಿಶಾಖಪಟ್ನಮ್ ಇವರಿಗೆ ಪಾವತಿಸಲು ಸರ್ವ ಸಮ್ಮತಿಯೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯ ಕುರಿತು ಸಿಂಡಿಕೇಟ್ ಸಭೆಯು ಕೂಲಂಕುಷವಾಗಿ ಚರ್ಚಿಸಿ, ಸಮಿತಿಯ ನಿರ್ಧಾರವನ್ನು ಅನುಮೋದಿಸಿದೆ. ಮುಂದುವರೆದು, ಸಮಿತಿಯ ನಿರ್ಧಾರ ಮತ್ತು ಸದಸ್ಯರನ್ನು ಸಿಂಡಿಕೇಟ್ ಸಭೆಯು ಶ್ಲಾಘಿಸಿದೆ.

➲ ಐಟಂ ನಂ. 09:

**ವಿಷಯ:** ಉತ್ತರ ಪತ್ರಿಕೆಗಳನ್ನು ಖರೀದಿಸಲು ಇ–ಟೆಂಡರ್ ಪ್ರಕ್ರಿಯೆ ಆಹ್ವಾನಿಸುವ ಕುರಿತು.

***

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ 2021–22ನೇ ಸಾಲಿನ ಸ್ನಾತಕ, ಸ್ನಾತಕೋತ್ತರ, ಬಿ.ಇಡಿ ಹಾಗೂ ಬಿ.ಪಿ.ಇಡಿ ಪದವಿಗಳ ಪ್ರತಿಯೊಂದು ಪರೀಕ್ಷೆಗಳಿಗೆ ಅಂದಾಜು 4,00,000 ಉತ್ತರ ಪತ್ರಿಕೆಗಳು ಮತ್ತು ಉತ್ತರ ಪತ್ರಿಕೆಗಳನ್ನು ಸಂಗ್ರಹಿಸಿಡಲು ಸೂಕ್ತವಾದ ಲಕೋಟೆಗಳ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಅಗತ್ಯ ಸಂಖ್ಯೆಯಲ್ಲಿ ಉತ್ತರ ಪತ್ರಿಕೆಗಳನ್ನು ಹಾಗೂ ಲಕೋಟೆಗಳನ್ನು ಇ–ಟೆಂಡರ್ ಮೂಲಕ ಖರೀದಿಸಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

2021–22ನೇ ಸಾಲಿನ ಸ್ನಾತಕ, ಸ್ನಾತಕೋತ್ತರ, ಬಿ.ಇಡಿ ಹಾಗೂ ಬಿ.ಪಿ.ಇಡಿ ಪದವಿಗಳ ಪ್ರತಿಯೊಂದು ಪರೀಕ್ಷೆಗಳಿಗೆ ಅಂದಾಜು 4,00,000 ಉತ್ತರ ಪತ್ರಿಕೆಗಳು ಮತ್ತು ಉತ್ತರ ಪತ್ರಿಕೆಗಳನ್ನು ಸಂಗ್ರಹಿಸಿಡಲು ಸೂಕ್ತವಾದ ಲಕೋಟೆಗಳನ್ನು ಸರ್ಕಾರದ ನಿಯಮಾನುಸಾರ ಇ–ಟೆಂಡರ್ ಮೂಲಕ ಖರೀದಿಸಲು ಸಭೆಯು ಅನುಮೋದಿಸಿದೆ.

➲ ಐಟಂ ನಂ. 10:

**ವಿಷಯ:** ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳು ಮತ್ತು ಇತರೆ ರದ್ದಿಯನ್ನು ಇ–ಟೆಂಡರ್ ಪ್ರಕ್ರಿಯೆ ಮೂಲಕ ವಿಲೇವಾರಿಗೊಳಿಸುವ ಕುರಿತು.

****

ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದ 2019–20ನೇ ಸಾಲಿನ ಮೌಲ್ಯಮಾಪನಗೊಂಡ ಹಳೆಯ ಉತ್ತರ ಪತ್ರಿಕೆಗಳು ಹಾಗೂ ಇನ್ನಿತರೆ ಅನುಪಯುಕ್ತ ರದ್ದಿಯನ್ನು ಇ–ಟೆಂಡರ್ ಮೂಲಕ ವಿಲೇವಾರಿ ಮಾಡಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಪರೀಕ್ಷಾ ವಿಭಾಗದ 2019–20ನೇ ಸಾಲಿನ ಮೌಲ್ಯಮಾಪನಗೊಂಡ ಹಳೆಯ ಉತ್ತರ ಪತ್ರಿಕೆಗಳು ಹಾಗೂ ಇನ್ನಿತರೆ ಅನುಪಯುಕ್ತ ರದ್ದಿಯನ್ನು ಇ–ಟೆಂಡರ್ ಮೂಲಕ ವಿಲೇವಾರಿ ಮಾಡುವ ಸಂಬಂಧ ಸರ್ಕಾರದ ನಿಯಮಾನುಸಾರ ಇ–ಟೆಂಡರ್ ಮೂಲಕ ಖರೀದಿಸಲು ಸಭೆಯು ಅನುಮೋದಿಸಿದೆ.

➲ ಐಟಂ ನಂ. 11:

ವಿಷಯ: ಒಂಭತ್ತನೇಯ ವಾರ್ಷಿಕ ಘಟಿಕೋತ್ಸವದ ಅಂದಾಜು ವೆಚ್ಚ ಕುರಿತು.

***

ವಿಶ್ವವಿದ್ಯಾಲಯ ಒಂಭತ್ತನೇಯ ವಾರ್ಷಿಕ ಘಟಿಕೋತ್ಸವವನ್ನು ಆಯೋಜಿಸಲು ತಗಲಬಹುದಾದ ವಿವಿಧ ವೆಚ್ಚವನ್ನು ಒಟ್ಟು ರೂ.35,00,000/– ಲಕ್ಷಗಳು ಎಂದು ಅಂದಾಜಿಸಲಾಗಿದೆ. ಈ ವೆಚ್ಚದ ಪರಿಶೀಲನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ತೀರ್ಮಾನ

ವಿಶ್ವವಿದ್ಯಾಲಯದ ಒಂಬತ್ತನೇಯ ವಾರ್ಷಿಕ ಘಟಿಕೋತ್ಸವ ಆಯೋಜಿಸಲು ರೂ. 35,00,000/– ಲಕ್ಷಗಳ ಅಂದಾಜು ವೆಚ್ಚದ ಪಟ್ಟಿಯನ್ನು ಪರಿಶೀಲಿಸಿದ ಸಭೆಯು ಸದರಿ ಪಟ್ಟಿಗೆ ಅನುಮೋದನೆ ನೀಡಿದೆ.

➲ ಐಟಂ ನಂ. 12:

ವಿಷಯ: ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

***

ದಿನಾಂಕ 25.0.2021 ರಂದು ಕಟ್ಟಡ ಸಲಹಾ ಸಮಿತಿ ಸಭೆಯು ಜರುಗಿದ್ದು, ಈ ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ದಿನಾಂಕ 25.08.2021 ರಂದು ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಈ ಕೆಳಕಂಡಂತೆ ವಿಷಯವಾರು ದೃಢೀಕರಿಸಿ ಅನುಮೋದಿಸಿತು.

**ಐಟಂ ಸಂಖ್ಯೆ 01.**

ವಿಷಯ:- ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿ ಸಾಮಾನ್ಯ ವಿದ್ಯಾರ್ಥಿಗಳ ಹುಡುಗರ ವಸತಿನಿಲಯ ಕಟ್ಟಡವನ್ನು ನಿರ್ಮಿಸುವ ಕಾಮಗಾರಿ ಕುರಿತು. ವಸತಿನಿಲಯ ಕಟ್ಟಡವನ್ನು ನಿರ್ಮಿಸುವ ಕಾಮಗಾರಿ ಕುರಿತು. ಅಂದಾಜು ವೆಚ್ಚ: ರೂ. 495.00 ಲಕ್ಷಗಳು (ಲೋಕೋಪಯೋಗಿ ಇಲಾಖೆಯ ಬಳ್ಳಾರಿ ವಲಯದ 2018-19ನೇ ಸಾಲಿನ ಸಿವಿಲ್ ದರಪಟ್ಟಿ, 2019-20 ನೇ ಸಾಲಿನ ವಿದ್ಯುತ್ ದರಪಟ್ಟಿ ಹಾಗೂ ಮಾರುಕಟ್ಟೆ ದರಗಳನ್ವಯ) ಒಟ್ಟು ನಿರ್ಮಾಣ ವಿಸ್ತೀರ್ಣ : ನೆಲಮಹಡಿ:737.00 ಚ.ಮೀ., ಮೊದಲ ಮಹಡಿ: 686.00 ಚ.ಮೀ, ಎರಡನೆ ಮಹಡಿ:686.00 ಚ.ಮೀ ಟೆರೇಸ್ ಫ್ಲೋರ್: 37.50 ಚ.ಮೀ. ಒಟ್ಟು :2146.50 ಚ.ಮೀ. (23,096.34 ಚ.ಅ.

**ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನ**

ವಿಶ್ವವಿದ್ಯಾಲಯದ ಆವರಣದಲ್ಲಿ ಸಾಮಾನ್ಯ ವಿದ್ಯಾರ್ಥಿಗಳ ಹುಡುಗರ ವಸತಿನಿಲಯ ಕಟ್ಟಡವನ್ನು ನಿರ್ಮಿಸುವ ಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತ ರೂ.495.00 ಲಕ್ಷಗಳಿಗೆ ( ರೂಪಾಯಿ ನಾಲ್ಕುನೂರ ತ್ತೊಂಬತ್ತೈದು ಲಕ್ಷಗಳು ಮಾತ್ರ) ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಹಾಗೂ ಲೋಕೋಪಯೋಗಿ ಇಲಾಖೆಯಿಂದ ತಾಂತ್ರಿಕ ಪರಿಶೀಲನೆ ಮಾಡಿಸಿದನಂತರ ಇ-ಪ್ರೋಕ್ಯೂರ್ ಮೆಂಟ್ ಪ್ಲಾಟ್ ಫಾರಂ ಮೂಲಕ ಟೆಂಡರ್ ಕರೆಯಲು ಅನುಮತಿಸಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಸಭೆಯು ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನ ಕುರಿತು ಸುದೀರ್ಘವಾಗಿ ಪರಿಶೀಲಿಸಿ ಸದರಿ ತೀರ್ಮಾನವನ್ನೇ ಯಥಾವತ್ತಾಗಿ ವಿಶ್ವವಿದ್ಯಾಲಯದ ಆವರಣದಲ್ಲಿ ಸಾಮಾನ್ಯ ವಿದ್ಯಾರ್ಥಿಗಳ ವಸತಿನಿಲಯ ಕಟ್ಟಡವನ್ನು ನಿರ್ಮಿಸುವ ಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತ ರೂ.495.00 ಲಕ್ಷಗಳಿಗೆ ( ರೂಪಾಯಿ ನಾಲ್ಕುನೂರ ತ್ತೊಂಬತ್ತೈದು ಲಕ್ಷಗಳು ಮಾತ್ರ) ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಹಾಗೂ ಲೋಕೋಪಯೋಗಿ ಇಲಾಖೆಯಿಂದ ತಾಂತ್ರಿಕ ಪರಿಶೀಲನೆ ಮಾಡಿಸಿದನಂತರ ಇ-ಪ್ರೋಕ್ಯೂರ್ ಮೆಂಟ್ ಪ್ಲಾಟ್ ಫಾರಂ ಮೂಲಕ ಟೆಂಡರ್ ಕರೆಯಲು ಅನುಮೋದಿಸಿದೆ.

**ಐಟಂ ಸಂಖ್ಯೆ 02.**

ವಿಷಯ:-ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿ "Construction of Centre of Excellence Multidisciplinary Advanced Research Facility Building" ನಿರ್ಮಿಸುವ ಕಾಮಗಾರಿ ಕುರಿತು. ಅಂದಾಜು ವೆಚ್ಚ: ರೂ. 325.00 ಲಕ್ಷಗಳು (ಲೋಕೋಪಯೋಗಿ

ಇಲಾಖೆಯ ಬಳ್ಳಾರಿ ವಲಯದ 2018-19 ನೇ ಸಾಲಿನ ಸಿವಿಲ್ ದರಪಟ್ಟಿ, 2019-20ನೇ ಸಾಲಿನ ವಿದ್ಯುತ್ ದರಪಟ್ಟಿ ಹಾಗೂ ಮಾರುಕಟ್ಟೆ ದರಗಳನ್ವಯ) ಒಟ್ಟು ನಿರ್ಮಾಣ ವಿಸ್ತೀರ್ಣ: ನೆಲಮಹಡಿ: 660.00 ಚ.ಮೀ., ಮೊದಲ ಮಹಡಿ: 660.00 ಚ.ಮೀ, ಹೆಡ್ ರೂಂ: 50.00 ಚ.ಮೀ ಒಟ್ಟು: 1370.00 ಚ.ಮೀ. (14746.68 ಚ.ಅ.)

**ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನ**

ತೀರ್ಮಾನ:- ವಿಶ್ವವಿದ್ಯಾಲಯದ ಆವರಣದಲ್ಲಿ ಆವರಣದಲ್ಲಿ " Construction of Centre of Excellence Multidisciplinary Advanced Research Facility Building " ನಿರ್ಮಿಸುವ ಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತ ರೂ.325.00ಲಕ್ಷಗಳಿಗೆ ( ರೂಪಾಯಿ ಮೂರುನೂರ ಇಪ್ಪತ್ತೈದು ಲಕ್ಷಗಳು ಮಾತ್ರ) ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಹಾಗೂ ಲೋಕೋಪಯೋಗಿ ಇಲಾಖೆಯಿಂದ ತಾಂತ್ರಿಕ ಪರಿಶೀಲನೆ ಮಾಡಿಸಿದನಂತರ ಇ-ಪ್ರೋಕ್ಯೂರ್ ಮೆಂಟ್ ಪ್ಲಾಟ್ ಫಾರಂ ಮೂಲಕ ಟೆಂಡರ್ ಕರೆಯಲು ಅನುಮತಿಸಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಸಭೆಯು ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನ ಕುರಿತು ಕೂಲಂಕುಷವಾಗಿ ಚರ್ಚಿಸಿ ಸದರಿ ತೀರ್ಮಾನವನ್ನೇ ಯಥಾವತ್ತಾಗಿ ವಿಶ್ವವಿದ್ಯಾಲಯದ ಆವರಣದಲ್ಲಿ ಆವರಣದಲ್ಲಿ " Construction of Centre of Excellence Multidisciplinary Advanced Research Facility Building " ನಿರ್ಮಿಸುವ ಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತ ರೂ.325.00ಲಕ್ಷಗಳಿಗೆ ( ರೂಪಾಯಿ ಮೂರುನೂರ ಇಪ್ಪತ್ತೈದು ಲಕ್ಷಗಳು ಮಾತ್ರ) ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಹಾಗೂ ಲೋಕೋಪಯೋಗಿ ಇಲಾಖೆಯಿಂದ ತಾಂತ್ರಿಕ ಪರಿಶೀಲನೆ ಮಾಡಿಸಿದ ನಂತರ ಇ-ಪ್ರೋಕ್ಯೂರ್ ಮೆಂಟ್ ಪ್ಲಾಟ್ ಫಾರಂ ಮೂಲಕ ಟೆಂಡರ್ ಕರೆಯಲು ಅನುಮೋದಿಸಿದೆ.

**ಐಟಂ ಸಂಖ್ಯೆ 03.**

ವಿಷಯ:- ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಜ್ಞಾನಸಾಗರ ಆವರಣದಲ್ಲಿ ಬಹುಪಯೋಗಿ ( Multi Utility Centre-Canteen, Bank, Hospital, Xerox and Stationary Store ) ಕಟ್ಟಡದ ವಿನ್ಯಾಸದ ಕೆಲಸಗಳನ್ನು ವಿಶ್ವವಿದ್ಯಾಲಯದ ಎಂಪ್ಯಾನೆಲ್-ಮೆಂಟ್‌ನಲ್ಲಿನ ವಾಸ್ತುಶಿಲ್ಪಿಗಳಿಗೆ ವಹಿಸುವ ಕುರಿತು.

**ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನ**

ವಿಶ್ವವಿದ್ಯಾಲಯದ ಆವರಣದಲ್ಲಿ ಬಹುಪಯೋಗಿ (Multi Utility Centre-Canteen, Bank, Hospital, Xerox and Stationary Store) ಕಟ್ಟಡ ನಿರ್ಮಾಣ ಕಾಮಗಾರಿಯ Initial Plan , Elevations ಮತ್ತು Line Estimate ಗಳನ್ನು ಸಲ್ಲಿಸಲು ಇನ್ನುಳಿದ ಇಬ್ಬರು ವಾಸ್ತುಶಿಲ್ಪಿಗಳಾದ M/S Naveen Consultants ಮತ್ತು M/s. ACS Design Consulting Pvt Ltd., Bangalore ಇವರುಗಳಲ್ಲಿ ಒಬ್ಬರಿಗೆ ವಹಿಸಿಕೊಡಲು ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಲು ಒಪ್ಪಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಕಟ್ಟಡ ಸಲಹಾ ಸಮಿತಿಯ ನಿರ್ಣಯದಂತೆ ಇಬ್ಬರು ವಾಸ್ತುಶಿಲ್ಪಿಗಳಾದ M/S Naveen Consultants ಮತ್ತು M/s. ACS Design Consulting Pvt Ltd., Bangalore ಇವರುಗಳಲ್ಲಿ M/S Naveen Consultants, Bangalore. ಇವರಿಗೆ ವಿಶ್ವವಿದ್ಯಾಲಯದ ಆವರಣದಲ್ಲಿ ಬಹುಪಯೋಗಿ ( Multi Utility Centre-Canteen, Bank, Hospital, Xerox and Stationary Store) ಕಟ್ಟಡ ನಿರ್ಮಾಣ ಕಾಮಗಾರಿಯ Initial Plan, Elevations ಮತ್ತು Line Estimate ಗಳನ್ನು ಸಲ್ಲಿಸುವ ಕೆಲಸವನ್ನು ವಹಿಸಿಕೊಡಲು ಸಭೆಯು ಅನುಮೋದಿಸಿದೆ.

**ಐಟಂ ಸಂಖ್ಯೆ 04.**

4. ವಿಷಯ:- ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಜ್ಞಾನಸಾಗರ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣದ ವಿನ್ಯಾಸದ ಕೆಲಸವನ್ನು ವಿಶ್ವವಿದ್ಯಾಲಯದ ಎಂಪ್ಯಾನೆಲ್ ಮೆಂಟ್‌ನಲ್ಲಿನ ವಾಸ್ತುಶಿಲ್ಪಿಗಳಿಗೆ ವಹಿಸುವ ಕುರಿತು.

**ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನ**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಜ್ಞಾನಸಾಗರ ಮುಖ್ಯ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣದ ಕಾಮಗಾರಿಯ ವಿನ್ಯಾಸದ ಕೆಲಸವನ್ನು ವಿಶ್ವವಿದ್ಯಾಲಯದ ಎಂಪ್ಯಾನೆಲ್‌ಮೆಂಟ್‌ನಲ್ಲಿರುವ ಮೂವರು ವಾಸ್ತುಶಿಲ್ಪಿಗಳಾದ M/S Vishwas Consultants, Shivamogga., M/S Naveen Consultants ಮತ್ತು M/s. ACS Design Consulting Pvt. Ltd., Bangalore ಇವರುಗಳಲ್ಲಿ ಒಬ್ಬರಿಗೆ ವಹಿಸಿಕೊಡಲು ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಲು ಒಪ್ಪಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಕಟ್ಟಡ ಸಲಹಾ ಸಮಿತಿಯ ನಿರ್ಣಯದಂತೆ ಮೂವರು ವಾಸ್ತುಶಿಲ್ಪಿಗಳಾದ M/S Vishwas Consultants, Shivamogga., M/S Naveen Consultants ಮತ್ತು M/s. ACS Design Consulting Pvt Ltd., Bangalore ಇವರುಗಳಲ್ಲಿ M/s. ACS Design Consulting Pvt Ltd., Bangalore ಇವರಿಗೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಜ್ಞಾನಸಾಗರ ಮುಖ್ಯ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣದ ಕಾಮಗಾರಿಯ ವಿನ್ಯಾಸದ ಕೆಲಸವನ್ನು ವಹಿಸಿಕೊಡಲು ಸಭೆಯು ಅನುಮೋದಿಸಿದೆ.

**ಐಟಂ ಸಂಖ್ಯೆ 05.**

5. ವಿಷಯ:- ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಜ್ಞಾನಸಾಗರ ಆವರಣದಲ್ಲಿ ಹೆಚ್.ಎಲ್.ಸಿ ಕಾಲುವೆಗೆ ಹೊಂದಿಕೊಂಡಿರುವ ವಿಶ್ವವಿದ್ಯಾಲಯದ ಜಮೀನಿನ ಸರಹದ್ದಿನಲ್ಲಿ ಕಾಂಪೌಂಡ್ ಗೋಡೆ ನಿರ್ಮಾಣದ ವಿನ್ಯಾಸದ ಕೆಲಸಗಳನ್ನು ವಿಶ್ವವಿದ್ಯಾಲಯದ ಎಂಪ್ಯಾನೆಲ್ ಮೆಂಟ್‌ನಲ್ಲಿನ ವಾಸ್ತುಶಿಲ್ಪಿಗಳಿಗೆ ವಹಿಸುವ ಕುರಿತು.

**ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನ**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಜ್ಞಾನಸಾಗರ ಮುಖ್ಯ ಆವರಣದಲ್ಲಿ ಹೆಚ್.ಎಲ್.ಸಿ ಕಾಲುವೆಗೆ ಹೊಂದಿಕೊಂಡಿರುವ ವಿಶ್ವವಿದ್ಯಾಲಯದ ಜಮೀನಿನ ಸರಹದ್ದಿನಲ್ಲಿ ಕಾಂಪೌಂಡ್ ಗೋಡೆ ನಿರ್ಮಾಣದ ವಿನ್ಯಾಸದ ಕೆಲಸವನ್ನು ವಿಶ್ವವಿದ್ಯಾಲಯದ ಎಂಪ್ಯಾನೆಲ್ ಮೆಂಟ್ ನಲ್ಲಿರುವ ಮೂವರು ವಾಸ್ತುಶಿಲ್ಪಿಗಳಾದ M/S Vishwas Consultants, Shivamogga., M/S Naveen Consultants ಮತ್ತು M/s. ACS Design Consulting Pvt. Ltd., Bangalore ಇವರುಗಳಲ್ಲಿ ಒಬ್ಬರಿಗೆ ವಹಿಸಿಕೊಡಲು ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಲು ಒಪ್ಪಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಕಟ್ಟಡ ಸಲಹಾ ಸಮಿತಿಯ ನಿರ್ಣಯದಂತೆ ಮೂವರು ವಾಸ್ತುಶಿಲ್ಪಿಗಳಾದ M/S Vishwas Consultants, Shivamogga., M/S Naveen Consultants ಮತ್ತು M/s. ACS Design Consulting Pvt Ltd., Bangalore ಇವರುಗಳಲ್ಲಿ M/s. ACS Design Consulting Pvt Ltd., Bangalore ಇವರಿಗೆ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಹೆಚ್.ಎಲ್.ಸಿ ಕಾಲುವೆಗೆ ಹೊಂದಿಕೊಂಡಿರುವ ವಿಶ್ವವಿದ್ಯಾಲಯದ ಜಮೀನಿನ ಸರಹದ್ದಿನಲ್ಲಿ ಕಾಂಪೌಂಡ್ ಗೋಡೆ ನಿರ್ಮಾಣದ ವಿನ್ಯಾಸದ ಕೆಲಸವನ್ನು ವಹಿಸಿಕೊಡಲು ಸಭೆಯು ಅನುಮೋದಿಸಿದೆ.

ಐಟಂ ಸಂಖ್ಯೆ 06.

ವಿಷಯ:– ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಮುಖ್ಯ ಆವರಣ, ನಂದಿಹಳ್ಳಿ, ಕೊಪ್ಪಳ ಮತ್ತು ಯಲಬುರ್ಗಾ ಕೇಂದ್ರಗಳಲ್ಲಿ ಕೈಗೊಳ್ಳುವ ಅಭಿವೃದ್ಧಿ ಕೆಲಸಗಳಿಗೆ Third Party Quality Control ಸೇವೆಗಳನ್ನು ಪಡೆಯಲು Empanelment ಮಾಡಿಕೊಳ್ಳಲು ಇ-ಪ್ರೋಕ್ಯೂರ್ಮೆಂಟ್ ಮೂಲಕ ಟೆಂಡರ್ ಕರೆಯುವ ಕುರಿತು.

**ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನ**

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಮುಖ್ಯ ಆವರಣ, ನಂದಿಹಳ್ಳಿ, ಕೊಪ್ಪಳ ಮತ್ತು ಯಲಬುರ್ಗಾ ಕೇಂದ್ರಗಳಲ್ಲಿ ಕೈಗೊಳ್ಳುವ ಅಭಿವೃದ್ಧಿ ಕೆಲಸಗಳಿಗೆ Third Party Quality Control ಸೇವೆಗಳನ್ನು ಪಡೆಯಲು Empanelment ಮಾಡಿಕೊಳ್ಳಲು ಇ–ಪ್ರೋಕ್ಯೂರ್ಮೆಂಟ್ ಮೂಲಕ ಟೆಂಡರ್ ಕರೆಯಲು ಅನುಮತಿಸಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಮುಖ್ಯ ಆವರಣ, ನಂದಿಹಳ್ಳಿ, ಕೊಪ್ಪಳ ಮತ್ತು ಯಲಬುರ್ಗಾ ಕೇಂದ್ರಗಳಲ್ಲಿ ಕೈಗೊಳ್ಳುವ ಅಭಿವೃದ್ಧಿ ಕೆಲಸಗಳಿಗೆ Third Party Quality Control ಸೇವೆಗಳನ್ನು ಪಡೆಯಲು Empanelment ಮಾಡಿಕೊಳ್ಳಲು ಇ–ಪ್ರೋಕ್ಯೂರ್ಮೆಂಟ್ ಮೂಲಕ ಟೆಂಡರ್ ಕರೆಯುವ ಕಟ್ಟಡ ಸಲಹಾ ಸಮಿತಿಯ ಅನುಮತಿಯನ್ನೇ ಸಿಂಡಿಕೇಟ್ ಸಭೆಯು ಯಥಾವತ್ತಾಗಿ ಅನುಮೋದಿಸಿದೆ.

➲ ಐಟಂ ನಂ. 13:

**ವಿಷಯ:** 2021–22ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಮತ್ತು ಶಿಕ್ಷಣ ಮಹಾವಿದ್ಯಾಲಯಗಳ ಸಂಯೋಜನಾ ವರದಿ ಸಲ್ಲಿಸುವ ಕುರಿತು.

*****

2021–22ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಮತ್ತು ಶಿಕ್ಷಣ ಮಹಾವಿದ್ಯಾಲಯಗಳ Consolidated Score and Recommendation reportನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ವಿವಿಧ ಮಹಾವಿದ್ಯಾಲಯಗಳ 2021–22ನೇ ಸಾಲಿನ ಸ್ಥಳೀಯ ಪರಿವೀಕ್ಷಣಾ ಸಮಿತಿಯ ವರದಿಗಳನ್ನು ಪರಿಶೀಲಿಸಿ ಈ ಕೆಳಗಿನಂತೆ ಸಭೆಯು ತೀರ್ಮಾನಿಸಿದೆ.

- ಹೊಸ ಕಾಲೇಜು ಪ್ರಾರಂಭಿಸಲು ಸಲ್ಲಿಸಿದ ಸಂಯೋಜನಾ ಅರ್ಜಿಗಳಲ್ಲಿ ನಿಗದಿತ (45) ಅಂಕಗಳಿಸಿದ ಅರ್ಜಿಗಳನ್ನು ಮಾತ್ರ ಸರಕಾರದ ಅನುಮೋದನೆಗೆ ಕಳುಹಿಸಲು ಸಭೆಯು ನಿರ್ಧರಿಸಿದೆ.
- ಹೊಸ ಕೋರ್ಸ್ ಪ್ರಾರಂಭಿಸಲು ಮಹಾವಿದ್ಯಾಲಯಗಳು ಸಲ್ಲಿಸಿದ ಅರ್ಜಿಗಳಲ್ಲಿ ನಿಗದಿತ (55) ಅಂಕಗಳಿಸಿದ ಅರ್ಜಿಗಳನ್ನು ಮಾತ್ರ ಸರಕಾರದ ಅನುಮೋದನೆಗಾಗಿ ಕಳುಹಿಸಲು ಸಭೆಯು ನಿರ್ಧರಿಸಿದೆ.
- ಹೊಸ ಶಾಶ್ವತ ಸಂಯೋಜನೆಗೆ ಮಹಾವಿದ್ಯಾಲಯಗಳು ಸಲ್ಲಿಸಿದ ಅರ್ಜಿಗಳಲ್ಲಿ ನಿಗದಿತ (60) ಅಂಕಗಳಿಸಿದ ಅರ್ಜಿಗಳನ್ನು ಮಾತ್ರ ಸರಕಾರದ ಅನುಮೋದನೆಗೆ ಕಳುಹಿಸಲು ಸಭೆಯು ನಿರ್ಧರಿಸಿದೆ.
- ಪ್ರವೇಶಾತಿ ಮಿತಿ ಹೆಚ್ಚಳಕ್ಕೆ ಅರ್ಜಿ ಸಲ್ಲಿಸಿದ ಮಹಾವಿದ್ಯಾಲಯಗಳು ನಿಗದಿತ ಅಂಕ (50) ಗಳಿಸಿದರೆ ಪ್ರವೇಶಾತಿ ಮಿತಿ ಹೆಚ್ಚಳವನ್ನು ಸ್ಥಳೀಯ ಪರಿವೀಕ್ಷಣಾ ಸಮಿತಿ ಶಿಫಾರಸ್ಸುಗಳನ್ನು ಸಭೆಯು ಅನುಮೋದಿಸಿದೆ.
- ಶಾಶ್ವತ ಸಂಯೋಜನೆ ನವೀಕರಣಕ್ಕೆ ಸಲ್ಲಿಸಿದ ಅರ್ಜಿಗಳಲ್ಲಿ ನಿಗದಿತ (70) ಅಂಕಗಳಿಸಿದ ಕಾಲೇಜುಗಳಿಗೆ ವಿಶ್ವವಿದ್ಯಾಲಯ ಮಟ್ಟದಲ್ಲೇ ನವೀಕರಣವನ್ನು ಸಭೆಯು ಅನುಮೋದಿಸಿದೆ.
- ತಾತ್ಕಾಲಿಕ ಸಂಯೋಜನೆ ಮುಂದುವರಿಕೆಗೆ ಅರ್ಜಿ ಸಲ್ಲಿಸಿದ ಮಹಾವಿದ್ಯಾಲಯಗಳು ನಿಗದಿತ ಅಂಕ (45) ಗಳಿಸಿದರೆ ಮುಂದುವರಿಕೆ ಸಂಯೋಜನೆ ನೀಡಲು ಸಭೆಯು ಅನುಮೋದಿಸಿದೆ.

- ತಾತ್ಕಾಲಿಕ ಸಂಯೋಜನೆ ಮುಂದುವರಿಕೆಗೆ ಅರ್ಜಿ ಸಲ್ಲಿಸಿದ ಮಹಾವಿದ್ಯಾಲಯಗಳು ನಿಗದಿತ ಅಂಕ (45) ಕ್ಕಿಂತ ಹೆಚ್ಚು ಅಂಕ ಗಳಿಸಿದ ಮಹಾವಿದ್ಯಾಲಯಗಳಿಗೆ ಮುಂದುವರಿಕೆ ಸಂಯೋಜನೆಯನ್ನು ನೀಡಲಾಗಿದೆ. ಮುಂದುವರೆದು, ನಿಗದಿತ ಅಂಕ (45) ಕ್ಕಿಂತ ಕಡಿಮೆ ಅಂಕ ಗಳಿಸಿದ ಮಹಾವಿದ್ಯಾಲಯಗಳಿಗೆ 45 ಅಂಕಗಳನ್ನು ಗಳಿಸಲು ಅವಶ್ಯವಿರುವ ಸೌಲಭ್ಯಗಳನ್ನು ಒದಗಿಸಿದ ಅನುಪಾಲನ ವರದಿಯನ್ನು ಸಲ್ಲಿಸಲು ಸೂಚಿಸಿ ಮುಂದುವರಿಕೆಗೆ ಅನುಮೋದನೆ ನೀಡಲಾಗಿದೆ.
- ಸಂಯೋಜನಾ ಅರ್ಜಿ ಸಲ್ಲಿಸದೆ ಇರುವ 06 ಮಹಾವಿದ್ಯಾಲಯಗಳ ಸಂಯೋಜನೆಯನ್ನು ಸ್ಥಗಿತಗೊಳಿಸಲು ತೀರ್ಮಾನಿಸಿ, ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಲು ಸಭೆಯು ಸೂಚಿಸಿದೆ.

➲ **ಐಟಂ ನಂ. 14:**

ವಿಷಯ: ಖರೀದಿ ಸಲಹಾ ಸಮಿತಿ ಸಭೆಯ ಐಟಂ ಸಂಖ್ಯೆ 01ನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

ಉಲ್ಲೇಖ: ದಿನಾಂಕ 06.09.2021 ರಂದು ಜರುಗಿದ ಖರೀದಿ ಸಮಿತಿ ಸಭೆ

*****

ವಿಶ್ವವಿದ್ಯಾಲಯದಲ್ಲಿ ದಿನಾಂಕ 06.09.2021 ರಂದು ಜರುಗಿದ ಖರೀದಿ ಸಮಿತಿ ಸಭೆಯು ಎಲ್ಲಾ ಕಾರ್ಯಸೂಚಿಗಳನ್ನು ಪರಿಶೀಲಿಸಿದ್ದು, ಸದರಿ ಸಭೆಯಲ್ಲಿ ಐಟಂ ಸಂಖ್ಯೆ 01 ಮಾತ್ರ ಅನುಮೋದಿತವಾದ ಕಾರಣ ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**<u>ಖರೀದಿ ಸಮಿತಿ ಸಭೆ ತೀರ್ಮಾನ</u>**

ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಮಗಡದ ಹೊಸ ವಸತಿನಿಲಯಗಳಿಗೆ ಅಗತ್ಯವಾದ ಅಲ್ಮೇರಾಗಳನ್ನು SCP/TSP ಅನುದಾನದ ಕ್ರಿಯಾ ಯೋಜನೆ 01 ರ ಅಡಿಯಲ್ಲಿ ಖರೀದಿಸಿ ಇನ್ನುಳಿದ ಅಲ್ಮೇರಾಗಳನ್ನು ಮತ್ತು ಕುಲಸಚಿವರ ಕಾರ್ಯಾಲಯ ಹಾಗೂ ಇತರೆ ವಿಭಾಗಗಳಿಗೆ ಅಗತ್ಯವಾದ ಅಲ್ಮೇರಾಗಳನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಿ ಖರೀದಿಸಲು ಖರೀದಿ ಸಮಿತಿ ಸಭೆಯು ತೀರ್ಮಾನಿಸಿದೆ.

**<u>ಸಿಂಡಿಕೇಟ್ ಸಭೆಯ ತೀರ್ಮಾನ</u>**

ದಿನಾಂಕ 06.09.2021 ರಂದು ಜರುಗಿದ ಖರೀದಿ ಸಲಹಾ ಸಮಿತಿ ಸಭೆಯಲ್ಲಿ ಅನುಮೋದಿತ 01ನೇ ನಡಾವಳಿ ಕುರಿತಾಗಿ ಸಭೆಯು ಮೇಲ್ಕಂಡ ಖರೀದಿ ಸಮಿತಿ ಸಭೆಯ ನಿರ್ಧಾರವನ್ನೆ ಸಿಂಡಿಕೇಟದ ಸಭೆಯು ದೃಢೀಕರಿಸಿ ಅನುಮೋದಿಸಿತು.

➲ **ಐಟಂ ನಂ. 15:**

ವಿಷಯ: ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

ಉಲ್ಲೇಖ: ಹಣಕಾಸು ವಿಭಾಗದ ಪತ್ರ ಸಂ: ವಿಶ್ರೀಕೃವಿಬ/ಹ.ವಿ/ಸಿಂಡಿಕೇಟ್ ಐಟಂ/2021-22/72 ದಿನಾಂಕ: 09/08/2021.

****

ಹಣಕಾಸು ವಿಷಯಕ್ಕೆ ಸಂಬಂಧಿಸಿದಂತೆ 2021-22ನೇ ಆರ್ಥಿಕ ಸಾಲಿನ ವಿಶ್ವವಿದ್ಯಾಲಯದ ಪ್ರಥಮ ಹಣಕಾಸು ಸಮಿತಿ ಸಭೆಯನ್ನು ದಿನಾಂಕ 30.07.2021 ರಂದು ಆಯೋಜಿಸಲಾಗಿತ್ತು. ಸದರಿ ಸಮಿತಿ ಸಭೆಯು ಈ ಕುರಿತು ನಡಾವಳಿಗಳನ್ನು ಸಲ್ಲಿಸಲಾಗಿದ್ದು, ಈ ನಡಾವಳಿಗಳನ್ನು ಸಾಮಾನ್ಯ ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ 2021-22ನೇ ಆರ್ಥಿಕ ಸಾಲಿನ ವಿಶ್ವವಿದ್ಯಾಲಯದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ದೃಢೀಕರಿಸಿ ಅನುಮೋದಿಸಿತು.

## ಟೇಬಲ್ ಅಜೆಂಡಾ

**ಐಟಂ ನಂ 01**

ವಿಷಯ: ವಿಶ್ವವಿದ್ಯಾಲಯದ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗಗಳ ಬೋಧಕ ಸಿಬ್ಬಂದಿಗಳಿಗೆ ಯುಜಿಸಿಯ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ನೀಡುವ ಕುರಿತು.

ಉಲ್ಲೇಖ: 1. ಈ ಕಛೇರಿ ಅಧಿಸೂಚನೆ ಸಂಖ್ಯೆ: ವಿಶ್ರೀಕೃವಿಬ/ಡಿಪಿಎಆರ್/ಬೋಧಕ/ಸಿ.ಎ.ಎಸ್–ಪದೋನ್ನತಿ/2021–22/337 ದಿನಾಂಕ. 28/06/2021

2. ಈ ಕಛೇರಿ ಸಭೆ ಸೂಚಿ ಸಂಖ್ಯೆ: ವಿಶ್ರೀಕೃವಿಬ/ಡಿಪಿಎಆರ್/ಬೋಧಕ/ಸಿ.ಎ.ಎಸ್–ಪದೋನ್ನತಿ/2021–22/602, 603, 641, 642, 643, 680 ದಿನಾಂಕ : 15/07/2021, 20/07/2021 ಮತ್ತು 23/07/2021

3. ದಿ. 12.08.2021 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ 02.

*****

ವಿಶ್ವವಿದ್ಯಾಲಯದ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗಗಳ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ.ಯ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ನೀಡುವ ಸಂಬಂಧ ಉಲ್ಲೇಖ–01 ರನ್ವಯ ಸದರಿ ವಿಭಾಗದ ಸ್ಕ್ರೀನಿಂಗ್–ಕಮ್–ಮೌಲ್ಯಮಾಪನ ಸಮಿತಿಗಳನ್ನು ರಚಿಸಿದೆ. ತದನಂತರ ಸದರಿ ಸಮಿತಿಯು ಉಲ್ಲೇಖ–02ರಂತೆ ಕಾರ್ಯ ಪ್ರವೃತ್ತಗೊಂಡು ದಿನಾಂಕ 28/07/2021 ರಂದು ಸ್ಕ್ರೀನಿಂಗ್–ಕಮ್–ಮೌಲ್ಯಮಾಪನ ನಡೆಸಲು ಸಭೆಯನ್ನು ಆಯೋಜಿಸಲಾಗಿದೆ.

ಸದರಿ ಸಮಿತಿಯು ಯು.ಜಿ.ಸಿ ಹಾಗೂ ಸರ್ಕಾರದ ನಿಯಮಗಳಂತೆ ಬೋಧಕ ಸಿಬ್ಬಂದಿಗಳಿಗೆ ಯುಜಿಸಿಯ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ನೀಡುವ ಸಂಬಂಧ ಸ್ಕ್ರೀನಿಂಗ್–ಕಮ್–ಮೌಲ್ಯಮಾಪನ ನಡೆಸಿ ವಿಭಾಗವಾರು ಪಟ್ಟಿಗಳನ್ನು ಸಿದ್ಧಪಡಿಸಿ ಸಲ್ಲಿಸಿದ್ದು, ಸದರಿ ಪಟ್ಟಿಯನ್ನು ಉಲ್ಲೇಖ–03 ರಂತೆ ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ಆದರೆ ಸದರಿ ಸಭೆಯಲ್ಲಿ ಈ ಕೆಳಕಂಡ ಬೋಧಕ ಸಿಬ್ಬಂದಿಗಳಿಗೆ ಯುಜಿಸಿಯ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮುಂದೂಡಲಾಗಿತ್ತು. ಹೀಗಾಗಿ ಈ ಕೆಳಕಂಡವರ ಯುಜಿಸಿಯ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮರುಮಂಡಿಸಿದೆ.

| ಕ್ರ.ಸಂ | ಅಧ್ಯಾಪಕರ ಹೆಸರು | ವೃತ್ತಿ ಪದೋನ್ನತಿ ಹಂತ |
|---|---|---|
| 01 | ಡಾ. ಮೇಘರಾಜ ಬಿ. | AGP 6,000 (Level 10) - AGP 7,000 (Level 11) |
| 02 | ಡಾ. ಪ್ರಕಾಶ ಯಳವಟ್ಟಿ | AGP 6,000 (Level 10) - AGP 7,000 (Level 11) |
| 03 | ಡಾ. ಮುಬಾರಕ್ | AGP 6,000 (Level 10) - AGP 7,000 (Level 11) |

### ತೀರ್ಮಾನ

ವಿಶ್ವವಿದ್ಯಾಲಯದ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ.ಯ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿಗಾಗಿ ರಚಿಸಿದ ಸ್ಕ್ರೀನಿಂಗ್–ಕಮ್–ಮೌಲ್ಯಮಾಪನ ಸಮಿತಿಗಳು ಸಲ್ಲಿಸಿದ ನಡಾವಳಿಯನ್ನು ಸಭೆಯು ಈ ಕೆಳಕಂಡಂತೆ ಅನುಮೋದಿಸಿತು.

| ಕ್ರ.ಸಂ | ಅಧ್ಯಾಪಕರ ಹೆಸರು | ವೃತ್ತಿ ಪದೋನ್ನತಿ ಹಂತ | ತೀರ್ಮಾನ |
|---|---|---|---|
| 01 | ಡಾ. ಮೇಘರಾಜ ಬಿ. | AGP 6,000 (Level 10) - AGP 7,000 (Level 11) | Recommendations of the Screening cum evaluation committee is approved. (ವಿಭಾಗವಾರು ಸ್ಕ್ರೀನಿಂಗ್–ಕಮ್–ಮೌಲ್ಯಮಾಪನ ಸಮಿತಿಗಳು ಸಲ್ಲಿಸಿದ ಶಿಫಾರಸ್ಸುಗಳನ್ನು ಸಭೆಯು ಅನುಮೋದಿಸಿದೆ.) |
| 02 | ಡಾ. ಪ್ರಕಾಶ ಯಳವಟ್ಟಿ | AGP 6,000 (Level 10) - AGP 7,000 (Level 11) | |
| 03 | ಡಾ. ಮುಬಾರಕ್ | AGP 6,000 (Level 10) - AGP 7,000 (Level 11) | |

ಮುಂದುವರೆದು, ಸದರಿ ಪ್ರಯೋಜನಗಳನ್ನು ಸಿಂಡಿಕೇಟ್ ದಿನಾಂಕದಿಂದ ಅನ್ವಯಿಸಿ ಪಡೆಯಬಹುದಾಗಿದೆ.

ಐಟಂ ನಂ 02

ವಿಷಯ: ಸಹಾಯಕ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು/ಪ್ರಾಧ್ಯಾಪಕರುಗಳನ್ನು ಪರೀಕ್ಷಾ ಅವಧಿ ಮುಕ್ತಾಯದ ಘೋಷಣೆ ಕುರಿತು.

****

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಮೇ/ಜೂನ್ – 2019 ರಲ್ಲಿ ಸಹಾಯಕ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು/ಪ್ರಾಧ್ಯಾಪಕರುಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲಾಗಿದ್ದು, 25 ಅಧ್ಯಾಪಕರುಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಎರಡು ವರ್ಷಗಳ ಪರೀಕ್ಷಾ ಸೇವಾ ಅವಧಿಯನ್ನು ಪೂರ್ತಿಗೊಳಿಸಿರುತ್ತಾರೆ. ಕರ್ನಾಟಕ ಸಿವಿಲ್ ಸೇವೆಗಳ (ಪ್ರೊಬೇಷನ್) ನಿಯಮಗಳು – 1977 ರನ್ವಯ ಅಧ್ಯಾಪಕರ ಖಾಯಂ ಪೂರ್ವ ಸೇವಾ ಅವಧಿಯು ಮುಕ್ತಾಯವಾಗಿದ್ದು, ಸದರಿ ಅಧ್ಯಾಪಕರ ಖಾಯಂ ಪೂರ್ವ ಸೇವಾ ಅವಧಿ ತೃಪ್ತಿಕರವಾಗಿದೆ ಎಂದು ಘೋಷಿಸಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| S.l No | Name of the Teacher | Department | Designation | Cate gory | Date of Joining | SAR/PAR Reports/Remarks |
|---|---|---|---|---|---|---|
| 1)* | Dr. Arunkumar Lagashetty | Chemistry | Associate Professor | GM | 27.05.2019 | ತೃಪ್ತಿಕರವಾಗಿದೆ<br>ಕರ್ನಾಟಕ ನಾಗರಿಕ ಸೇವೆ (ಪ್ರೊಬೇಷನ್) ನಿಯಮಗಳು – 1977 ರ ನಿಯಮ 11 ರ ನ್ಯಾಯಾಲಯದ ತೀರ್ಪುಗೆ ಷರತ್ತಿಗೆ ಒಳಪಡಿಸಿ |
| 2) | Dr. B. Umareddy | Botany | Associate Professor | IIIB | 27.05.2019 | ತೃಪ್ತಿಕರವಾಗಿದೆ |
| 3) | Dr. Jeelan Basha V. | Commerce | Professor | IIB | 04.06.2019 | ತೃಪ್ತಿಕರವಾಗಿದೆ |
| 4) | Dr. Ravi B. | Commerce | Associate Professor | Cat - I | 31.05.2019 | ತೃಪ್ತಿಕರವಾಗಿದೆ |
| 5) | Dr. Sadyojathappa S | Commerce | Associate Professor | GM | 01.06.2019 | ತೃಪ್ತಿಕರವಾಗಿದೆ |
| 6)* | Sri. Santosh Sangamesh Patil | Computer Science | Assistant Professor | GM | 27.05.2019 | ತೃಪ್ತಿಕರವಾಗಿದೆ<br>(371 (ಜೆ) ಬಂದಿರುವುದಿಲ್ಲ) |
| 7) | Dr. Medavani S. Katti | Economics | Associate Professor | Cat - I | 04.06.2019 | ತೃಪ್ತಿಕರವಾಗಿದೆ |
| 8) | Dr. Gopal | Education | Assistant Professor | ST | 31.05.2019 | ತೃಪ್ತಿಕರವಾಗಿದೆ |
| 9) | Dr. Saheb Ali H. Niragudi | Education | Associate Professor | IIB | 25.05.2019 | ತೃಪ್ತಿಕರವಾಗಿದೆ |
| 10) | Dr. Prashantha kumar T. M. | Education | Assistant Professor | GM | 25.05.2019 | ತೃಪ್ತಿಕರವಾಗಿದೆ |
| 11) | Dr. Shushma N. Jogan | Education | Assistant Professor | SC | 27.05.2019 | ತೃಪ್ತಿಕರವಾಗಿದೆ |
| 12) | Dr. Thippeswamy H. | History & Archaeology | Associate Professor | SC | 25.05.2019 | ತೃಪ್ತಿಕರವಾಗಿದೆ |
| 13)* | Dr. Ananth L. Zandekar | History & Archaeology | Associate Professor | SC | 25.05.2019 | ತೃಪ್ತಿಕರವಾಗಿದೆ<br>(ಜಾತಿ ಸಿಂಧುತ್ವ ನಿಗದಿತ ನಮೂನೆ – ಎ ರಲ್ಲಿ ಬಂದಿರುವುದಿಲ್ಲ) |
| 14) | Sri. Rakesh | Mass Communication & Journalism | Assistant Professor | GM | 25.05.2019 | ತೃಪ್ತಿಕರವಾಗಿದೆ |
| 15) | Dr. Hanumesh Vaidya | Mathematics | Associate Professor | GM | 01.06.2019 | ತೃಪ್ತಿಕರವಾಗಿದೆ |
| 16) | Dr. G.P. Dinesh | MBA | Professor | IIA | 25.05.2019 | ತೃಪ್ತಿಕರವಾಗಿದೆ |
| 17) | Dr. Prashanth K. C. | MBA | Associate Professor | GM | 25.05.2019 | ತೃಪ್ತಿಕರವಾಗಿದೆ |
| 18) | Dr. Archana H. N. | MBA | Associate Professor | GM | 25.05.2019 | ತೃಪ್ತಿಕರವಾಗಿದೆ |
| 19) | Sri. Sampath Kumar | Physical Education | Assistant Professor | SC | 27.05.2019 | ತೃಪ್ತಿಕರವಾಗಿದೆ |

| | | | | | | |
|---|---|---|---|---|---|---|
| 20) | Sri. Shashidhara | Physical Education | Assistant Professor | GM | 27.05.2019 | ತೃಪ್ತಿಕರವಾಗಿದೆ |
| 21) | Dr. Thipperudrappa J | Physics | Professor | GM | 27.05.2019 | ತೃಪ್ತಿಕರವಾಗಿದೆ |
| 22) | Dr. Khadke Udaykumar | Physics | Associate Professor | IIA | 27.05.2019 | ತೃಪ್ತಿಕರವಾಗಿದೆ |
| 23) | Dr. Gouri Manik Manasa | Social Work | Associate Professor | SC | 25.05.2019 | ತೃಪ್ತಿಕರವಾಗಿದೆ |
| 24) | Dr. Vijaykumar B. Malashetty | Zoology | Professor | GM | 27.05.2019 | ತೃಪ್ತಿಕರವಾಗಿದೆ |
| 25) | Dr. Shashikanth H. Majagi | Zoology | Associate Professor | SC | 04.06.2019 | ತೃಪ್ತಿಕರವಾಗಿದೆ |

**ತೀರ್ಮಾನ**

25 ಸಂಖ್ಯೆ ಸಹಾಯಕ/ಸಹ ಪ್ರಾಧ್ಯಾಪಕರು/ಪ್ರಾಧ್ಯಾಪಕರು ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಎರಡು ವರ್ಷಗಳ ಸೇವಾ ಅವಧಿಯನ್ನು ಪೂರ್ತಿಗೊಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸಿವಿಲ್ ಸೇವೆಗಳ (ಪ್ರೊಬೇಷನ್) ನಿಯಮಗಳು, 1977 ರನ್ವಯ ಸಹಾಯಕ/ಸಹ ಪ್ರಾಧ್ಯಾಪಕರು/ಪ್ರಾಧ್ಯಾಪಕರುಗಳ ಪರೀಕ್ಷತಾ ಅವಧಿ ಮುಕ್ತಾಯದ ಘೋಷಣೆಯನ್ನು ಸಭೆಯು ಅನುಮೋದಿಸಿ, ಕ್ರಮ ಸಂಖ್ಯೆ 1, 6, ಮತ್ತು 13 ರ ಸಹಾಯಕ/ಸಹ ಪ್ರಾಧ್ಯಾಪಕರು/ಪ್ರಾಧ್ಯಾಪಕರುಗಳ ಪ್ರಮಾಣ ಪತ್ರಗಳು ಸಂಬಂಧಪಟ್ಟ ಪ್ರಾಧಿಕಾರಗಳಿಂದ ಪರಿಶೀಲಿತವಾದ ಬಳಿಕ ಆದೇಶ ನೀಡಲು ನಿರ್ಧರಿಸಿ, ಉಳಿದವರ ಪ್ರಮಾಣ ಪತ್ರಗಳು ಸಂಬಂಧಪಟ್ಟ ಪ್ರಾಧಿಕಾರಗಳಿಂದ ಪರಿಶೀಲತವಾಗಿರುವ ಸಹಾಯಕ/ಸಹ ಪ್ರಾಧ್ಯಾಪಕರು/ಪ್ರಾಧ್ಯಾಪಕರುಗಳಿಗೆ ಆದೇಶ ನೀಡಲು ಸಭೆಯು ನಿರ್ಧರಿಸಿದೆ.

**ಐಟಂ ನಂ 03**

ವಿಷಯ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ/ಸಹಾಯಕ ಅಭಿಯಂತರರ ನೇಮಕಾತಿ ಕುರಿತು.

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 03 ಯುಆರ್‌ಇ 2021 ದಿ. 16.02.2021

2. ಕಛೇರಿ ಪತ್ರ ಸಂಖ್ಯೆ: ವಿಶ್ರೀಕೃವಿಬ/ಆಡಳಿತ/ಡಿಪಿಎಆರ್–ಬೋಧಕೇತರ/2020–21/ 2132 ದಿನಾಂಕ 18.03.2021.

****

ಶ್ರೀ. ಆಕಾಶ್ ಬಿ., ಕಿರಿಯ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ಇವರನ್ನು 05 ವರ್ಷಗಳ ಅವಧಿಗೆ ನಿಯೋಜನೆ ಮೇಲೆ ನೇಮಕ ಮಾಡಿ ಹೊರಡಿಸಿದ ಅಧಿಸೂಚನೆಯಂತೆ ಉಲ್ಲೇಖ 2ರನ್ವಯ ಸದರಿಯವರನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯ ಪ್ರಾದೇಶಿಕ ಕಛೇರಿ ಬೆಂಗಳೂರಿಗೆ ದಿನಾಂಕ 18.03.2021 ರಂದು ಕರ್ತವ್ಯದಿಂದ ಬಿಡುಗಡೆಗೊಳಿಸಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದಲ್ಲಿ ಅಭಿವೃದ್ಧಿ ಕೆಲಸಗಳು ಕುಂಠಿತವಾಗಿವೆ. ಆದ ಕಾರಣ ಶೀಘ್ರವಾಗಿ ಪೂರ್ಣಗೊಳಿಸುವ ಒತ್ತಡದ ಹಿನ್ನೆಲೆಯಲ್ಲಿ ನುರಿತ/ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರನ್ನು ಸರ್ಕಾರದ ನಿಯಮಾನುಸಾರ ಸಂಚಿತ ವೇತನ/ಗುತ್ತಿಗೆ ಆಧಾರಿತವಾಗಿ ನೇಮಕ ಮಾಡಿಕೊಳ್ಳುವ ವಿಷಯವನ್ನು ಸಿಂಡಿಕೇಟ್ ಸಭೆಯ ತೀರ್ಮಾನ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಸದರಿ ವಿಷಯವಾಗಿ ಸುದೀರ್ಘವಾಗಿ ಚರ್ಚಿಸಿದ ಸಭೆಯು ವಿಶ್ವವಿದ್ಯಾಲಯದ ಅಭಿವೃದ್ಧಿ ದೃಷ್ಟಿಯಿಂದ ಹಾಗೂ ಕೆಲಸಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವ ಒತ್ತಡದ ಹಿನ್ನೆಲೆಯಲ್ಲಿ ನುರಿತ/ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರನ್ನು ಲೋಕೋಪಯೋಗಿ ಇಲಾಖೆ (PWD) /ಸರ್ಕಾರದ ನಿಯಮಾನುಸಾರ ಸಂಚಿತ ವೇತನ/ಗುತ್ತಿಗೆ ಆಧಾರಿತವಾಗಿ ನೇಮಕ ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿದೆ.

**ಐಟಂ ನಂ 04**

ವಿಷಯ: ಬಿ.ಇಡಿ ವಿದ್ಯಾರ್ಥಿನಿಯರ ಆಂತರಿಕ ಪರೀಕ್ಷೆಗಳ ಅಂಕ ಸಲ್ಲಿಕೆ ಮಾಡದೆ ಸಮಸ್ಯೆ ಸೃಷ್ಟಿಸಿದ ಕುರಿತು.

****

ಶರಭೇಶ್ವರ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ ಈ ಕಾಲೇಜಿನ ಒಟ್ಟು 04 ವಿದ್ಯಾರ್ಥಿನಿಯರ ಆಂತರಿಕ ಮಾಪನ (internal assessment) ಅಂಕಗಳನ್ನು ಸೂಕ್ತ ಸಂದರ್ಭದಲ್ಲಿ ಸಲ್ಲಿಕೆಯಾಗದ ಪರಿಣಾಮ ಫಲಿತಾಂಶ ಘೋಷಣೆಯಲ್ಲಿ ಅನುತೀರ್ಣತೆ ದಾಖಲಾಗಿರುತ್ತದೆ. ಈ ವಿಷಯ ಕುರಿತು ಚರ್ಚೆ ಹಾಗೂ ತೀರ್ಮಾನಕ್ಕಾಗಿ ಸಲ್ಲಿಸಿದೆ.

**<u>ತೀರ್ಮಾನ</u>**

ಸದರಿ ವಿಷಯದ ಕುರಿತಾಗಿ ಗಂಭೀರವಾಗಿ ಚರ್ಚಿಸಿದ ಸಭೆಯು ಈ ವಿಷಯದ ಪರಿಶೀಲನೆಗಾಗಿ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಉಪಸಮಿತಿಯನ್ನು ರಚನೆ ಮಾಡಲು ಸಭೆಯು ತೀರ್ಮಾನಿಸಿದೆ. ಮುಂದುವರೆದು, ಉಪಸಮಿತಿಯು ಸದರಿ ಪ್ರಕರಣದ ಕುರಿತು ಪರಿಶೀಲಿಸಿ 15 ದಿನಗಳ ಒಳಗಾಗಿ ವರದಿಯನ್ನು ಸಲ್ಲಿಸಲು ಸೂಚಿಸಿದೆ.

**ಐಟಂ ನಂ 05**

ವಿಷಯ: ಪರೀಕ್ಷಾ ಕೇಂದ್ರದಿಂದ ಮೌಲ್ಯಮಾಪನ ಕೇಂದ್ರಕ್ಕೆ ಉತ್ತರ ಪತ್ರಿಕೆ ಸಲ್ಲಿಕೆಯಾಗದಿರುವ ಕುರಿತು.

*****

2020–21ನೇ ಶೈಕ್ಷಣಿಕ ಸಾಲಿನ ಜುಲೈ/ಆಗಸ್ಟ ಮಾಹೆಯಲ್ಲಿ ಜರುಗಿದ ಸ್ನಾತಕ ಪರೀಕ್ಷೆಗಳ ಉತ್ತರ ಪತ್ರಿಕೆಗಳಲ್ಲಿ ಒಂದು ವಿಷಯದ ಉತ್ತರ ಪತ್ರಿಕೆಯು ಮೌಲ್ಯಮಾಪನ ಕೇಂದ್ರಕ್ಕೆ ವರ್ಗಾವಣೆಯಾಗದೆ ಸಮಸ್ಯೆ ಸೃಷ್ಟಿಯಾಗಿರುತ್ತದೆ. ಈ ಕುರಿತು ಸಿಂಡಿಕೇಟ್ ಸಭೆಯ ಸೂಕ್ತ ತೀರ್ಮಾನಕ್ಕಾಗಿ ಸಲ್ಲಿಸಿದೆ.

**<u>ತೀರ್ಮಾನ</u>**

2020–21ನೇ ಶೈಕ್ಷಣಿಕ ಸಾಲಿನ ಜುಲೈ/ಆಗಸ್ಟ ಮಾಹೆಯಲ್ಲಿ ಜರುಗಿದ ಸ್ನಾತಕ ಪರೀಕ್ಷೆಗಳ ಉತ್ತರ ಪತ್ರಿಕೆಗಳಲ್ಲಿ ಒಂದು ವಿಷಯದ ಉತ್ತರ ಪತ್ರಿಕೆಯು ಮೌಲ್ಯಮಾಪನ ಕೇಂದ್ರಕ್ಕೆ ವರ್ಗಾವಣೆಯಾಗದೆ ಇರುವ ಸಮಸ್ಯೆಯ ಕುರಿತು ಚರ್ಚಿಸಿದ ಸಭೆಯು ಮರು ಪರೀಕ್ಷೆ ಆಯೋಜಿಸಲು ಸಭೆಯು ತಿರ್ಮಾನಿಸಿದೆ.

**ಐಟಂ ನಂ 06**

ವಿಷಯ: ಶ್ರೀಮತಿ ಕಮಲಮ್ಮ ಇವರಿಗೆ ಅನುಕಂಪ ಆಧಾರದ ಮೇಲೆ ಉದ್ಯೋಗ ನೀಡುವ ಕುರಿತು.
ಉಲ್ಲೇಖ: ಶ್ರೀಮತಿ ಕಮಲಮ್ಮ ಇವರ ಮನವಿ ಪತ್ರ ದಿನಾಂಕ: 07.07.2021

***

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ದಿ: ರಾಜೇಶ್.ಟಿ, ಅನುಚರ ಇವರು ದಿನಾಂಕ: 18.07.2008 ರಿಂದ ವಿಶ್ವವಿದ್ಯಾಲಯದಲ್ಲಿ ಖಾಯಂ ನೌಕರರಾಗಿ ಕಾರ್ಯನಿರ್ವಹಿಸುತ್ತಿದ್ದರು. ದಿನಾಂಕ: 08.09.2020 ರಂದು ಕೋವಿಡ್–19 ಕಾರಣ ದಿಂದ ಮರಣ ಹೊಂದಿರುವ ಹಿನ್ನೆಲೆಯಲ್ಲಿ ಅವರ ಹೆಂಡತಿಯಾದ ಶ್ರೀಮತಿ ಕಮಲಮ್ಮ ಇವರು ಅನುಕಂಪ ಆಧಾರದ ಮೇಲೆ ಉದ್ಯೋಗ ನೀಡುವಂತೆ ಉಲ್ಲೇಖದನ್ವಯ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

ಮುಂದುವರೆದು ಶ್ರೀಮತಿ ಕಮಲಮ್ಮ ಇವರಿಗೆ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996 ಪ್ರಕಾರ ಅನುಕಂಪ ಅಧಾರಿತ ಉದ್ಯೋಗ ನೀಡಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**<u>ತೀರ್ಮಾನ</u>**

ದಿ: ಶ್ರೀ. ರಾಜೇಶ್.ಟಿ, ಅನುಚರ, ವಿಶ್ರೀಕೃ ವಿಶ್ವವಿದ್ಯಾಲಯ ಇವರ ಪತ್ನಿ ಶ್ರೀಮತಿ ಕಮಲಮ್ಮ ಇವರ ಮನವಿಯನ್ನು ಪರಿಶೀಲಿಸಿದ ಸಭೆಯು ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996 ಪ್ರಕಾರ ಅನುಕಂಪ ಅಧಾರಿತ ಉದ್ಯೋಗ ನೀಡಲು ಸರ್ಕಾರದ ನಿರ್ದೇಶನ ಪಡೆಯಲು ಪತ್ರ ಬರೆಯುವಂತೆ ಸಭೆಯು ನಿರ್ಧರಿಸಿದೆ.

ಐಟಂ ನಂ 07

ವಿಷಯ: ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರ ನೇಮಕಾತಿಯನ್ನು ಮಾಡಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 20.09.2021.

*****

ಡಾ. ವೀರೇಂದ್ರಕುಮಾರ ಎನ್., ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ಈ ಕಛೇರಿ ಆದೇಶ ಈ ಕಛೇರಿ ಅಧಿಸೂಚನೆ ಸಂಖ್ಯೆ: ವಿಶ್ರೀಕೃವಿಬ/ಆಡಳಿತ/ಸ್ನಾತಕೋತ್ತರ ವಿಭಾಗ/ಮುನೇ/2019-20/1301 ದಿನಾಂಕ: 01.10.2019 ರನ್ವಯ ದಿನಾಂಕ: 01.10.2019 ರಿಂದ ಅನ್ವಯಿಸಿ 02 ವರ್ಷಗಳ ಅವಧಿಗೆ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿತ್ತು. ಸದರಿಯವರ ಮುಖ್ಯಸ್ಥರ ಅವಧಿಯು ದಿನಾಂಕ: 30.09.2021 ರಂದು ಮುಕ್ತಾಯವಾಗಲಿದೆ.

**ಜ್ಯೇಷ್ಠತಾವಾರು ವಿಭಾಗದ ಅಧ್ಯಾಪಕರ ಪಟ್ಟಿ**

| SL.NO | Name of the Teacher | Date of Birth | Date of Syndicate approval | Date of Joining |
|---|---|---|---|---|
| | Dr. Veeredrakumar N | 01.03.1978 | 13.10.2012 | 30.10.2012 |
| 2 | Dr. Rajendra Prasad N.L | 01.08.1979 | 13.10.2012 | 16.10.2012 |
| 3 | Dr. Ashwini S | 12.01.1988 | 13.10.2012 | 16.10.2012 |
| 4 | Dr. Sanjay Gandhi | 14.12.1988 | 01.10.2018 | 15.10.2018 |

ಕಾರಣ ಡಾ. ವೀರೇಂದ್ರಕುಮಾರ ಎನ್., ಇವರ ನಂತರ ವಿಭಾಗದ ಅಧ್ಯಾಪಕರ ಜೇಷ್ಠತಾನುಸಾರ ಡಾ. ರಾಜೇಂದ್ರಪ್ರಸಾದ್ ಎನ್. ಎಲ್., ಇವರು ಇದ್ದು, ಸದರಿಯವರಿಗೆ ಈ ಕಛೇರಿ ಅಧಿಸೂಚನೆ ಸಂಖ್ಯೆ: ವಿಶ್ರೀಕೃವಿಬ/ಡಿಪಿಎಆರ್/ಬೋಧಕ-ಸಿಬ್ಬಂದಿ/2020-21/314 ದಿನಾಂಕ: 18.06.2020 ರನ್ವಯ ದಿನಾಂಕ: 28.05.2020 ರಿಂದ ಅನ್ವಯಿಸಿ ಮುಂದಿನ 05 ವರ್ಷಗಳ ಅವಧಿಯವರೆಗೆ ವಿಶ್ವವಿದ್ಯಾಲಯದ ವಿವಿಧ ಗೌಪ್ಯ ಕೆಲಸಗಳ ಶಾಸನಬದ್ಧ ಜವಾಬ್ದಾರಿಗಳನ್ನು ನೀಡದಿರಲು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಅದ್ದರಿಂದ ಸದರಿಯವರಿಗೆ ವಿಭಾಗದ ಮುಖ್ಯಸ್ಥರಾಗಿ ನೇಮಕ ಮಾಡಲು ಅವಕಾಶವಿಲ್ಲದ ಪ್ರಯುಕ್ತ ಜೇಷ್ಠತಾನುಸಾರ ನಂತರದ ಸ್ಥಾನದಲ್ಲಿ ಇರುವ ಡಾ. ಅಶ್ವಿನಿ ಎಸ್, ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ದಿನಾಂಕ: 01.10.2021 ರಿಂದ ಅನ್ವಯಿಸಿ 02 ವರ್ಷಗಳ ಅವಧಿಗೆ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರೆಂದು ನೇಮಕ ಮಾಡಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಡಾ. ರಾಜೇಂದ್ರಪ್ರಸಾದ್ ಎನ್. ಎಲ್., ಇವರನ್ನು ದಿನಾಂಕ: 28.05.2020 ರಿಂದ ಅನ್ವಯಿಸಿ ಮುಂದಿನ 05 ವರ್ಷಗಳ ಅವಧಿಯವರೆಗೆ ವಿಶ್ವವಿದ್ಯಾಲಯದ ವಿವಿಧ ಗೌಪ್ಯ ಕೆಲಸಗಳ ಶಾಸನಬದ್ಧ ಜವಾಬ್ದಾರಿಗಳನ್ನು ನೀಡದಿರಲು ಆದೇಶದ ಹಿನ್ನೆಲೆಯಲ್ಲಿ ವಿಭಾಗದ ಜ್ಯೇಷ್ಠತಾವಾರು ಸದರಿಯವರ ನಂತರದ ಸ್ಥಾನದಲ್ಲಿರುವ ಡಾ. ಅಶ್ವಿನಿ ಎಸ್, ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ದಿನಾಂಕ: 01.10.2021 ರಿಂದ ಅನ್ವಯಿಸಿ 02 ವರ್ಷಗಳ ಅವಧಿಗೆ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರೆಂದು ನೇಮಕ ಮಾಡಿ ಆದೇಶ ಹೊರಡಿಸಲು ಸಭೆಯು ಅನುಮೋದಿಸಿದೆ.

**ಐಟಂ ನಂ 08**

ವಿಷಯ: ರಿಟ್ ಅರ್ಜಿ ಸಂಖ್ಯೆ. 103572-103573/2017, ಶ್ರೀ.ಜಿ. ಕಾಳಿಂಗರಾವ್ ಮತ್ತು ಶ್ರೀ. ಪೀರನ್ ಸಾಬ್ ಇವರಿಗೆ ಸಂಬಂಧಿಸಿದ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ. ಇಡಿ/12/ಯುಆರ್‌ಇ/2019, ಬೆಂಗಳೂರು, ದಿನಾಂಕ. 28.06.2021.

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ. 21.09.2021

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ.ಜಿ. ಕಾಳಿಂಗರಾವ್ ಮತ್ತು ಶ್ರೀ. ಎನ್ ಪೀರನ್ ಸಾಬ್, ಜವಾನರು (ದಿನಗೂಲಿ) ಇವರನ್ನು ವಿಶ್ರೀಕೃ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಅನುಚರ/ಜವಾನ/ದಲಾಯತ್ ಹುದ್ದೆಗಳಿಗೆ ಖಾಯಂ ಆಗಿ ನೇಮಕ ಮಾಡಲು ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠಕ್ಕೆ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅದರಂತೆ ಮಾನ್ಯ ನ್ಯಾಯಾಲಯದ ಆದೇಶದನ್ವಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಸದರಿ ವಿಷಯವನ್ನು ಪರಿಶೀಲಿಸಿ ವಿಶ್ವವಿದ್ಯಾಲಯದ ವಿವಿಧ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ತಿಳಿಸಿರುತ್ತಾರೆ.

ಕಾರಣ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಸದರಿ ವಿಷಯವಾಗಿ ಚರ್ಚಿಸಿದ ಸಭೆಯು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಪತ್ರಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿ ಉನ್ನತ ಶಿಕ್ಷಣ ಇಲಾಖೆಗೆ ಪತ್ರ ಬರೆಯಲು ಸೂಚಿಸಲಾಯಿತು ಮತ್ತು ಶ್ರೀ.ಜಿ. ಕಾಳಿಂಗರಾವ್ ಮತ್ತು ಶ್ರೀ. ಎನ್ ಪೀರನ್ ಸಾಬ್ ಇವರುಗಳ ವಿರುದ್ಧ ಅಗತ್ಯವಿದ್ದಲ್ಲಿ ರಿಟ್ ಅರ್ಜಿ ಸಲ್ಲಿಸಲು ಸಭೆಯ ತೀರ್ಮಾನಿಸಿದೆ.

**ಐಟಂ ನಂ 09**

ವಿಷಯ: ಸ್ನಾತಕೋತ್ತರ ಕೇಂದ್ರ, ಕೊಪ್ಪಳಕ್ಕೆ ನಿರ್ದೇಶಕರ ನೇಮಕಾತಿ ಕುರಿತು.

******

ಈ ಕಛೇರಿ ಆದೇಶ ಸಂಖ್ಯೆ: ವಿಶ್ರೀಕೃವಿಬ/ಕುಆಕಾ/ಸ್ನಾ.ಕೇ-ನಿರ್ದೇಶಕರ ನೇಮಕಾತಿ/2019-20/1183 ದಿನಾಂಕ: 30.08.2019 ರನ್ವಯ ಡಾ. ಬಸವರಾಜ್ ಎಸ್. ಬೆಣ್ಣಿ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ದಿನಾಂಕ: 02.09.2019 ರಿಂದ ಅನ್ವಯಿಸಿ ಮುಂದಿನ 02 ವರ್ಷಗಳ ಅವಧಿಗೆ ಕೊಪ್ಪಳ, ಸ್ನಾತಕೋತ್ತರ ಕೇಂದ್ರದ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿತ್ತು. ಸದರಿಯವರ ನಿರ್ದೇಶಕರ ಅವಧಿಯು ದಿನಾಂಕ: 01.09.2021 ರಂದು ಮುಕ್ತಾಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಸ್ನಾತಕೋತ್ತರ ಕೇಂದ್ರಕ್ಕೆ ನಿರ್ದೇಶಕರನ್ನು ನೇಮಿಸಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಡಾ. ಬಸವರಾಜ್ ಎಸ್. ಬೆಣ್ಣಿ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ ಇವರ ಸ್ನಾತಕೋತ್ತರ ಕೇಂದ್ರದ ಕೊಪ್ಪಳದ ನಿರ್ದೇಶಕರ ಅವಧಿ ದಿನಾಂಕ: 01.09.2021 ರಂದು ಮುಕ್ತಾಯವಾಗಿದ್ದು, ಸದರಿಯವರ ಸ್ಥಾನಕ್ಕೆ ಮುಖ್ಯ ಆವರಣ, ಬಳ್ಳಾರಿಯ ಸಹಪ್ರಾಧ್ಯಾಪಕರು/ಪ್ರಾಧ್ಯಾಪಕರ ಸ್ವಇಚ್ಛಾ ಮನವಿ ಪತ್ರವನ್ನು ಪಡೆದು ಸೂಕ್ತರನ್ನು ಮುಂದಿನ 02 ವರ್ಷಗಳ ಅವಧಿಗೆ ನೇಮಿಸಲು ಸಭೆಯು ಅನುಮೋದಿಸಿದೆ. ಮುಂದುವರೆದು, ಯಾರು ಸ್ವಇಚ್ಛಾ ಪತ್ರವನ್ನು ಸಲ್ಲಿಸದಿದ್ದಲ್ಲಿ ಪ್ರೊ. ಬಸವರಾಜ ಎಸ್ ಬೆಣ್ಣಿ ಇವರನ್ನು ಮುಂದುವರೆಸಲು ಸಭೆಯು ಅನುಮೋದಿಸಿದೆ.

**ಐಟಂ ನಂ 10**

ವಿಷಯ: ವಿಶ್ವವಿದ್ಯಾಲಯದ ಕಾನೂನು ಸಲಹೆಯ ವಿಭಾಗಕ್ಕೆ ನೂತನ ವಕೀಲರನ್ನು ಸೇರಿಸುವ ಕುರಿತು.

****

ಶ್ರೀ. ರವಿರಾಜ ಸಿ. ಪಾಟೀಲ್, ವಕೀಲರು., ಶ್ರೀ. ಅನೂಪ ಬಿ. ದೇಶಪಾಂಡೆ, ವಕೀಲರು ಮತ್ತು ಶ್ರೀ. ಟಿ. ಹನುಮರೆಡ್ಡಿ, ವಕೀಲರು ಇವರುಗಳನ್ನು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಕಾನೂನು ಸಲಹೆಯ ವಿಭಾಗಕ್ಕೆ ನೂತನ ವಕೀಲರನ್ನು ವಿಶ್ವವಿದ್ಯಾಲಯದ ವಕೀಲರ ಪಟ್ಟಿಗೆ (Empanel of Advocates) ಸೇರಿಸುವ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

## ತೀರ್ಮಾನ

ಶ್ರೀ. ರವಿರಾಜ ಸಿ. ಪಾಟೀಲ್, ವಕೀಲರು., ಶ್ರೀ. ಅನೂಪ ಬಿ. ದೇಶಪಾಂಡೆ, ವಕೀಲರು ಮತ್ತು ಶ್ರೀ. ಟಿ. ಹನುಮರೆಡ್ಡಿ, ವಕೀಲರು ಇವರುಗಳನ್ನು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಕಾನೂನು ಸಲಹೆಯ ವಿಭಾಗದ ವಕೀಲರ ಪಟ್ಟಿಗೆ ಸೇರಿಸಲು ಸದರಿಯವರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸ್ವವಿವರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಸಭೆಯು ಮೂವರನ್ನು ವಿಶ್ವವಿದ್ಯಾಲಯದ ಕಾನೂನು ಸಲಹೆಯ ವಿಭಾಗದ ವಕೀಲರ ಪಟ್ಟಿಗೆ ಸೇರಿಸಲು ಸಭೆಯು ಅನುಮೋದಿಸಿದೆ. ಮುಂದುವರೆದು, ಸ್ಥಳೀಯ ವಕೀಲರಿಗೂ ಸಹ ಆಸಕ್ತಿ ಇದ್ದಲ್ಲಿ ಸದರಿಯವರ ಸ್ವವಿವರವನ್ನು ಅವಲೋಕಿಸಿದ ನಂತರ ವಿಶ್ವವಿದ್ಯಾಲಯದ ವಕೀಲರ ಪಟ್ಟಿಗೆ ಸೇರಿಸಬಹುದಾಗಿದೆ.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105

ಕುಲಸಚಿವರು

ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2021–22/೧೨೨೧ ದಿನಾಂಕ: 23.10.2021
೨೯.

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ 01.10.2021 ರಂದು ಮಧ್ಯಾಹ್ನ 03.00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 07.10.2021

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ ದಿನಾಂಕ 01.10.2021 ರಂದು ಮಧ್ಯಾಹ್ನ 03.00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ: ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು(ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 01.10.2021 ರಂದು ಮಧ್ಯಾಹ್ನ 03.00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿ

**➲ ಐಟಂ ನಂ. 01:**

ವಿಷಯ ಸ್ನಾತಕ ನಿಯಮಾವಳಿಯ (Regulation) ಅನುಮೋದನೆ ಕುರಿತು.

****

2021–22ನೇ ಶೈಕ್ಷಣಿಕ ಸಾಲಿಗೆ ರಾಷ್ಟ್ರೀಯ ಶಿಕ್ಷಣ ನೀತಿ (NEP 2020) ಮಾರ್ಗಸೂಚಿಗಳ ಅನ್ವಯ ಸ್ನಾತಕ ನಿಯಮಾವಳಿ (Regulation) ಸಿದ್ಧಪಡಿಸಿದ್ದು, ಸದರಿ ನಿಯಮಾವಳಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**<u>ತೀರ್ಮಾನ</u>**

2021–22ನೇ ಶೈಕ್ಷಣಿಕ ಸಾಲಿಗೆ ರಾಷ್ಟ್ರೀಯ ಶಿಕ್ಷಣ ನೀತಿ (NEP 2020) ಮಾರ್ಗಸೂಚಿಗಳ ಅನ್ವಯ ತಯಾರಿಸಿದ ಸ್ನಾತಕ ನಿಯಮಾವಳಿ (Regulation) ಯನ್ನು ಕೂಲಂಕುಷವಾಗಿ ಪರಿಶೀಲಿಸಿದ ಸಭೆಯು ಸದರಿ ಸ್ನಾತಕ ನಿಯಮಾವಳಿ (Regulation)ಅನ್ನು ಸಭೆಯು ಅನುಮೋದಿಸಿದೆ. ಮುಂದುವರೆದು ಸದರಿ ನಿಯಾಮಾವಳಿಯಲ್ಲಿ ಮುಂದಿನ ದಿನಗಳಲ್ಲಿಯೂ ಅವಶ್ಯಕ ಪರಿಷ್ಕರಣೆ ಕಂಡು ಬಂದಲ್ಲಿ ಪರಿಷ್ಕರಣೆ ಅವಕಾಶವಿದೆ ಎನ್ನುವ ನಿರ್ಧಾರವನ್ನು ಸಭೆಯು ಸರ್ವ ಸಮ್ಮತವಾಗಿ ಒಪ್ಪಿತು.

**➲ ಐಟಂ ನಂ. 02:**

ವಿಷಯ ಸ್ನಾತಕೋತ್ತರ ನಿಯಮಾವಳಿಯ (Regulation) ಅನುಮೋದನೆ ಕುರಿತು.

****

2021–22ನೇ ಶೈಕ್ಷಣಿಕ ಸಾಲಿಗೆ ರಾಷ್ಟ್ರೀಯ ಶಿಕ್ಷಣ ನೀತಿ (NEP 2020) ಮಾರ್ಗಸೂಚಿಗಳ ಅನುಸಾರ ಸ್ನಾತಕೋತ್ತರ ನಿಯಮಾವಳಿ (Regulation) ಸಿದ್ಧಪಡಿಸಿದ್ದು, ಸದರಿ ನಿಯಮಾವಳಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**<u>ತೀರ್ಮಾನ</u>**

2021–22ನೇ ಶೈಕ್ಷಣಿಕ ಸಾಲಿಗೆ ರಾಷ್ಟ್ರೀಯ ಶಿಕ್ಷಣ ನೀತಿ (NEP 2020) ಮಾರ್ಗಸೂಚಿಗಳ ಅನುಸಾರ ತಯಾರಿಸಿದ ಸ್ನಾತಕೋತ್ತರ ನಿಯಮಾವಳಿ (Regulation) ಯನ್ನು ಕೂಲಂಕುಷವಾಗಿ ಪರಿಶೀಲಿಸಿದ ಸಭೆಯು ಸದರಿ ಸ್ನಾತಕೋತ್ತರ ನಿಯಮಾವಳಿ (Regulation)ಅನ್ನು ಸಭೆಯು ಅನುಮೋದಿಸಿದೆ.

**➲ ಐಟಂ ನಂ. 03:**

ವಿಷಯ: ವಿಶ್ವವಿದ್ಯಾಲಯದ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಇಲಾಖೆಯ ಮಾರ್ಗಸೂಚಿಯಂತೆ ಸ್ನಾತಕ ಪ್ರೋಗ್ರಾಮ್ ವಿನ್ಯಾಸ (Curriculum Structure)ವನ್ನು 2021–22ನೇ ಶೈಕ್ಷಣಿಕ ಸಾಲಿನಿಂದ ಅಳವಡಿಸಿಕೊಳ್ಳುವ ಕುರಿತು.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ ಇಡಿ 260 ಯುಎನ್ಇ 2019 (ಭಾಗ–1) ದಿ. 07.08.2021.
2. ದಿನಾಂಕ. 01.09.2021 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ಸಂಖ್ಯೆ 03

****

ಉಲ್ಲೇಖ 1 ರ ಆದೇಶದ ಅನುಬಂಧ-02ರ ಸ್ನಾತಕ ಪ್ರೋಗ್ರಾಮ್ ವಿನ್ಯಾಸ (Curriculum Structure) ವನ್ನು 2021-22ನೇ ಶೈಕ್ಷಣಿಕ ಸಾಲಿನಿಂದ ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ Model Program Structures for the Under-Graduate Programs in Universities and Colleges in Karnataka ವನ್ನು ಸ್ನಾತಕ ಕೋರ್ಸ್‌ಗಳಲ್ಲಿ ಅಳವಡಿಸಿಕೊಳ್ಳಲು ಉಲ್ಲೇಖ-02ರನ್ವಯ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮತಿ ಪಡೆಯಲಾಗಿತ್ತು. ನಂತರ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 27.09.2021 ರಂದು ಜರುಗಿದ ಡೀನರ ಸಭೆಯಲ್ಲಿ ಸ್ನಾತಕ ಪದವಿಯ Model Program Structures ಪರಿಷ್ಕರಿಸಿ ಅನುಮೋದಿಸಿದ ಹಿನ್ನೆಲೆಯಲ್ಲಿ ಸದರಿ ಪರಿಷ್ಕೃತ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮರುಮಂಡಿಸಿದೆ.

<u>ತೀರ್ಮಾನ</u>

Model Program Structures ಕುರಿತಾಗಿ ಸುದೀರ್ಘವಾಗಿ ಚರ್ಚಿಸಿದ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 27.09.2021 ರಂದು ಜರುಗಿದ ಡೀನರ ಸಭೆಯಲ್ಲಿ ಸ್ನಾತಕ ಪದವಿಯ Model Program Structures ಪರಿಷ್ಕರಿಸಿ ಅನುಮೋದಿಸಿದ Structures ಅನ್ನು ಸಭೆಯು ಮರು ಅನುಮೋದಿಸಿತು. Structures ಅಲ್ಲಿ ಮುಂದಿನ ದಿನಗಳಲ್ಲಿಯೂ ಅವಶ್ಯಕ ಪರಿಷ್ಕರಣೆ ಕಂಡು ಬಂದಲ್ಲಿ ಪರಿಷ್ಕರಿಸಲು ಸಭೆಯು ಸೂಚಿಸಿದೆ.

➲ **ಐಟಂ ನಂ. 04:**

ವಿಷಯ: ಸ್ನಾತಕೋತ್ತರದ Model Program Structures ಅನುಮೋದನೆ ಕುರಿತು.

****

2021-22ನೇ ಶೈಕ್ಷಣಿಕ ಸಾಲಿಗೆ ರಾಷ್ಟ್ರೀಯ ಶಿಕ್ಷಣ ನೀತಿ (NEP 2020) ಮಾರ್ಗಸೂಚಿಗಳ ಅನುಸಾರ ಸ್ನಾತಕೋತ್ತರದ Model Program Structures ಸಿದ್ಧಪಡಿಸಿದ್ದು, ಸದರಿ Model Program Structures ಅನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

<u>ತೀರ್ಮಾನ</u>

ಸ್ನಾತಕೋತ್ತರ Model Program Structures ಕುರಿತಾಗಿ ಸುದೀರ್ಘವಾಗಿ ಚರ್ಚಿಸಿದ ಸಭೆಯು 2021-22ನೇ ಶೈಕ್ಷಣಿಕ ಸಾಲಿಗೆ ರಾಷ್ಟ್ರೀಯ ಶಿಕ್ಷಣ ನೀತಿ (NEP 2020) ಮಾರ್ಗಸೂಚಿಗಳ ಅನುಸಾರ ಸ್ನಾತಕೋತ್ತರಕ್ಕೂ Model Program Structures ಸಿದ್ಧಪಡಿಸಿರುವುದು ಗಮನಾರ್ಹ ಮತ್ತು ಪ್ರಶಂಸನೀಯ ವಿಷಯವಾಗಿರುವ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು. ಮುಂದುವರೆದು, ಸದರಿ Model Program Structures ಅಲ್ಲಿ ಮುಂದಿನ ದಿನಗಳಲ್ಲಿಯೂ ಅವಶ್ಯಕ ಪರಿಷ್ಕರಣೆ ಕಂಡು ಬಂದಲ್ಲಿ ಪರಿಷ್ಕರಿಸಲು ಸಭೆಯು ಸೂಚಿಸಿದೆ.

➲ **ಐಟಂ ನಂ. 05:**

ವಿಷಯ: ರಾಷ್ಟ್ರೀಯ ಶಿಕ್ಷಣ ನೀತಿ (NEP 2020) ಅನುಸಾರದ ಸ್ನಾತಕ ಪದವಿಯ
ಪಠ್ಯಕ್ರಮ ಅನುಮೋದನೆ ಕುರಿತು.

***

ರಾಷ್ಟ್ರೀಯ ಶಿಕ್ಷಣ ನೀತಿ (NEP 2020)ಯನ್ನು ದೇಶದಾದ್ಯಂತ ಜಾರಿ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದಲ್ಲಿಯೂ ಸ್ನಾತಕ ಪದವಿ ಅಧ್ಯಯನಕ್ಕಾಗಿ ರಾಷ್ಟ್ರೀಯ ಶಿಕ್ಷಣ ನೀತಿ (NEP 2020) ಅನುಷ್ಠಾನಗೊಳಿಸಲಾಗುತ್ತಿದೆ. ಎಲ್ಲಾ ಸ್ನಾತಕ ಪದವಿಯ ರಾಷ್ಟ್ರೀಯ ಶಿಕ್ಷಣ ನೀತಿ (NEP 2020)ಯ (Title's of the Papers) ವಿಷಯಯವಾರು ಶೀರ್ಷಿಕೆಗಳು ಮತ್ತು (Detail Syllabus) ವಿಷಯವಾರು ಪಠ್ಯಕ್ರಮ ವಿವರ ಅನ್ವಯ ಸ್ನಾತಕ ಪದವಿಯ ವಿಷಯವಾರು ಪಠ್ಯಕ್ರಮವನ್ನು ರಚಿಸಲಾಗಿದೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಎಲ್ಲಾ ಸ್ನಾತಕ ಪದವಿಯ ರಾಷ್ಟ್ರೀಯ ಶಿಕ್ಷಣ ನೀತಿ (NEP 2020)ಯ (Title's of the Papers) ವಿಷಯಯವಾರು ಶೀರ್ಷಿಕೆಗಳು ಮತ್ತು (Detail Syllabus) ವಿಷಯವಾರು ಪಠ್ಯಕ್ರಮ ವಿವರ ಅನ್ವಯ ಸ್ನಾತಕ ಪದವಿಯ ವಿಷಯವಾರು ಪಠ್ಯಕ್ರಮವನ್ನು ರಚಿಸದ ಕುರಿತು ಪರಿಶೀಲಿಸಿದ ಸಭೆಯು ಯಥಾವತ್ತಾಗಿ ಅನುಮೋದಿಸಿದೆ. ಮುಂದುವರೆದು, (Title's of the Papers) ವಿಷಯಯವಾರು ಶೀರ್ಷಿಕೆಗಳು ಮತ್ತು Detail Syllabus ವಿಷಯವಾರು ವಿವರ ಅಲ್ಲಿ ಮುಂದಿನ ದಿನಗಳಲ್ಲಿಯೂ ಅವಶ್ಯಕ ಪರಿಷ್ಕರಣೆ ಕಂಡು ಬಂದಲ್ಲಿ ಪರಿಷ್ಕರಿಸಲು ಸಭೆಯು ಸೂಚಿಸಿದೆ.

➲ **ಐಟಂ ನಂ. 06:**

ವಿಷಯ: ರಾಷ್ಟ್ರೀಯ ಶಿಕ್ಷಣ ನೀತಿ (NEP 2020) ಅನುಸಾರದ ಸ್ನಾತಕೋತ್ತರ ಪದವಿಯ ಪಠ್ಯಕ್ರಮ ಅನುಮೋದನೆ ಕುರಿತು.

***

ರಾಷ್ಟ್ರೀಯ ಶಿಕ್ಷಣ ನೀತಿ (NEP 2020)ಯನ್ನು ದೇಶದಾದ್ಯಂತ ಜಾರಿ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (NEP 2020)ಯ Title's of the Papers (ವಿಷಯಯವಾರು ಶೀರ್ಷಿಕೆಗಳು) ಮತ್ತು Detail Syllabus (ವಿಷಯವಾರು ವಿವರ) ಅನುಸಾರ ಸ್ನಾತಕೋತ್ತರ ಪದವಿಯ ವಿಷಯವಾರು ಪಠ್ಯಕ್ರಮವನ್ನು ರಚಿಸಲಾಗಿದೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

(Title's of the Papers) ವಿಷಯಯವಾರು ಶೀರ್ಷಿಕೆಗಳು ಮತ್ತು (Detail Syllabus) ವಿಷಯವಾರು ಪಠ್ಯಕ್ರಮ ವಿವರ ಅನ್ವಯ ಸ್ನಾತಕೋತ್ತರ ಪದವಿಯ ವಿಷಯವಾರು ಪಠ್ಯಕ್ರಮದ ರಚನೆಯ ಕುರಿತು ಪರಿಶೀಲಿಸಿದ ಸಭೆಯು ಯಥಾವತ್ತಾಗಿ ಅನುಮೋದಿಸಿದೆ.

➲ **ಐಟಂ ನಂ. 07:**

ವಿಷಯ: ಮ್ಯಾಥ್‌ವರ್ಕ್ ತಂತ್ರಾಂಶ (Mathwork Software) ಖರೀದಿ ಮತ್ತು ಆಡಳಿತಾತ್ಮಕ ಅನುಮೋದನೆಯ ಕುರಿತು.

*****

ವಿಶ್ವವಿದ್ಯಾನಿಲಯದ ಆಯ್ದ ಸ್ನಾತಕೋತ್ತರ ಪದವಿಯ ವಿಭಾಗಗಳ ನೂತನ ಪಠ್ಯಕ್ರಮ ಅನುಸಾರ ಪ್ರಾಯೋಗಿಕ ತರಗತಿಗಳಿಗೆ ಅನುಕೂಲವಾಗುವ ಮ್ಯಾಥ್‌ವರ್ಕ್ ತಂತ್ರಾಂಶ (Mathwork Software)ವನ್ನು ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿ ದೃಷ್ಟಿಯಿಂದ ಮ್ಯಾಥ್‌ವರ್ಕ್ ತಂತ್ರಾಂಶ (Mathwork Software)ದ ಖರೀದಿ ಅವಶ್ಯವಿರುವ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಖರೀದಿಯ ಸಮ್ಮತಿ ಹಾಗೂ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಸದರಿ ವಿಷಯವಾಗಿ ಸಭೆಯು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿಯ ವಿಭಾಗಗಳ ನೂತನ ಪಠ್ಯಕ್ರಮ ಅನುಸಾರ ಪ್ರಾಯೋಗಿಕ ತರಗತಿಗಳಿಗೆ ಅನುಕೂಲವಾಗುವ ಮ್ಯಾಥ್‌ವರ್ಕ್ ತಂತ್ರಾಂಶ (Mathwork Software)ವನ್ನು ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿ ದೃಷ್ಟಿಯಿಂದ ಮ್ಯಾಥ್‌ವರ್ಕ್ ತಂತ್ರಾಂಶ (Mathwork Software)ದ ಬಳಕೆ ಸಂಬಂಧ ಸಂಬಂದಿಸಿದ ಕಂಪನಿಯ ಜೊತೆ ಒಪ್ಪಂದ ಮಾಡಿಕೊಳ್ಳುವ ಸಂಬಂಧ ಸದರಿ ಫರ್ಮ್‌ವರನ್ನು ಆಹ್ವಾನಿಸಿ ತಂತ್ರಾಂಶದ ತರಬೇತಿ, ವಿನ್ಯಾಸ ಮತ್ತು ಉಪಯೋಗಗಳನ್ನು ಪ್ರಸ್ತುತತೆ (Presentation) ಮೂಲಕ ತಿಳಿಯಲು ಸಭೆಯು ಅನುಮೋದಿಸಿದೆ.

➲ ಐಟಂ ನಂ. **08:**

ವಿಷಯ: ಬಿ.ಕಾಂ ಪರೀಕ್ಷೆಗಳಿಗೆ ಸಂಬಂಧಿಸಿದ ಸತ್ಯಶೋಧನ ಸಮಿತಿ ವರದಿ ಮಂಡನೆ ಕುರಿತು.

****

2020–21ನೇ ಸಾಲಿನ ಆರನೇ ಸೆಮಿಸ್ಟರ್ ರೆಗ್ಯುಲರ್/ರಿಪೀಟರ್ಸ್ ಬಿ.ಕಾಂ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಉತ್ತರಗಳು ಜಾಲತಾಣದಲ್ಲಿ ಹರಿದಾಡಿ ಬಿ.ಕಾಂ ಪರೀಕ್ಷೆಗಳು ಸುಲಲಿತವಾಗಿ ನಡೆಯಲು ಸಮಸ್ಯೆಯಾದ ಕುರಿತು ವಿಶ್ವವಿದ್ಯಾಲಯ ಮಟ್ಟದ ಸತ್ಯಶೋಧನಾ ಸಮಿತಿ ರಚಿಸಲಾಗಿತ್ತು. ಸಮಿತಿಯು ದಿನಾಂಕ 28.09.2021 ರಂದು ತುರ್ತಾಗಿ ಸಭೆಯು ಪರಿಶೀಲನೆ ನಡೆಸಿ ವರದಿ ಸಲ್ಲಿದ್ದು, ಸದರಿ ವರದಿಯನ್ನು ಸಿಂಡಿಕೇಟ್ ಸಭೆಯ ಮುಂದಿನ ಕ್ರಮಗಳ ಶಿಫಾರಸ್ಸಿಗಾಗಿ ಸಲ್ಲಿಸಿದೆ.

## <u>ತೀರ್ಮಾನ</u>

2020–21ನೇ ಸಾಲಿನ ಆರನೇ ಸೆಮಿಸ್ಟರ್ ರೆಗ್ಯುಲರ್/ರಿಪೀಟರ್ಸ್ ಬಿ.ಕಾಂ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಉತ್ತರಗಳು ಜಾಲತಾಣದಲ್ಲಿ ಹರಿದಾಡಿದ ವಿಷಯ ಕುರಿತ ಸತ್ಯಶೋಧನಾ ಸಮಿತಿಯ ವರದಿಯನ್ನು ಪರಿಶೀಲನೆ ಮಾಡಿ ಗಂಭೀರವಾದ ಚರ್ಚೆ ನಂತರ ಸಭೆಯು ಈ ಕೆಳಗಿನ ನಿರ್ಧಾರಗಳನ್ನು ಕೈಗೊಂಡಿದೆ.

1. ಸಭೆಯಲ್ಲಿ ವರದಿಯನ್ನು ತಾತ್ವಿಕವಾಗಿ ಅಂಗಿಕರಿಸಲಾಯಿತು.
2. ವರದಿಯ ಪ್ರಕಾರ ಸದರಿ ಸಮಸ್ಯೆಗೆ ಕಾರಣಿಭೂತರಾದ ವಾಣಿಜ್ಯಶಾಸ್ತ್ರ ವಿಭಾಗದ ಸ್ನಾತಕ ಪರೀಕ್ಷಾ ಮಂಡಳಿ ಅಧ್ಯಕ್ಷರು/ಸದಸ್ಯರುಗಳನ್ನು (ಡಾ. ಬಸವರಾಜ, ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರುಗುಪ್ಪ ಇವರನ್ನು ಹೊರತುಪಡಿಸಿ) ವಿಶ್ವವಿದ್ಯಾಲಯದ ಕಪ್ಪುಪಟ್ಟಿಗೆ ಸೇರಿಸುವುದು.
3. ಮ್ಯಾನೇಜಮೆಂಟ್, ಅಕೌಂಟಿಂಗ್ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿ, ಅವುಗಳ ವಿವರವನ್ನು ವಿದ್ಯಾರ್ಥಿಗಳಿಗೆ ನೀಡಿದ ಶ್ರೀ. ನಾಗರಾಜ ಬೊಮ್ಮನಾಳ, ವಿಜಯನಗರ ಕಾಲೇಜು, ಹೊಸಪೇಟೆ ಇವರನ್ನು ಸಹ ಕಪ್ಪುಪಟ್ಟಿಗೆ ಸೇರಿಸುವುದು.
4. ವಾಣಿಜ್ಯಶಾಸ್ತ್ರ ವಿಭಾಗದ ಸ್ನಾತಕ ಪರೀಕ್ಷಾ ಮಂಡಳಿ ಅಧ್ಯಕ್ಷರು/ಸದಸ್ಯರುಗಳನ್ನು ಮತ್ತು ಶ್ರೀ. ನಾಗರಾಜ ಬೊಮ್ಮನಾಳ, ವಿಜಯನಗರ ಕಾಲೇಜು, ಹೊಸಪೇಟೆ ಇವರು ಎಸಗಿದ ಅಕ್ಷಮ್ಯ ಅಪರಾದ ಕುರಿತು ಸೂಕ್ತ ಕ್ರಮಕೈಗೊಳ್ಳಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಪತ್ರ ಬರೆಯುವುದು.
5. ವಾಣಿಜ್ಯಶಾಸ್ತ್ರ ವಿಭಾಗದ ಪರೀಕ್ಷೆಯ ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಆಯ್ದ ಪ್ರಶ್ನೆಗಳನ್ನು ಲಿಖಿತ ರೂಪದಲ್ಲಿ ಜಾಲತಾಣಕ್ಕೆ ಬಿಡುಗಡೆ ಮಾಡಿ ಸಾಮಾಜಿಕ ಮಾಧ್ಯಮಗಳ ಮೂಲಕ ಗೊಂದಲ ಸೃಷ್ಟಿಸಿದ ವ್ಯಕ್ತಿಗಳನ್ನು ಪತ್ತೆಹಚ್ಚುವ ಕ್ರಮಕೈಗೊಳ್ಳಲು ಸೈಬರ್ ಅಪರಾಧ ವಿಭಾಗಕ್ಕೆ ದೂರು ಸಲ್ಲಿಸುವುದು.
6. ವಾಣಿಜ್ಯಶಾಸ್ತ್ರ ವಿಭಾಗದ ಮೂರು ಆಯ್ದ ಪರೀಕ್ಷೆಗಳನ್ನು ಆಯೋಜಿಸಲು ಉಂಟಾದ ಒಟ್ಟಾರೆ ವೆಚ್ಚವನ್ನು ಪರೀಕ್ಷಾ ಮಂಡಳಿಯ ಅಧ್ಯಕ್ಷರು/ಸದಸ್ಯರುಗಳನ್ನು ಮತ್ತು ಶ್ರೀ. ನಾಗರಾಜ ಬೊಮ್ಮನಾಳ್ಳ, ವಿಜಯನಗರ ಕಾಲೇಜು, ಹೊಸಪೇಟೆ ಇವರುಗಳಿಂದ ವಸೂಲು ಮಾಡುವುದು. ಮುಂದುವರೆದು ಸದರಿಯವರಿಗೆ ದಂಡ ವಿಧಿಸುವ ಕುರಿತು ಮುಂದಿನ ಸಿಂಡಕೇಟ್ ಸಭೆಯಲ್ಲಿ ನಿರ್ಧರಿಸುದು.
7. ಮುಂದೆ ಈ ತರಹದ ಪ್ರಕರಣಗಳು ಪನರಾವರ್ತನೆಯಾಗದಂತೆ ತಡೆಗಟ್ಟಲು ಪ್ರಶ್ನೆಪತ್ರಿಕೆ ತಯಾರಿಕೆ ಸಿದ್ಧತೆ ಮತ್ತು ಗೌಪ್ಯತೆಯನ್ನು ಕಾಪಾಡುವ ಸಲುವಾಗಿ ನಿಯಮಾವಳಿ (Regulations) ಗಳನ್ನು ಸಿದ್ಧಗೊಳಿಸಲು ವಿಶೇಷ ಸಮಿತಿಯನ್ನು ರಚಿಸುವುದು. ಸದರಿ ಸಮಿತಿಯು ಆದೇಶವಾದ 20 ದಿನಗಳಲ್ಲಿ ತನ್ನ ವರದಿಯನ್ನು ಸಲ್ಲಿಸುವುದು.

**ಟೇಬಲ್ ಅಜೆಂಡಾ**

**ಐಟಂ ಸಂಖ್ಯೆ 01**

ವಿಷಯ: 2021–22ನೇ ಸಾಲಿನ ಸ್ನಾತಕ ಮಹಾವಿದ್ಯಾಲಯಗಳ ಸ್ಥಳೀಯ ಪರಿಶೀಲನಾ ಸಮಿತಿಗಳ ಸಂಯೋಜನಾ ವರದಿಗಳ ಅನುಮೋದನೆ ಕುರಿತು.

*****

2021–22ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಹೊಸದಾಗಿ ಕಾಲೇಜು ಪ್ರಾರಂಭಿಸಲಿರುವ ಸರ್ಕಾರಿ ಪ್ರಥಮ ದರ್ಜೆ ಸಂಜೆ ಕಾಲೇಜು, ಬಳ್ಳಾರಿ ಹಾಗೂ ಮುಂದುವರಿಕೆ ಸಂಯೋಜನೆಗಾಗಿ ಜ್ಞಾನ ಸಂಗಮ ಗುರುಕುಲ ಮಹಾವಿದ್ಯಾಲಯ, ಗಂಗಾವತಿ ಈ ಎರಡು ಮಹಾವಿದ್ಯಾಲಯಗಳ Consolidated score and Recommendation reportನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**<u>ತೀರ್ಮಾನ</u>**

2021–22ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಹೊಸದಾಗಿ ಕಾಲೇಜು ಪ್ರಾರಂಭಿಸಲು ಅರ್ಜಿ ಸಲ್ಲಿಸಿದ ಸರ್ಕಾರಿ ಪ್ರಥಮ ದರ್ಜೆ ಸಂಜೆ ಕಾಲೇಜು, ಬಳ್ಳಾರಿ ಇದು ನಿಗದಿತ (45) ಕ್ಕಿಂತ ಹೆಚ್ಚಿನ ಅಂಕಗಳಿಸಿದ ಸದರಿ ಅರ್ಜಿಯನ್ನು ಸರಕಾರದ ಅನುಮೋದನೆಗೆ ಕಳುಹಿಸಲು ಸಭೆಯು ನಿರ್ಧರಿಸಿದೆ.

ಅದೆ ರೀತಿ ಜ್ಞಾನ ಸಂಗಮ ಗುರುಕುಲ ಮಹಾವಿದ್ಯಾಲಯ, ಗಂಗಾವತಿ ಕಾಲೇಜು ಸಂಯೋನಾ ಮುಂದುವರಿಕೆಗೆ ಸಲ್ಲಿಸಿದ ಅರ್ಜಿಗೆ ನಿಗದಿತ ಅಂಕ (45) ಕ್ಕಿಂತ ಕಡಿಮೆ ಅಂಕ ಗಳಿಸಿದ ಕಾರಣ ನಿಗದಿತ 45 ಅಂಕಗಳನ್ನು ಗಳಿಸಲು ಅವಶ್ಯವಿರುವ ಸೌಲಭ್ಯಗಳನ್ನು ಒದಗಿಸಿದ ಅನುಪಾಲನ ವರದಿಯನ್ನು ಸಲ್ಲಿಸಲು ಸೂಚಿಸಿ ಮುಂದುವರಿಕೆಗೆ ಸಭೆಯು ಅನುಮೋದಿಸಿದೆ.

**ಐಟಂ ಸಂ. 02:**

ವಿಷಯ: ಪರೀಕ್ಷೆಗಳಲ್ಲಿ ಅಕ್ರಮ ಎಸಗಿದ ವಿದ್ಯಾರ್ಥಿಗಳ ಎಂ.ಪಿ.ಸಿ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು.

****

ದಿನಾಂಕ: 23.09.2021 ರಂದು ಜರುಗಿದ 2020–21ನೇ ಸಾಲಿನ ಸ್ನಾತಕ 1, 3 ಮತ್ತು 5ನೇ ಸೆಮಿಸ್ಟರ್‌ಗಳ ಹಾಗೂ 2019–20ನೇ ಸಾಲಿನ ಬಿ.ಇಡಿ 2 ಮತ್ತು 4ನೇ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಅಕ್ರಮ ಎಸಗಿದ ವಿದ್ಯಾರ್ಥಿಗಳ ಎಂ.ಪಿ.ಸಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**<u>ತೀರ್ಮಾನ</u>**

2020–21ನೇ ಸಾಲಿನ ಸ್ನಾತಕ 1, 3 ಮತ್ತು 5ನೇ ಸೆಮಿಸ್ಟರ್‌ಗಳ ಹಾಗೂ 2019–20ನೇ ಸಾಲಿನ ಬಿ.ಇಡಿ 2 ಮತ್ತು 4ನೇ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಅಕ್ರಮ ಎಸಗಿದ ವಿದ್ಯಾರ್ಥಿಗಳ ಎಂ.ಪಿ.ಸಿ ಸಭೆಯಲ್ಲಿನ ಪರೀಕ್ಷಾ ಕೈಪಿಡಿ ನಿಯಮಾವಳಿ ಆರ್–2 ಕಂಡಿಕೆ ಕ್ರ.ಸಂ4 ರನ್ವಯ ಸದರಿ ವಿದ್ಯಾರ್ಥಿಗಳಿಗೆ ಮುಂಬರುವ ಒಂದು ಪರೀಕ್ಷೆಗೆ (ಪುನರಾವರ್ತಿತ ವಿದ್ಯಾರ್ಥಿಗಳ ಸಹಿತ) ನಿರ್ಬಂಧ ಹಾಗೂ ರೂ. 500/– ದಂಡ ವಿಧಿಸುವ ಜೊತೆ ಜುಲೈ/ಆಗಷ್ಟ–2021ರ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ನಿಲಂಬಿತಗೊಳಿಸಲಾಗಿದೆ.

ಮುಂದುವರೆದು, ವಿಚಾರಣಾ ಸಭೆಗೆ ಗೈರು ಹಾಜರಾದ ವಿದ್ಯಾರ್ಥಿಗಳಿಗೆ ರೂ. 5,000/– ಗಳ ಬದಲಾಗಿ ಸಿಂಡಿಕೇಟ್ ಸಭೆಯ ನಿರ್ಧಾರದಂತೆ ರೂ. 3,000/–ಗಳ ದಂಡ ವಿಧಿಸಲು ಸಭೆಯು ತೀರ್ಮಾನಿಸಿದೆ. ಇನ್ನುಳಿದಂತೆ ಬಿ.ಇಡಿ ವಿದ್ಯಾರ್ಥಿಗಳ ಕುರಿತಾಗಿ ಈ ಕೆಳಗಿನಂತೆ ತೀರ್ಮಾನ ಕೈಗೊಳ್ಳಲಾಗಿದೆ.

1. ಕೆ. ಅಮ್ರೀನ್ ಬಾನು– ಉತ್ತರ ಪತ್ರಿಕೆಗಳಲ್ಲಿ ಹೆಸರು ಇತ್ಯಾದಿ ವಿವರಗಳನ್ನು ನಮೂದಿಸಿರುವುದು ಆಕ್ಷೇಪರ್ಹವಾಗಿರುವುದರಿಂದ ಈ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡದಿರಲು ನಿರ್ಧರಿಸಲಾಗಿದೆ. ಆದ್ದರಿಂದ ವಿದ್ಯಾರ್ಥಿನಿಯು ಮುಂಬರುವ 2ನೇ ಸಮಿಸ್ಟರ್‌ನಲ್ಲಿ ಥಿಯರಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುತ್ತದೆ ಹಾಗೂ 3ನೆ ಸೆಮಿಸ್ಟರ್ ಪ್ರವೇಶಾತಿಗೆ ಕಡ್ಡಾಯವಾಗಿ ವಿಶ್ವವಿದ್ಯಾಲಯದ ಅನುಮತಿ ಪಡೆಯಬೇಕಾಗಿದೆ. ಪರೀಕ್ಷಾ ಕೈಪಿಡಿ ನಿಯಮಾವಳಿ ಆರ್–2 ಕ್ರ.ಸಂ

20ರನ್ವಯ ಸದರಿ ವಿದ್ಯಾರ್ಥಿಗೆ ಪ್ರತಿ ಪತ್ರಿಕೆಗೆ 1,000/- ದಂತೆ ಒಟ್ಟು ನಾಲ್ಕು ಪತ್ರಿಕೆಗಳಿಗೆ 4,000/- ರೂ ದಂಡ ವಿಧಿಸಲಾಗಿದೆ.

2. ಮರಿಸ್ವಾಮಿ- ಉತ್ತರ ಪತ್ರಿಕೆಯನ್ನು ಮೌಲ್ಯಮಾಪನ ಮಾಡಿ ಪರಿಣಾಮ ಘೋಷಣೆ ಮಾಡಲಾಗುತ್ತದೆ. ಪರೀಕ್ಷಾ ಕೈಪಿಡಿ ನಿಯಮಾವಳಿ ಆರ್-2 ಕ್ರ.ಸಂ 4ರನ್ವಯ ಸದರಿ ವಿದ್ಯಾರ್ಥಿಗೆ ರೂ. 500/- ದಂಡ ವಿಧಿಸಲಾಗಿದೆ.

ಮೇಲ್ಕಂಡ ಎಲ್ಲಾ ಎಂ.ಪಿ.ಸಿ ಸಭೆಯ ಕ್ರಮಗಳನ್ನು ಸಭೆಯು ಸಹ ಅನುಮೋದಿಸಿದೆ.

ಮುಂದುವರೆದು, ಪರೀಕ್ಷಾ ಅಕ್ರಮ ನಿಯಮಾವಳಿಗಳಲ್ಲಿ ಸಾಕಷ್ಟೂ ಬದಲಾವಣೆ ತರುವ ಅಗತ್ಯತೆ ಕುರಿತು ಚರ್ಚಿಸಿದ ಸಭೆಯು ಈ ಕುರಿತು ವಿಶ್ವವಿದ್ಯಾಲಯ ಮಟ್ಟದ ಸಮಿತಿಯೊಂದನ್ನು ರಚಿಸಲು ನಿರ್ಧಾರ ಕೈಗೊಂಡಿದೆ. ಈ ಸಮಿತಿಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯ ಅನುಮೊದನೆಯೊಂದಿಗೆ ಪರೀಕ್ಷಾ ಕೈಪಿಡಿಯಲ್ಲಿ ಸೇರಿಸಲು ಸಭೆಯು ಸಲಹೆ ನೀಡಿದೆ.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105

ಕುಲಸಚಿವರು


ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2021–22/**1634** ದಿನಾಂಕ: 07.12.2021

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ 12.10.2021 ರಂದು ಬೆಳಿಗ್ಗೆ 11.30 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.
ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 25.10.2021

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ 12.10.2021 ರಂದು ಬೆಳಿಗ್ಗೆ 11.30 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ: ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು(ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 12.10.2021 ರಂದು ಬೆಳಿಗ್ಗೆ 11.30 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿ

➲ ಐಟಂ ನಂ. **01:**

ವಿಷಯ: ಮ್ಯಾಥ್‌ವರ್ಕ್ ತಂತ್ರಾಂಶ (Mathwork Software) ದ ಫರ್ಮ್ ಜೊತೆ ಒಪ್ಪಂದದ ಅನುಮೋದನೆ ಕುರಿತು.

ಉಲ್ಲೇಖ: ದಿ. 01.10.2021 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ತೀರ್ಮಾನ ಸಂಖ್ಯೆ 07

*****

ದಿನಾಂಕ 01.10.2021 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ 07ರ ತೀರ್ಮಾನದಂತೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿಯ ವಿಭಾಗಗಳ ನೂತನ ಪಠ್ಯಕ್ರಮ ಅನುಸಾರ ಪ್ರಾಯೋಗಿಕ ತರಗತಿಗಳಿಗೆ ಸಹಕಾರಿಯಾಗುವ ಮ್ಯಾಥ್‌ವರ್ಕ್ ತಂತ್ರಾಂಶ (Mathwork Software) ದ ಪ್ರಸ್ತುತತೆ (Presentation) ಆಯೋಜಿಸಲಾಗಿದ್ದು, ತಂತ್ರಾಂಶದ ತರಬೇತಿ, ವಿನ್ಯಾಸ ಮತ್ತು ಉಪಯೋಗವನ್ನು ತಿಳಿದುಕೊಂಡ ನಂತರ ಸಭೆಯಲ್ಲಿ ಚರ್ಚಿಸಿ ತಂತ್ರಾಂಶದ ಫರ್ಮ್‌ನ ಜೊತೆ ಒಪ್ಪಂದ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

<u>ತೀರ್ಮಾನ</u>

ಮ್ಯಾಥ್‌ವರ್ಕ್ ತಂತ್ರಾಂಶ (Mathwork Software)ದ ಪ್ರಸ್ತುತತೆ (Presentation) ಯನ್ನು ಸಂಪೂರ್ಣವಾಗಿ ಗಮನಿಸಿದ ಸಭೆಯು ವಿದ್ಯಾರ್ಥಿ/ಶಿಕ್ಷಕರಿಗೆ ಮ್ಯಾಥ್‌ವರ್ಕ್ ತಂತ್ರಾಂಶ ಅನುಕೂಲಕರವಾಗಿರುವ ಹಿನ್ನೆಲೆಯಲ್ಲಿ ಸದರಿ ತಂತ್ರಾಂಶವನ್ನು ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳಲು ಸಭೆಯು ಅನುಮೋದಿಸಿದೆ. ಮುಂದುವರೆದು, ತಂತ್ರಾಂಶದ ತರಬೇತಿ ಮತ್ತು ಅವಧಿ ಕುರಿತ ಸ್ವವಿವರ ಪ್ರಸ್ತಾವನೆಯನ್ನು ಪಡೆದು ಖರೀದಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿದೆ.

➲ ಐಟಂ ನಂ. **02:**

ವಿಷಯ: 9ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಗೌರವ ಡಾಕ್ಟರೇಟ್ ಪದವಿ ನೀಡಲು ಆಯ್ಕೆ ಸಮಿತಿಗೆ ವಿಶ್ವವಿದ್ಯಾಲಯದ ಸದಸ್ಯರೋರ್ವರನ್ನು ನಾಮನಿರ್ದೇಶನ ಹಾಗೂ ಗೌರವ ಡಾಕ್ಟರೇಟ್ ಪದವಿಗಾಗಿ ಸೂಕ್ತ ಸಾಧಕರ ಸ್ವವಿವರ ಪಡೆಯುವ ಕುರಿತು.

ಉಲ್ಲೇಖ: ಕರ್ನಾಟಕ ರಾಜ್ಯಪಾಲರ ಸಚಿವಾಲಯ ಸುತ್ತೋಲೆ ಸಂಖ್ಯೆ: GS 02 GUM 2016 Dt: 18.2.2016

*****

ವಿಶ್ವವಿದ್ಯಾಲಯದ 9ನೇ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು ಮುಂಬರುವ ನವೆಂಬರ್/ಡಿಸೆಂಬರ್–2021ರಲ್ಲಿ ಆಯೋಜಿಸಲಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಕಲೆ, ಸಾಹಿತ್ಯ, ರಂಗಭೂಮಿ, ವಿಜ್ಞಾನ ಮತ್ತು ತಂತ್ರಜ್ಞಾನ, ಶಿಕ್ಷಣ, ಸಮಾಜಸೇವೆ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಗಣ್ಯರನ್ನು ಗುರುತಿಸಿ ಗೌರವ ಡಾಕ್ಟರೇಟ್ ಪದವಿ ನೀಡಲು ತಜ್ಞರ ಪರಿಶೀಲನಾ ಸಮಿತಿಗೆ ವಿಶ್ವವಿದ್ಯಾಲಯದ ವತಿಯಿಂದ ಸದಸ್ಯರೋರ್ವರ

ನಾಮನಿರ್ದೇಶನ ಹಾಗೂ ಗೌರವ ಡಾಕ್ಟರೇಟ್ ಪದವಿಗಾಗಿ ಸಾಧಕರ ಸ್ವವಿರಗಳನ್ನು ಪಡೆಯುವ ಕುರಿತು ಚರ್ಚೆ ಮತ್ತು ನಿರ್ಧಾರಕ್ಕಾಗಿ ಸಿಂಡಿಕೇಟ್ ಸಭೆಗೆ ಸಲ್ಲಿಸಿದೆ.

ತೀರ್ಮಾನ

ವಿಶ್ವವಿದ್ಯಾಲಯದ 9ನೇ ವಾರ್ಷಿಕ ಘಟಿಕೋತ್ಸವದ ಗೌರವ ಡಾಕ್ಟರೇಟ್ ಪದವಿ ನೀಡಲು ತಜ್ಞರ ಪರಿಶೀಲನಾ ಸಮಿತಿಗೆ ಡಾ. ಮೀನಾ ಚಂದಾವರ್ಕರ್, ವಿಶ್ರಾಂತ ಕುಲಪತಿಗಳು, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ಇವರನ್ನು ವಿಶ್ವವಿದ್ಯಾಲಯದ ನಾಮನಿರ್ದೇಶಿತ ಸದಸ್ಯರನ್ನಾಗಿ ಆಯ್ಕೆ ಮಾಡಲು ರಾಜಭವನಕ್ಕೆ ಸಲ್ಲಿಸಲು ತೀರ್ಮಾನಿಸಿದೆ. ಮುಂದುವರೆದು, ಗೌರವ ಡಾಕ್ಟರೇಟ್ ಪದವಿಗಾಗಿ ಸಾಧಕರ ಸ್ವವಿವರಗಳನ್ನು ದಿನಾಂಕ 23.10.2021ರ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾಗುವ ವಿವಿಧ ಕ್ಷೇತ್ರಗಳ ಸಾಧಕರ ಸ್ವವಿವರಗಳನ್ನು ಪರಿಶೀಲನೆಗೆ ಪರಿಗಣಿಸಲು ಸಭೆಯು ತೀರ್ಮಾನಿಸಿದೆ.

**ಟೇಬಲ್ ಅಜೆಂಡಾ**

**ಐಟಂ ಸಂಖ್ಯೆ 01**

**ವಿಷಯ:** ಬಿ.ಕಾಂ ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಸಿದ್ಧತೆಯಲ್ಲಿ ಅಕ್ರಮ ಎಸಗಿದ ಸಿಬ್ಬಂದಿಗೆ ದಂಡ ವಿಧಿಸುವ ಕುರಿತು.

**ಉಲ್ಲೇಖ:** ದಿನಾಂಕ: 01.10.2021ರಂದು ಜರುಗಿದ ಸಿಂಡಿಕೇಟ್ ಸಭೆಯ ಐಟಂ ನಂ–8ರ ನಡಾವಳಿ.

****

2020–21ನೇ ಶೈಕ್ಷಣಿಕ ಸಾಲಿನ 6ನೇ ಸೆಮಿಸ್ಟರ್ ರೆಗುಲರ್/ರಿಪೀಟರ್ಸ್ ಬಿ.ಕಾಂ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಆಯ್ದ ವಿಷಯಗಳ ಉತ್ತರಗಳು ಮತ್ತು ಪ್ರಶ್ನೆಗಳು ಜಾಲತಾಣದಲ್ಲಿ ಹರಿದಾಡಿ ಸಮಸ್ಯೆ ಸೃಷ್ಟಿಯಾದ ಕುರಿತು ರಚಿಸಲಾದ ವಿಶ್ವವಿದ್ಯಾಲಯದ ಸತ್ಯಶೋಧನಾ ಸಮಿತಿಯ ವರದಿಯನ್ನು ದಿನಾಂಕ: 01.10.2021ರ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಪ್ರಶ್ನೆ ಪತ್ರಿಕೆ ಸಿದ್ಧತೆಯಲ್ಲಿ ಹಾಗೂ ಅದರ ಗೌಪ್ಯತೆ ಕಾಪಾಡುವಲ್ಲಿ ನಿರ್ಲಕ್ಷ್ಯ ತೋರಿದ ಪರೀಕ್ಷಾ ಮಂಡಳಿಯ ಅಧ್ಯಕ್ಷರು, ಸದಸ್ಯರುಗಳು ಮತ್ತು ನಿಶ್ಚಿತ ವಿಷಯ ಒಂದರ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿದ ಶ್ರೀ. ನಾಗರಾಜ್ ಬೊಮ್ಮನಾಳ್ ಇವರಿಗೆ ಸೂಕ್ತ ದಂಡ ವಿಧಿಸುವ ಕುರಿತು ಸಿಂಡಿಕೇಟ್ ಸಭೆಯ ತೀರ್ಮಾನಕ್ಕಾಗಿ ಸಲ್ಲಿಸಿದೆ.

ತೀರ್ಮಾನ

ಬಿ.ಕಾಂ ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಸಿದ್ಧತೆಯಲ್ಲಿ ಹಾಗೂ ಅದರ ಗೌಪ್ಯತೆ ಕಾಪಾಡುವಲ್ಲಿ ನಿರ್ಲಕ್ಷ್ಯ ತೋರಿದ ಪರೀಕ್ಷಾ ಮಂಡಳಿಯ ಅಧ್ಯಕ್ಷರು, ಸದಸ್ಯರುಗಳು ಮತ್ತು ನಿಶ್ಚಿತ ವಿಷಯ ಒಂದರ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿದ ಶ್ರೀ. ನಾಗರಾಜ್ ಬೊಮ್ಮನಾಳ್ ಇವರಿಗೆ ಸೂಕ್ತ ದಂಡ ವಿಧಿಸುವ ಕುರಿತು ಗಂಭೀರವಾಗಿ ಚರ್ಚಿಸಿದ ಸಭೆಯು, ವಾಣಿಜ್ಯಶಾಸ್ತ್ರ ವಿಭಾಗದ ಮೂರು ಆಯ್ದ ಪರೀಕ್ಷೆಗಳನ್ನು ಆಯೋಜಿಸಲು ಉಂಟಾದ ಒಟ್ಟಾರೆ ಅಂದಾಜು ವೆಚ್ಚ ರೂ. 4,26,000/– ಗಳಾಗಿರುತ್ತದೆ. ಆದ್ದರಿಂದ ಈ ಮೊತ್ತವನ್ನು ಬಿ.ಕಾಂ ಪರೀಕ್ಷಾ ಮಂಡಳಿಯ ಅಧ್ಯಕ್ಷರು/ಸದಸ್ಯರನ್ನು ಮತ್ತು ಶ್ರೀ. ನಾಗರಾಜ ಬೊಮ್ಮನಾಳ್ಳ, ವಿಜಯನಗರ ಕಾಲೇಜು, ಹೊಸಪೇಟೆ ಇವರುಗಳಿಗೆ ತಲಾ ರೂ. 1,00,000/– ಗಳನ್ನು ದಂಡವಾಗಿ ವಿಧಿಸಲು ಸಭೆಯು ನಿರ್ಧರಿಸಿದೆ. ಮುಂದುವರೆದು, ಈ ದಂಡ ಪಾವತಿಸಲು ಒಂದು ತಿಂಗಳ ಗಡುವು ನೀಡಲು ಮತ್ತು ಈ ತರನಾಗಿ ಯಾವುದೇ ಪತ್ರ ವ್ಯವಹಾರಕ್ಕೆ ಆಸ್ಪದ ನೀಡದಿರಲು ಸಭೆಯು ತೀರ್ಮಾನಿಸಿದೆ.

**ಐಟಂ ಸಂಖ್ಯೆ 02**

**ವಿಷಯ:** ಬಿ.ಕಾಂ 6ನೇ ಸೆಮಿಸ್ಟರ್ ಪರಿಷ್ಕೃತ ವೇಳಾಪಟ್ಟಿಯಂತೆ ನಡೆದ ದಿನಾಂಕ: 09.10.2021ರ ಪರೀಕ್ಷೆಯಲ್ಲಿ ಹಳೆ ಮತ್ತು ಹೊಸ ಪ್ರಶ್ನೆ ಪತ್ರಿಕೆಗಳನ್ನು ವಿತರಿಸಿದ ಕುರಿತು.

**ಉಲ್ಲೇಖ:** ಶ್ರೀಮತಿ. ಲಲಿತಾಭಾವಿಕಟ್ಟಿ, ಪ್ರಾಚಾರ್ಯರು HRMS Arts College, Gangavathi.

****

ಬಿ.ಕಾಂ 6ನೇ ಸೆಮಿಸ್ಟರ್ ಪರಿಷ್ಕೃತ ವೇಳಾಪಟ್ಟಿಯಂತೆ ನಡೆದ ದಿನಾಂಕ: 09.10.2021 ರಂದು ಮಧ್ಯಾಹ್ನ ನಡೆದ Financial Services (QP 37630) ವಿಷಯ ಕುರಿತು ಪರೀಕ್ಷಾ ಕೇಂದ್ರ ಸಂಖ್ಯೆ 2161 (HRMS Arts College, Gangavathi)ಯಲ್ಲಿ ಪರೀಕ್ಷೆಗೆ ಹಾಜರಾದ 100 ವಿದ್ಯಾರ್ಥಿಗಳಲ್ಲಿ 68 ವಿದ್ಯಾರ್ಥಿಗಳಿಗೆ ಹಳೆಯ ಪ್ರಶ್ನೆ ಪತ್ರಿಕೆಯನ್ನು ಉಳಿದವರಿಗೆ ನೂತನವಾಗಿ ಸಿದ್ಧಪಡಿಸಿದ ಪ್ರಶ್ನೆ ಪತ್ರಿಕೆಯನ್ನು ಹಂಚಲಾಗಿದೆ. ಹೀಗಾಗಿ ಒಂದೇ ವಿಷಯಕ್ಕೆ ಬೇರೆ ಬೇರೆ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಪ್ರಶ್ನೆ ಪತ್ರಿಕೆ ನೀಡಿ ಗೊಂದಲ ಸೃಷ್ಟಿಸಲಾಗಿದೆ. ಈ ಉತ್ತರ ಪತ್ರಿಕೆಗಳ ಮೌಲ್ಯಮಾಪನದ ಸಮಸ್ಯೆ ಕುರಿತು ಸೂಕ್ತ ಮಾರ್ಗದರ್ಶನ ಹಾಗೂ ನಿರ್ದೇಶನಕ್ಕಾಗಿ ಸಿಂಡಿಕೇಟ್ ಸಭೆಗೆ ಸಲ್ಲಿಸಿದೆ.

<u>ತೀರ್ಮಾನ</u>

ಸದರಿ ವಿಷಯದ ಕುರಿತು ಕೂಲಂಕುಷವಾಗಿ ಚರ್ಚಿಸಿದ ಸಭೆಯು ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಒಟ್ಟಾರೆ ಹಳೆಯ ಪ್ರಶ್ನೆ ಪತ್ರಿಕೆ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಸಂಖ್ಯೆ ಕೇವಲ 68 ಆಗಿದ್ದು ಹಾಗೂ ಈ ಕುರಿತು ವಿದ್ಯಾರ್ಥಿಗಳಿಂದ ಆಕ್ಷೇಪಣೆ/ವಿಜ್ಞಾಪನೆ ಪತ್ರ ಸಲ್ಲಿಕೆಯಾಗದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಪರಿಗಣಿಸಿ ಅದೇ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ಪರಿಣಾಮ ಘೋಷಿಸಲು ಸಭೆಯು ತೀರ್ಮಾನಿಸಿದೆ.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ